ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಫೆಬ್ರವರಿ 2020, ಬೆಲೆ ರೂ. 5/-

**ಶ್ರೀನಿವಾಸ ಮಂಗಾಪುರಂ**
**ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ**
**ವಾರ್ಷಿಕ ಬ್ರಹ್ಮೋತ್ಸವಗಳು**
**14-02-2020 ರಿಂದ**
**22-02-2020 ರ ವರೆಗೆ**



# ಶ್ರೀನಿವಾಸ ಮಂಗಾಪುರಂ ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ವಾರ್ಷಿಕ ಬ್ರಹ್ಮೋತ್ಸವಗಳು

**14-02-2020 ರಿಂದ**
**22-02-2020 ರ ವರೆಗೆ**





**14-02-2020 ಶುಕ್ರವಾರ**
ಹಗಲು: ಧ್ವಜಾರೋಹಣೆ
ರಾತ್ರಿ: ದೊಡ್ಡಶೇಷವಾಹನ

**15-02-2020 ಶನಿವಾರ**
ಹಗಲು: ಚಿಕ್ಕಶೇಷವಾಹನ
ರಾತ್ರಿ: ಹಂಸವಾಹನ

**16-02-2020 ಭಾನುವಾರ**
ಹಗಲು: ಸಿಂಹವಾಹನ
ರಾತ್ರಿ: ಮುತ್ತಿನ ಚಪ್ಪರ ವಾಹನ

**17-02-2020 ಸೋಮವಾರ**
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಸರ್ವಭೂಪಾಲವಾಹನ

**18-02-2020 ಮಂಗಳವಾರ**
ಹಗಲು:
ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ
ರಾತ್ರಿ: ಗರುಡವಾಹನ

**19-02-2020 ಬುಧವಾರ**
ಹಗಲು: ಹನುಮದ್ವಾಹನ
ಸಾಯಂಕಾಲ: ವಸಂತೋತ್ಸವ
ರಾತ್ರಿ: ಗಜವಾಹನ

**20-02-2020 ಗುರುವಾರ**
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ

**21-02-2020 ಶುಕ್ರವಾರ**
ಹಗಲು: ರಥೋತ್ಸವ
ರಾತ್ರಿ: ಅಶ್ವವಾಹನ


**22-02-2020 ಶನಿವಾರ**
ಹಗಲು: ಚಕ್ರಸ್ನಾನ
ರಾತ್ರಿ: ಧ್ವಜಾವರೋಹಣ

# ಭಗವದ್ಗೀತೆ



ಅಸ್ಮಾಕಂ ತು ವಿಶಿಷ್ಟಾಯೇ  ತಾನ್ನಿಬೋಧ ದ್ವಿಜೋತ್ತಮ।
ನಾಯಕಾ ಮಮ ಸೈನ್ಯಸ್ಯ ಸಂಜ್ಞಾರ್ಥಂ ತಾನ್ಬ್ರವೀಮಿತೇ॥
(ಶ್ರೀ ಮದ್ಭಗವದ್ಗೀತೆ ಅಧ್ಯಾಯ - 1, ಶ್ಲೋಕ - 7)

ಬ್ರಾಹ್ಮಣ ಶ್ರೇಷ್ಠರೇ, ನಮ್ಮ ಕಡೆಯಲ್ಲಿರುವ ವೀರರನ್ನು ನೆನಪಿಗೆ ತಂದು ಕೊಳ್ಳಿ, ತಮಗೆ ನೆನಪಾಗಲೆಂದು ಅವರ ಹೆಸರುಗಳನ್ನು ಹೇಳುತ್ತೇನೆ.




ವೆಂಕಟಾಚಲ ನಿಲಯಂ। ವೈಕುಂಠ ಪುರವಾಸಂ
ಪಂಕಜನೇತ್ರಂ ಪರಮ ಪವಿತ್ರಂ
ಶಂಖಚಕ್ರಧರ ಚಿನ್ಮಯರೂಪಂ
ಅಂಬುಜೋದ್ಭವ ವಿನುತಂ। ಅಗಣಿತ ಗುಣಧಾಮಂ॥
ತುಂಬುರುನಾರದ ಗಾನ ವಿಲೋಲಂ।
ಅಂಬುಧಿಶಯನಂ ಆತ್ಮಾಭಿರಾಮಂ॥
ಪಾಹಿ ಪಾಂಡವಪಕ್ಷಂ ಕೌರವಮದಹರಣಂ॥
ಬಾಹು ಪರಾಕ್ರಮ ಪೂರ್ಣಂ।
ಅಹಲ್ಯಾಶಾಪಭಯ ನಿವಾರಣಂ॥
ಸಕಲವೇದ ವಿಚಾರಂ ಸರ್ವಜೀವನಿಕರಂ
ಮಕರ ಕುಂಡಲಧರ ಮದನ ಗೋಪಾಲಂ
ಭಕುತ  ಪೋಷಕ ಶ್ರೀ ಪುರಂದರ ವಿಠಲಂ

- ಶ್ರೀ ಪುರಂದರದಾಸರು

(ಐದನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

ಆಜ್ಞಾಂ ಖ್ಯಾತಿಂ ಧನ ಮನುಚರಾನಾಧಿರಾಜ್ಯಾದಿಕಂ ವಾ ಕಾಲೇ ದೃಷ್ಟ್ವಾ ಕಮಲವಸತೇ ರಪ್ಯಕಿಂಚತ್ಕರಾಣಿ।
ಪದ್ಮಾಕಾನ್ತಂ ಪ್ರಣಿಹಿತವತೀಂ ಪಾಲನೇಽನನ್ಯ ಸಾಧ್ಯೇ ಸಾರಾಭಿಜ್ಞಾ ಜಗತಿ ಕೃತಿನಸ್ಸಂಶ್ರಯನ್ತೇ ದಯೇ ತ್ವಾಮ್॥ ೪೧

ಹಿಂದಿನ ದಶಕದ ಕೊನೆಯ ಪದ್ಯದಲ್ಲಿ ಶ್ರೀನಿವಾಸನ ದಯೆಯ ಉತ್ಕರ್ಷವೂ ಇತರರ ದಯೆಯ ನಿಕರ್ಷವೂ ಪ್ರಸ್ತಾಪಿಸಲ್ಪಟ್ಟಿತು. ಈ ದಶಕದಲ್ಲಿ ಕುಲಶೇಖರಾಳ್ವಾರ್ ಮೊದಲಾದ ಮಹನೀಯರ ಸೂಕ್ತಿಗಳ ಅನುಭವಪರೀವಾಹ (ಕೋಡಿ) ರೂಪವಾಗಿ ಅವರುಗಳು ಹೇಳಿರುವ ರೀತಿಯಲ್ಲಿ ಆ ದಯೆಯ ಉತ್ಕರ್ಷವು ಹೇಳಲ್ಪಡುವ್ವುದು. ಹಿಂದಿನ ದಶಕದಲ್ಲಿ ತಿರುಮಲೆಯಲ್ಲಿನ ವಾಸವು ಪ್ರಾರ್ಥಿಸಲ್ಪಟ್ಟಿತು. ಈ ದಶಕದಲ್ಲಿ ಅಲ್ಲಿಯೇ ಜನ್ಮವು ಪ್ರಾರ್ಥಿಸಲ್ಪಡುವುದು. ಹಿಂದಿನ ಪದ್ಯದಲ್ಲಿ ದೇವತಾಂತರ ದಯೆಯನ್ನು ಆಶ್ರಯಿಸುವವರು ಪರಿಹಾಸ್ಯಮಾಡಲ್ಪಟ್ಟರು. ಈ ಪದ್ಯದಲ್ಲಿ ಶ್ರೀನಿವಾಸನ ದಯೆಯನ್ನು ಆಶ್ರಯಿಸುವ ಸಾರಜ್ಞರಾದ ಭಾಗ್ಯವಂತರು ಹೊಗಳಲ್ಪಡುವರು. ಲೋಕದಲ್ಲಿ ಸಾರವನ್ನು ಬಲ್ಲವರಾಗಿಯೂ ಆದರಿಂದಲೇ ಭಾಗ್ಯವಂತರೆಂದು ಹೇಳಲ್ಪಡುವ ಆಳ್ವಾರುಗಳಂತವರು ಶ್ರೀನಿವಾಸನ ದಯೆಯನ್ನೇ ಆಶ್ರಯಿಸುತ್ತಾರೆ. ಇವರಿಗೆ ಪ್ರಾಪ್ಯಳಾದವಳೂ ಅವಳೇ ಪುರುಷಕಾರಭೂತಳಾದ ಶ್ರೀದೇವಿಯೊಡನೆ ಇರುವ ಪರಮಪುರುಷನನ್ನು ಚೇತನ ಸಂರಕ್ಷಣದಲ್ಲಿ ಸರ್ವದಾ ನಿಯಮಿಸುವ ಅವಳನ್ನು ಬಿಟ್ಟು ಇತರನ್ನು ಆಶ್ರಯಿಸಿದರೆ ಅವರಿಗೆ ಅಪೇಕ್ಷಿತವಾದ ಫಲವು ದೊರಕಲಾರದು. “ನಹಿ ಪಾಲನಸಾಮರ್ಥ್ಯಂ ಯತೇ ಸರ್ವೇಶ್ವರಂ ಹರಿಮ್” ಎಂದೂ,

“ನ ಸಂಪದಾಂ ಸಮಾಹಾರೇ ವಿಪದಾಂ ವಿನಿವರ್ತನೇ।

ಸಮರ್ಥೋ ದೃಶ್ಯತೇ ಕಶ್ಚಿತ್ತಂ ವಿನಾ ಪುರುಷೋತ್ತಮಮ್॥”

ಎಂದೂ ಪ್ರಸಿದ್ಧವಾಗಿರುವ ಪ್ರಮಾಣಗಳಂತೆ ಸಾಮಾನ್ಯವಾದ ಲೌಕಿಕ ಪಾಲನವೇ ಸರ್ವೇಶ್ವರನಾದ ಶ್ರೀನಿವಾಸನ ಅಧೀನವೆಂದು ಸಿದ್ಧವಾಗಿರುವಾಗ, ಪಾಲನಶಬ್ಧಕ್ಕೆ ಮುಖ್ಯಾರ್ಥವಾದ ಮೋಕ್ಷ ಪ್ರದಾನವೆಂಬ ಪ್ರಧಾನವಾದ ಪಾಲನವು ಆ ಪರಮ ಪುರುಷನಲ್ಲದೆ ಮತ್ತೊಂದು ವ್ಯಕ್ತಿಗೆ ಮನಸ್ಸಿನಿಂದ ಸ್ಮರಿಸಲೂ ಯೋಗ್ಯವಾದುದಲ್ಲ. ಆದ್ದರಿಂದ, ಅವರು ದೊಡ್ಡ ದೊಡ್ಡ ಪದವಿಗಳಲ್ಲಿ ಅಧಿಕಾರಗಳನ್ನು ನಡೆಸುವ ಬ್ರಹ್ಮ ರುದ್ರೇಂದ್ರಾದಿಗಳಿಗೂ ಒಂದು ಸಮಯ ವಿಶೇಷದಲ್ಲಿ - ಅಂದರೆ, ಅವರು ಮಾಡಿದ ಪುಣ್ಯವು ಮುಗಿದು ತಮ್ಮ ಪದವಿಗಳಿಂದ ಚ್ಯುತರಾಗುವಸಮಯದಲ್ಲಿ, ಅವರಿಗೆ ಹಿಂದೆ ಇದ್ದಂಥ ಆಜ್ಞೆ. ಯಶಸ್ಸು, ಧನ ಅನುಚರರು, ಸಾರ್ವಭೌಮಸಂಪತ್ತುಗಳೇ ಮೊದಲಾದವು ಸ್ವಲ್ಪವೂ ಪ್ರಯೋಜನವನ್ನುಂಟುಮಾಡದೆ ಅಪ್ರಯೋಜಕಗಳಾಗಿ ಆಗುವುದು ಮಾತ್ರವೇ ಅಲ್ಲದೆ ವಿರುದ್ಧವಾದ ಉಪದ್ರವಗಳನ್ನೂ ಉಂಟುಮಾಡುವ ರೀತಿಯನ್ನು ಅನೇಕ ವ್ಯಕ್ತಿಗಳಲ್ಲಿ ಕಂಡು ಅನುಭವಿಸಿ, ಆ ಪದವಿಗಳಲ್ಲಿರುವ ದೋಷಗಳನ್ನು ಪರಿಶೀಲಿಸಿ, ಅಂತಹ ದೋಷಗಳಿಗೆ ಸ್ವಲ್ಪವೂ ಅವಕಾಶಕೊಡದಂತಹ ಪರಮಪುರುಷನ ದಯೆಯನ್ನೇ ಉಪಾಯವನ್ನಾಗಿಯೂ, ಉಪೇಯವನ್ನಾಗಿಯೂ ಆಶ್ರಯಿಸುವರು. ಮುಮುಕ್ಷಗಳಾದ ಪರಮೈಕಾಂತಿಗಳಿಗೆ ಪ್ರಧಾನವಾದ ಪ್ರಾಪ್ಯವು ಭಗವನ್ಮುಖೋಲ್ಲಾಸವೇ (ಭಗವಂತನ ದಯೆಯೇ) ಅದಕ್ಕೆ ಉಪಾಯವೂ ಅವನ ದಯೆಯೇ. ಇಂತಹ ಶಾಸ್ತ್ರಾರ್ಥವನ್ನು ಅರಿತವರೇ ಸಾರಜ್ಞರು; ಅವರೇ ಭಾಗ್ಯವಂತರು. ಆಳ್ವಾರುಗಳೇ ಮೊದಲಾದವರು ಈ ಪಂಥಕ್ಕೆ ಸೇರಿದವರೇ. ಹೀಗೆ ಇಲ್ಲಿ ಭಗವದ್ದಯೆಯನ್ನು ಆಶ್ರಯಿಸುವವರನ್ನು ಹೊಗಳುವ ವ್ಯಾಜದಿಂದ ಭಗವದ್ದೆಯೆಗಿರುವ ಶ್ರೇಷ್ಠತೆಯು ಸೂಚಿಸಲ್ಪಟ್ಟಿತು.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ
ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಶ್ರೀ ವಿಕಾರಿನಾಮ ಸಂವತ್ಸರ ಮಾಘ-ಫಾಲ್ಗುಣ ಮಾಸ ಸಂಚಿಕೆ

ಸಂಪುಟ - 50 ಫೆಬ್ರವರಿ 2020 ಸಂಚಿಕೆ - 9



## ವಿಷಯಸೂಚಿಕೆ

ಸಂಪಾದಕೀಯ 6
ಹಸಿರುತೋರಣ
'ತಂ ಸೂರ್ಯಂ ಪ್ರಣಮಾಮ್ಯಹಂ" 7
- ವಿ. ಸ್ವಯಂಪ್ರಕಾಶಂ
ಭಗವಂತನು ದೇವಕಿಯ ಗರ್ಭಪ್ರವೇಶ 12
- ಶ್ರೀಮತಿ. ಸುಧಾಮಧುಸೂದನ್
ಗೋಕರ್ಣದ ಮಹಾಬಲೇಶ್ವರ 14
- ಶ್ರೀಮತಿ.ಸೂರ್ಯವಂಶಿ
ತೈತ್ತಿರೀಯೋಪನಿಷತ್ 17
- ಶ್ರೀಮತಿ. ಎ. ಗೀತಾ ವೀರರಾಘವನ್
ತಿರುಪತಿ ಶ್ರೀವೆಂಕಟೇಶ್ವರ 19
- ಡಿ॥ ಬಿ.ಎನ್.ಶ್ರೀನಿವಾಸನ್
ಆರೋಗ್ಯಕ್ಕಾಗಿ ಮೆಂತ್ಯ 21
- ಶ್ರೀಮತಿ
ಇಂದ್ರನ ಗರ್ವಭಂಗ 23
- ಡಿ.ಎಸ್. ಬದ್ರಿನಾಥ್
ಪುಸ್ತಕ ವಿಮರ್ಶೆ 25
- ಪ್ರಣವ
ಆಚಾರ್ಯ ಮಧ್ವ - ಮನುಕುಲತಿಲಕ 31
-ಡಾ॥ ಗುರುರಾಜ ಪೋಶೆಟ್ಟಿ ಹಳ್ಳಿ
ಶ್ರೀ ಕಲ್ಯಾಣ ವೆಂಕಟೇಶ್ವರಸ್ವಾಮಿ ಶ್ರೀನಿವಾಸಮಂಗಾಪುರಂ 37
- ಶ್ರೀಮತಿ ಭಾರತಿ ರಘುನಾಥ್
ಸಂಸ್ಕೃತ ಕಲಿಯೋಣ! 40
- ಡಾ॥ ಸಮುದ್ರಾಲ ಲಕ್ಷ್ಮಣಯ್ಯ & ಕಿರಣ್‌ಭಟ್
ಶಿವ ಚಿಂತನೆ! 41
- ಎಸ್. ವೆಂಕಟರಾಘವನ್
ಮಾಘ ಮಾಸದ ಮಹಿಮೆ 44
- ಶ್ರೀಮತಿ. ಸುಮನ ಬದರೀನಾಥ್
ದಿವ್ಯಕ್ಷೇತ್ರ ತಿರುಮಲೆ 49
- ಶ್ರೀಮತಿ. ಬಿ. ಪದ್ಮಜ
ದೈವಿಗುಣಗಳಿಂದ ದುಃಖರಾಹಿತ್ಯ 51
- ಡಿ.ಎಸ್. ಭೂಮಿಕ

ಮುಖಚಿತ್ರ - ಶ್ರೀ ದೇವಿ ಭೂದೇವಿ ಸಮೇತ ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರು (ಶ್ರೀನಿವಾಸಮಂಗಾಪುರ)
ಹಿಂಬದಿಚಿತ್ರ - ಶ್ರೀ ಕಪಿಲೇಶ್ವರ ಸ್ವಾಮಿಯವರ ನಂದಿವಾಹನ ಸೇವೆ (ಕಪಿಲತೀರ್ಥ, ತಿರುಪತಿ)

**ಗೌರವ ಸಂಪಾದಕರು**
ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ,ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ ಆರ್.ವಿ. ವಿಜಯಕುಮಾರ್, ಬಿ.ಎ.ಬಿ.ಇಡಿ.,
ಉಪಕಾರ್ಯನಿರ್ವಹಣಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@tirumala.org
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು www.tirumala.org ಮೂಲಕ ವೀಕ್ಷಿಸಬಹುದು.

| | | |
|---|---|---|
| ಬಿಡಿ ಪ್ರತಿ | ರೂ. | 05/- |
| ವಾರ್ಷಿಕ ಚಂದಾ | ರೂ. | 60/- |
| ಆಜೀವ ಚಂದಾ | ರೂ. | 500/- |
| ವಿದೇಶಿ ವಾರ್ಷಿಕ ಚಂದಾ | ರೂ. | 850/- |

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

## ಸಂಪಾದಕೀಯ

# ಸಕಲಜೀವರಾಶಿಗಳ ಜೀವನಾಡಿ ಸೂರ್ಯನಾರಾಯಣ!!

ಆದಿತ್ಯನಾ ಮಹಾಂ ವಿಷ್ಣುಃ ಜ್ಯೋತಿಷಾಂ ರವಿರಂಶಮಾನ್ - ಸೂರ್ಯಮಂಡಲಾಧೀಶನು, ಆದಿತ್ಯನೂ ಸಹ ನಾನೇ ಎಂದು ಭಗವದ್ಗೀತೆಯಲ್ಲಿ ಶ್ರೀ ಕೃಷ್ಣಪರಮಾತ್ಮನು ಹೇಳಿದ್ದಾನೆ.

ಅಪೂರ್ವವಾದ ತೇಜಸ್ಸು, ಬೆಳಕು, ಕಾಂತಿಯ ಬಗೆಗೆ ಹೇಳಬೇಕೆಂದರೆ ಸೂರ್ಯನೇ ನಮಗೆ ಅತ್ಯುತ್ತಮವಾದ ಪ್ರಮಾಣ. ಆದ್ದರಿಂದಲೇ ಅನಂತವಾದ ವಾಙ್ಮಯಪ್ರಪಂಚದಲ್ಲಿ ಕೋಟಿಸೂರ್ಯಪ್ರಭಾವನೆಂದೂ, ಸಹಸ್ರಸೂರ್ಯಕಿರಣ ತೇಜೋ ವಿರಾಜಿತನೆಂದು ಶ್ರೀಮನ್ನಾರಾಯಣನು ಎಲ್ಲರಿಂದಲೂ ಸ್ತುತಿಸಲ್ಪಡುತ್ತಿದ್ದಾನೆ.

"ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ" ಎನ್ನುವಂತೆ ಎಲ್ಲಾ ಲೋಕಗಳಿಗೂ ಸೂರ್ಯನು ನೇತ್ರದಂತಹವನು. ಪ್ರಪಂಚವೆಲ್ಲಾ ಸಹಸ್ರಕಿರಣನಾದ ಭಾಸ್ಕರನಿಂದಲೇ ಪ್ರಕಾಶಿಸುತ್ತಿದೆ. ನೋಡುವಂತಹಾ ಕಣ್ಣುಗಳಿದ್ದರೂ ನೋಡಿಸುವಂತಹಾ ಬೆಳಕು ಇದ್ದರೇನೇ ಅದಕ್ಕೆ ಬೆಲೆ ಅಲ್ಲವೇ!! ಆದ್ದರಿಂದಲೇ ಪ್ರಪಂಚಕ್ಕೆಲ್ಲಾ ಬೆಳಕನ್ನು ಪ್ರಸಾದಿಸಿ ಅನಂತವಾದ ಪ್ರಕೃತಿಯನ್ನು, ಅದ್ಭುತವಾದ ಭಗವತ್ಸೃಷ್ಟಿಯನ್ನು ತೋರುತ್ತಿರುವ ಸೂರ್ಯನು ಜಗತ್ತಿನ ನೇತ್ರವಾಗಿ, ವಿರಾಟಪುರುಷನಾದ ಭಗವಂತನ ನಯನಗಳಂತೆ ಸ್ತುತಿಸಲ್ಪಡುತ್ತಿದ್ದಾನೆ.

ವಿಶ್ವಾಂತರಾಳದಲ್ಲಿ ಅನಂತಜ್ಯೋತಿಶ್ಚಕ್ರದಂತೆ ಪ್ರಕಾಶಿಸುತ್ತಾ, ಸಮಸ್ತಗ್ರಹಗಳನ್ನು ತನ್ನ ಸುತ್ತಲೂ ಪರಭ್ರಮಿಸುವಂತೆ ಮಾಡುತ್ತಾ ಹಗಲು, ರಾತ್ರಿ, ಪಕ್ಷಗಳು, ತಿಂಗಳುಗಳು, ಋತುಗಳು, ಅಯನಗಳು, ವರ್ಷಗಳನ್ನು ಸೃಜಿಸುತ್ತಾ, ಮಹತ್ತರವಾದ ಕಾಲಸ್ವರೂಪವನ್ನು ಪ್ರತೀಕ್ಷಣವೂ ದರ್ಶಿಸುತ್ತಿರುವ ಪ್ರತ್ಯಕ್ಷದೈವ ಈ ಸೂರ್ಯಭಗವಾನ್.

ಐಶ್ವರ್ಯವನ್ನು, ಆರೋಗ್ಯವನ್ನು, ಸಂತಾನವನ್ನು, ವಿದ್ಯೆಗಳನ್ನು ವಿಜಯಗಳನ್ನು - ಹೀಗೆ ಎಲ್ಲವನ್ನೂ ಪ್ರಸಾದಿಸಿ ಇನ್ನು ತಾನು ನೀಡುವುದಕ್ಕೆ ಏನೂ ಉಳಿದಿಲ್ಲವೆಂದು ನಿರೂಪಿಸಿಕೊಂಡ ಸರ್ವಸಿದ್ಧಿಪ್ರದಾತ ಈ ದಿವಾಕರ. ಪ್ರತಿನಿತ್ಯ ಬ್ರಾಹ್ಮೀಮುಹೂರ್ತದಲ್ಲಿ ಉಪಾಸಿಸಲ್ಪಡುತ್ತಾ, ತನ್ನ ಉದಯದ ಮೂಲಕ, ಎಲ್ಲಾ ಚರಾಚರ ವಸುಗಳೆಲ್ಲವನ್ನೂ ಎಚ್ಚರಗೊಳಿಸುತ್ತಾ ನಿತ್ಯವೂ ಎಲ್ಲಾ ಜೀವಿಗಳನ್ನೂ ಜಾಗರೂಕಗೊಳಿಸುತ್ತಾ, ತನ್ನ ಚಲನೆಯ ಮೂಲಕ ಪ್ರಕೃತಿಯಲ್ಲಿ ಸಮತೋಲನೆಯನ್ನು ಪರಿರಕ್ಷಿಸುತ್ತಾ ಲೋಕಕ್ಕೆಲ್ಲಾ ಕಣ್ಣಿನಂತೆ, ಕರ್ಮಸಾಕ್ಷಿಯಾಗಿ ತನ್ನ ವಿಧಿಯನ್ನು ತಾನು ನಿರ್ವಹಿಸುತ್ತಾ, ಕಾಲವನ್ನು ಮೀರುವುದು ಯಾರಿಂದಲೂ ಸಾಧ್ಯವಿಲ್ಲ ಎಂದು ಸಾರುತ್ತಾ ಕಾಲಗಮನವನ್ನು , ಕಾಲತತ್ತ್ವನ್ನು ಪ್ರತೀಕ್ಷಣವೂ ದರ್ಶಿಸುತ್ತಾ ಅನುಗ್ರಹಿಸುತ್ತಿರುವ ಲೋಕಬಾಂಧವ ಈ ಸೂರ್ಯನಾರಾಯಣ ಸ್ವಾಮಿ.

ಅನಂತ ತೇಜೋವಿರಾಜಿತರಾಗಿ, ಸಕಲ ದೇವತಾಸ್ವರೂಪನಾಗಿ ಪ್ರತ್ಯಕ್ಷವಾಗಿ ಕಂಡು ಬರುವ ಶ್ರೀ ಸೂರ್ಯಭಗವಾನನ್ನು ಅನೇಕರು ಅನೇಕ ರೀತಿಯಲ್ಲಿ ಅರ್ಚಿಸಿ ಇಷ್ಟಾರ್ಥಸಿದ್ಧಿಯನ್ನು ಪಡೆದಿದ್ದಾರೆ.

ಕಲಿಯುಗ ಭೂಲೋಕ ವೈಕುಂಠವಾಸನಾದ ಶ್ರೀವೇಂಕಟೇಶ್ವರಸ್ವಾಮಿಯು ಭಾಸ್ಕರನನ್ನು ಅರ್ಚಿಸಿ ಶ್ರೀ ಮಹಾಲಕ್ಷ್ಮಿಯನ್ನು ಪಡೆದ. ಕುಂತೀದೇವಿ ಸಹಜಕವಚಕುಂಡಲಗಳಿಂದ ವಿರಾಜಿತನಾದ ಕರ್ಣನನ್ನು ಪುತ್ರನನ್ನಾಗಿ ಪಡೆದಳು. ಧರ್ಮರಾಜನು ಅರಣ್ಯವಾಸದ ಸಮಯದಲ್ಲಿ ಸೂರ್ಯನಾರಾಯಣನನ್ನು ಆರಾಧಿಸಿ ಆಹಾರಸಮಸ್ಯೆಯನ್ನು ತೀರಿಸುವ ಅಕ್ಷಯ ಪಾತ್ರೆಯನ್ನು ಪಡೆದುಕೊಂಡ. ರಾಮಭಕ್ತಾಗ್ರೇಸರನು, ಭವಿಷ್ಯದ್ಬ್ರಹ್ಮ, ಚಿರಂಜೀವಿಯಾದ ಆಂಜನೇಯಸ್ವಾಮಿಯು ಸೂರ್ಯನ ಬಳಿಯೇ ವಿದ್ಯೆಯನ್ನು ಅಭ್ಯಸಿಸಿದ. ಶ್ರೀರಾಮನು ಸೂರ್ಯನನ್ನು ಆರಾಧಿಸಿ ಯುದ್ಧದಲ್ಲಿ ವಿಜಯಲಕ್ಷ್ಮಿಯನ್ನು ಒಲಿಸಿಕೊಂಡ. ಸತ್ರಾಜಿತ್ತು ಸೂರ್ಯೋಪಾಸನೆಯನ್ನು ಮಾಡುವುದರ ಮೂಲಕ ಬಂಗಾರವನ್ನು ಸುರಿಸುವ ಶಮಂತಕಮಣಿಯನ್ನು ಪಡೆದುಕೊಂಡ. ಯಾಜ್ಞವಲ್ಕ್ಯ ಮಹಾಮುನಿ ಸೂರ್ಯನಿಂದಲೇ ಶುಕ್ಲಯಜುರ್ವೇದವನ್ನು ಸೃಷ್ಟಿಸಿದ.

ಸೂರ್ಯನಾರಾಯಣನು ಸೂರ್ಯಜಯಂತಿಯೆಂದು ಪರಿಗಣಿಸಲ್ಪಡುವ ರಥಸಪ್ತಮಿಯಿಂದ ಉತ್ತರದಿಕ್ಕಿನ ಮೂಲಕ ತನ್ನ ರಥವನ್ನು ನಡೆಸುತ್ತಾ, ಉತ್ತರೋತ್ತರ, ಉತ್ತಮೋತ್ತಮವಾದ ಗತಿಯನ್ನು ಪ್ರಸಾದಿಸಲೆಂದು ಕಾಲಸ್ವರೂಪನಾದ ಸೂರ್ಯಭಗವಾನನ್ನು ಆರಾಧಿಸೋಣ. ಸಕಲ ಅಭೀಷ್ಟೆಗಳನ್ನು ನಮ್ಮದಾಗಿಸಿಕೊಳ್ಳೋಣ.

ಹಸಿರುತೋರಣ

# 'ತಂ ಸೂರ್ಯಂ ಪ್ರಣಮಾಮ್ಯಹಂ"

(ರಥ ಸಪ್ತಮಿ ಪ್ರಯುಕ್ತ)

- ವಿ. ಸ್ವಯಂಪ್ರಕಾಶಂ

ಸೌರಮಂಡಲದಲ್ಲಿರುವ ನವಗ್ರಹಗಳಿಗೆ ಸೂರ್ಯನಾರಾಯಣ ಅಧಿಪತಿ. ಗ್ರಹಗಳಿಗೆ ಕಾಂತಿ ಮತ್ತು ಶಕ್ತಿ ಕೊಡುವವರು ಸೂರ್ಯದೇವರು. ತೇಜೋಮಯವಾದ ಕಿರಣಗಳಿಂದ ಕಣ್ಣಿಗೆ ಕಾಣುವ ಪ್ರತ್ಯಕ್ಷ ದೈವ ಶ್ರೀ ಸೂರ್ಯನಾರಾಯಣ. ಸ್ವರ್ಣಮಯ ರಥದಲ್ಲಿ ಸಪ್ತ ಕುದುರೆಗಳಿಂದ ಚಲಿಸುವ ರಥ ಸೂರ್ಯ ರಥ. ಕಾಲಗತಿ ಸೂರ್ಯದೇವರಿಂದ ನಿರ್ಣಯಿಸಲಾಗುವುದು.ಸೂರ್ಯದೇವರು ಸಾಕ್ಷಾತ್ ಪರಮಾತ್ಮನಾದ ಶ್ರೀಮನ್ನಾರಾಯಣ ಪ್ರತೀಕ. ಭುವನ ಬ್ರಹ್ಮಾಂಡಕ್ಕೆ ಕೇಂದ್ರ ಬಿಂದು. ಸ್ಥೂಲವಾದ ಕಾಲಕ್ಕೆ ನಿಯಾಮಕರು. ವಿಶ್ವದ ಪೋಷಕ, ಪ್ರಾಣದಾತ, ಮತ್ತು ಚರಾಚರ ಪ್ರಾಣಕೋಟಿಗೆ ಆಧಾರ.

"ಆದಿ ದೇವ ನಮಸ್ತುಭ್ಯಮ್ ಪ್ರಸೀದ ಮಮ ಭಾಸ್ಕರ ದಿವಾಕರ ನಮಸ್ತುಭ್ಯಮ್ ಪ್ರಭಾಕರ ನಮೋಸ್ತುತೇ"

"ಸಪ್ತಾಶ್ವ ರಥ ಮಾರೂಢಂ ಪ್ರಚಂಡಂ ಕಶ್ಯಪಾತ್ಮಜಂ ಶ್ವೇತ ಪದ್ಮಧರಂ ದೇವಂ ತಂ ಸೂರ್ಯಂ ಪ್ರಣಮಾಮ್ಯಹಂ"

ಆದಿದೇವ ಸೂರ್ಯ ಭಗವಂತನಿಗೆ ನಮಸ್ಕಾರ! ಉದಯ ಭಾನು ಎನ್ನ ರಕ್ಷಿಸಲಿ! ದೈನಂದಿನ ಕಾರ್ಯ ಮೊದಲಾಗುವುದು ಕತ್ತಲಿಂದ ಹೊರ ಬಂದು ಸೂರ್ಯನ ಪ್ರಕಾಶ ಭುವಿಗೆ ತಾಕಿದನಂತರ. ದಿನದ ಆರಂಭ ಸೂರ್ಯೋದಯದ ನಂತರ. ದಿನದ ಅಧಿಪತಿಗೆ ನಮಸ್ಕಾರ! ಪ್ರಕಾಶ ಸ್ವರೂಪಗೆ ನಮಸ್ಕಾರ! ಸೂರ್ಯನ ಬೆಳಕಿನಿಂದ ಭುವಿಯಲ್ಲಿ ಮಾನವ,ವೃಕ್ಷ ಪಶು ಪಕ್ಷಿಗಳೆಲ್ಲ ಜೀವಿಸಬಲ್ಲವು. ಸೂರ್ಯ ರಶ್ಮಿ ಇಲ್ಲದೆ ಜೀವವಿಲ್ಲ. ಭೂಮಿ ಭ್ರಮಣದಿಂದ ಹಗಲು ಮತ್ತು ರಾತ್ರಿ ಉಂಟಾಗುವುದು. ದಿನ, ವಾರ, ಋತು, ವರ್ಷಗಳ ಗಣನೆಗೆ ಮತ್ತು ಭುವಿಯಲ್ಲಿ ಜೀವಕೋಟಿಗೆ ಆಧಾರ ಸೂರ್ಯ ಚಂದ್ರರು. ಸೂರ್ಯನ ಪ್ರಕಾಶಮಾನ ಚಂದ್ರನಿಂದ ಭುವಿಗೆ ತಂಪನ್ನು ಸಾರುವುದು. ಸೂರ್ಯ ಚಂದ್ರರು ಪ್ರತ್ಯಕ್ಷವಾಗಿ ಭುವಿಯಲ್ಲಿ ಜೀವಕೋಟಿಗೆ ಆಧಾರವಾಗಿರುವರು. ಮಕರ ಸಂಕ್ರಮಣದಿಂದ ಕರ್ಕಾಟಕ ಸಂಕ್ರಮಣದವರೆಗಿನ ಆರು ತಿಂಗಳು ಉತ್ತರಾಯಣ ಕರ್ಕಾಟಕ ಸಂಕ್ರಮಣದಿಂದ ಮಕರ ಸಂಕ್ರಮಣದವರೆಗಿನ ಆರು ತಿಂಗಳು ದಕ್ಷಿಣಾಯನ.ಸೂರ್ಯ ಉತ್ತರಕ್ಕೆ ಸಾರುವ ಸಮಯ ಉತ್ತರಾಯಣ ಕಾಲ. ದೇವದೇವತೆಗಳಿಗೆ ಉತ್ತರಾಯಣವು ಹಗಲು ದಕ್ಷಿಣಾಯನವು ರಾತ್ರಿ.

**ಸೂರ್ಯದೇವರ ಜನನ**

ಕಶ್ಯಪ ಪ್ರಜಾಪತಿ ಬ್ರಹ್ಮ ಮಾನಸ ಪುತ್ರರು. ದಕ್ಷ ಪ್ರಜಾಪತಿಯ ಸುಪುತ್ರಿ ಅದಿತಿ, ಕಶ್ಯಪರನ್ನು ಮದುವೆ ಆದರು. ಕಶ್ಯಪರ ಮತ್ತು ಅದಿತಿ ದೇವಿಯ ಸುಪುತ್ರರು ವಿವಸ್ವಂತರು. ಇವರೇ ಸೂರ್ಯ ದೇವರು. ತ್ವಷ್ಟರ ಸುಪುತ್ರಿ ಸಂಜ್ಞಾದೇವಿಯನ್ನು ಸೂರ್ಯದೇವರು ವಿವಾಹ ಮಾಡಿಕೊಂಡರು. ಸೂರ್ಯದೇವರ ಸಂತಾನ ವೈವಸ್ವತರು (ಮನುವು), ಶ್ರಾದ್ಧದೇವರು, ಯಮ ಮತ್ತು ಯಮುನಾ ಅವಳ ಜವಳಿ ಮಕ್ಕಳು. ಸಂಜ್ಞಾದೇವಿಯ ಮತ್ತೊಂದು ರೂಪ ಛಾಯಾ ದೇವಿ. ಸೂರ್ಯದೇವರು ಮತ್ತು ಛಾಯಾದೇವಿಯ ಮಕ್ಕಳು ಸಾವರ್ಣರು,ಶನಿ ದೇವರು. ಈಗ ನಡೆಯುವದು ವೈವಸ್ವತ ಮನ್ವಂತರ,ಮುಂಬರುವುದು ಸಾವರ್ಣ ಮನ್ವಂತರ. ಯಮರು ದಕ್ಷಿಣ ದಿಕ್ಪಾಲಕರಾದರು. ಶನಿ ದೇವರು ಗ್ರಹವಾದರು. ಯಮುನಾ ದೇವಿ ಭೂಲೋಕದಲ್ಲಿ ನದಿ ಅದರು. ಶ್ರಾದ್ಧ ದೇವರು ಪಿತೃ ಲೋಕಕಕೆ ಅಧಿಪತಿ ಆದರು.

**ರಥ ಸಪ್ತಮಿ**

ಅದಿತಿ ಪುತ್ರ ಆದಿತ್ಯ.ಸೌರ ಕುಟುಂಬದಲ್ಲಿ ಮೊದಲು ಜನ್ಮತಾಳಿದವರು. ಮಾಘಮಾಸದ ಶುಕ್ಲ ಪಕ್ಷ ಪುಣ್ಯ ತಿಥಿಯಂದು ಸೂರ್ಯದೇವರ ಜನನ. ಭುವಿಗೆ ಮೊದಲನೆಯ ದರುಶನ ನೀಡಿದ ದಿನ, ಅದೇ ಸೂರ್ಯಜಯಂತಿ. ಇಂದಿನ ದಿನ ಸೂರ್ಯದೇವರು ರಥ ಆರೋಹಣ ಮಾಡಿ ಸಪ್ತ ಕುದುರೆಗಳಿಂದ ಸಂಚಾರ ಆರಂಭ ಮಾಡಿದ ದಿನ. ಸಪ್ತಮಿಯ ದಿನ



ಜನಿಸಿ ಸೂರ್ಯರಥವನ್ನು ಚಾಲನೆ ಮಾಡಿದ ದಿನ ರಥ ಸಪ್ತಮಿ. ಓಂಕಾರವನ್ನು ಉಚ್ಚರಿಸುತ ಸೂರ್ಯರಥ ಸಾಗುತ್ತದೆ. **"ಸ್ವರನ್‌ವಿತಿ"** - ಸೂರ್ಯ ಸೂರ್ಯದೇವರನ್ನು ಪೂಜಿಸಿ ಜೀವಕೋಟಿಗೆ ಆಧಾರಭೂತವಾಗಿ ಕರ್ಮ ಸಾಕ್ಷಿಯಾಗಿ, ಆರೋಗ್ಯ ಪ್ರದಾತವಾಗಿರುವ ದೇವರನ್ನು ಪೂಜಿಸುವ ಹಬ್ಬದ ದಿನವೇ ರಥಸಪ್ತಮಿ. ರಥಸಪ್ತಮಿ ಪುಣ್ಯ ದಿನದಂದು ಮಾಡುವ ಪೂಜೆ, ದಾನ, ತರ್ಪಣ ಅಧಿಕ ಫಲ ನೀಡುವವು. ಸೂರ್ಯದೇವರು ತ್ರಿಮೂರ್ತಿಗಳ ಏಕರೂಪವೆಂದು ಸರ್ವ ಭೂತಗಳ ಉತ್ಪತ್ತಿ, ನಿಯಂತ್ರಣೆ, ಸೂರ್ಯ ದೇವರೇ ಪ್ರತೀಕ. ರಥಸಪ್ತಮಿಯ ದಿನ ಅಭ್ಯಂಗನ ಸ್ನಾನ. ಸೂರ್ಯಆರಾಧನೆ ಮತ್ತು ಅರ್ಘ್ಯ ಕೊಡುವುದರಿಂದ ಆರೋಗ್ಯ, ಐಶ್ವರ್ಯ ಪ್ರಾಪ್ತಿ ಆಗುವುದು. ಸ್ನಾನ ಮಾಡುತ ಯಾತ್ಯತ್ ಜನ್ಮ ಕುರುಮೇ ಪಾಪಂ ಮಯಾ ಸಪ್ತಮ ಜನ್ಮಾಸು! ತನ್ಮೇ ರೋಗಂಚ, ಶೋಕಂಚ, ಮಾ ಕರೇಹಂಚು ಸಪ್ತಮೀ! ಎಂದು ಮಂತ್ರ ಪಠಿಸಿದಾಗ ಪಾಪಗಳನ್ನು, ರೋಗ ಗಳನ್ನು ಸೂರ್ಯದೇವರು ತೊಲಗಿಸುವರು. ಕಾಲ ಚಕ್ರ ಭೂತ. ಭವಿಷ್ಯತ್ ವರ್ತಮಾನ ಘಟನೆಗಳ ಗುರುತಿಗೆ ನಡೆಯುವ ಲಯ ಕಾಲಕ್ಕೆ ಪುರೋಗ ಮನವೇ ಹೊರತು ತಿರೋಗ ಮನ ಇಲ್ಲ. ಕಳೆದ ಕಾಲ ಹಿಂಬರುವುದಿಲ್ಲ. ಅದಕ್ಕೆ ಕಾಲವನ್ನು ಸದ್ವಿನಿಯೋಗ ಪಡಿಸಲು ಹಿರಿಯರ ಮಾತು ಮತ್ತು ಪುರಾಣಗಳ ಸೂಚನೆ.

### ವೇದಗಳಲ್ಲಿ ಸೂರ್ಯದೇವರ ವರ್ಣನೆ

ವೇದಕಾಲದಿಂದ ಸೂರ್ಯ ಆರಾಧನೆ ಇದೆ. ವೇದದಲ್ಲಿ ಸೌರಸೂಕ್ತಗಳು,ಆದಿತ್ಯ ಹೃದಯ ಸ್ತೋತ್ರ ಮತ್ತು ಗಾಯತ್ರಿ ಮಂತ್ರಗಳಿಂದ ತಿಳಿಯಬಹುದು. ಸೂರ್ಯ ದೇವರು ನವಗ್ರಹಗಳಲ್ಲಿ ಪ್ರಥಮಭಾಗಿ ಅಲ್ಲದೆ ಸೌರಕುಟುಂಬಕ್ಕೆ ಪ್ರಧಾನ ಪಾತ್ರ ವಹಿಸುವ ದೇವರು. ಸೂರ್ಯ ಹನ್ನೆರಡು ರಾಶಿಯಲ್ಲಿ ಸಂಚರಿಸುತ್ತಾ ಜೀವಕೋಟಿಗೆ ಶುಭ ಫಲಗಳನ್ನು ಕೊಡುವವರು. ಸಕಲ ದೇವತೆಗಳ ಸ್ತೋತ್ರ ಸಂಗ್ರಹ ಋಗ್ವೇದದಲ್ಲಿ ಸೂರ್ಯದೇವರ ವರ್ಣನೆ.

ತರಣಿರ್ವಿಶ್ವದರ್ಶತೋ ಜ್ಯೋತಿಷ್ಕೃದಸಿ ಸೂರ್ಯ! ವಿಶ್ವಮಾ ಭಾಸಿ ರೋಚನಂ

ಅತಿವೇಗವಾಗಿ ಚಲಿಸುತ್ತ ಬೆಳಕನ್ನು ಸಾರುವವರು ಸೂರ್ಯ! ವಿಶ್ವಕ್ಕೆಲ್ಲ ಬೆಳಕನ್ನು ಹಂಚುವ ದೇವರು ಸೂರ್ಯದೇವರು.

ಯೇವ ಸೂರ್ಯ ಜ್ಯೋತಿಷಾ ಬಾಧಸೇ ತಮೋ ಜಗಚ್ಚ ವಿಶ್ವಮುದಿಯರ್ಷಿ ಭಾನುನಾ ತೆನಾ ಸ್ಮದ್ವಿಶ್ವಾ ಮನಿರಾಮನಾ ಹುತಿ ಮಪಾವೀಮಾವಪ ದುಷ್ವಸ್ನ್ಯಾಮ್‌ಸುವ

ಸೂರ್ಯದೇವರೇ ನೀವು ತಮ್ಮ ತೇಜಸ್ಸಿನಿಂದ ಯಾವ ರೀತಿಯಲ್ಲಿ ಅಂಧಕಾರವನ್ನು ಬಂಧಿಸುವಿರೋ,ಯಾವ ವಿಧವಾಗಿ ಈ ಜಗತ್ತಿಗೆ ತಮ್ಮ ತೇಜಸ್ಸನ್ನು ಕೊಡುವರೋ ಅದೇ ವಿಧವಾಗಿ ನಮ್ಮ ರೋಗಗಳನ್ನು ಸರ್ವನಾಶನ ಮಾಡಿ, ದುಸ್ವಪ್ನಗಳನ್ನು ದೂರ ಮಾಡಿ! ಎನ್ನುವ ಪ್ರಾರ್ಥನೆ.

ಭಾನುಮಂಡಲ ಮಧ್ಯಸ್ತಮ್ ವೇದತ್ರಯ ನಿಷೇವಿತಂ।
ಗಾಯತ್ರೀ ಪ್ರತಿಪಾದ್ಯಮ್ ತಮ್ ವಿಷ್ಣುಂ ಭಕ್ತ್ಯಾ ನಮಾ ಮ್ಯಹಂ॥

ಆದಿತ್ಯರು ಸೂರ್ಯಮಂಡಲ ಮಧ್ಯದಲ್ಲಿ ಸ್ಥಿತರಾಗಿರುವರು. ಮೂರು ವೇದಗಳು ಆದಿತ್ಯರನ್ನು ಸ್ತುತಿಸುವುವು. ಗಾಯತ್ರಿ ಮಂತ್ರದಿಂದ ಪ್ರತಿಪಾದ್ಯರಾಗಿರುವ ವಿಷ್ಣುವಿಗೆ ನಾನು ಭಕ್ತಿ ಯಿಂದ ನಮಸ್ಕಾರ ಮಾಡುವೆನು. ವಿಷ್ಣುವಾದಿತ್ಯ ಆರು ಸಾವಿರ ಕಿರಣಗಳಿಂದ ಅರುಣ ವರ್ಣದಿಂದ ಶೋಭಿಸುವರು.

ಅಗ್ನಿಮೀಳೇ ಪುರೋಹಿತಂ ಯಜ್ಞಸ್ಯ ದೇವಮೃತ್ವಿಜಮ್ ಹೋತಾರಂ ರತ್ನ ಧಾತಮಮ್।

ಜ್ಞಾನಸ್ವರೂಪ ಪರಮಾತ್ಮನು ಸರ್ವತ್ರ ವ್ಯಾಪಕನೂ, ಸರ್ವ ಪ್ರಕಾರದ ಯಜ್ಞಾದಿ ಶ್ರೇಷ್ಠ ಕರ್ಮಗಳ ಪ್ರಕಾಶಕ ಮತ್ತು ಉಪದೇಶಕನೂ, ಎಲ್ಲಾ ಋತುಗಳಲ್ಲಿಯೂ ಪೂಜನೀಯನೂ, ಸರ್ವ ಋತುದಾತನೂ, ಎಲ್ಲಾ ಬ್ರಹ್ಮಾಂಡಗಳ ಕರ್ತೃ, ಧರ್ತೃ ಮತ್ತು ಹರ್ತೃ ಆಗಿದ್ದರೆ. ನಾನು ಇಂತಹ ಪ್ರಭುವಿನ ಉಪಾಸನೆ, ಪ್ರಾರ್ಥನೆ ಹಾಗೂ ಸ್ತುತಿಯನ್ನೇ ಮಾಡುತ್ತೇನೆ. ಆಯುರ್ವೇದ ಶಾಸ್ತ್ರ ಅಥರ್ವಣ ವೇದದ ಉಪವೇದ. ಭೈಷಜ್ಯ ಸೂಕ್ತಗಳಲ್ಲಿ ಸೂರ್ಯದೇವರ ಪ್ರಶಂಸೆ. ಅನಾರೋಗ್ಯ ಲಕ್ಷಣಗಳು ಮತ್ತು ಅದರ ಚಿಕಿತ್ಸಾ ವಿಧಾನವನ್ನು ತಿಳಿಸಲಾಗಿದೆ.


ಆಕಾಶಾತ್ ಪತಿತಂ ತೋಯಂ ಯಥಾ ಗಚ್ಛತಿ ಸಾಗರಂ। ಸರ್ವದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ॥

ಭುವಿಗೆ ಸುರಿದ ಮಳೆ ನೀರು ಸಾಗರಕ್ಕೇ ಸೇರುವುದು. ಸಾಗರದಿಂದ ಸೌರ ಶಕ್ತಿಯಿಂದ ನೀರನ್ನು ಮೇಘಾವೃತ ಮಾಡಿ ಪುನಃ ಭುವಿಗೆ ಮಳೆ ಬರುವ ಚಕ್ರಕ್ರಿಯೆ ಹಿಂದೆ ಸೂರ್ಯದೇವರೇ ಕಾರಣ. ಆಕಾಶದಿಂದ ಸಾಗರದ ನೀರನ್ನು ಮೇಘರೂಪದಲ್ಲಿ ತಂದು ಭುವಿಗೆ ಋತುವಿನ ಅನುಸಾರ ಮಳೆ ಸುರಿಸಿ ಸಸ್ಯಶ್ಯಾಮಲ ಮಾಡುವ ಕಾರ್ಯ ಸೂರ್ಯದೇವರದೇ.

ಜರಾಯುಜಃ ಪ್ರಥಮ ಉಸ್ರಿಯೋ ವೃಷಾವಾತ ಭ್ರಜಾಸ್ತ ನಯನ್ನೇತಿವೃಷ್ಟ್ಯಾ।
ನನೋಮೃಡಾತಿ ತನ್ವ ಋಜುಗೋರುಜನ್ ಯ ಏಕಮೋಜಾಸ್ರೇಥಾ ವಿಚಕ್ರಮೇ॥

ಸೂರ್ಯದೇವರು ಮಳೆ ಬರುವ ಹಾಗೆ ಮಾಡುವರು. ವೇಗವಾಗಿ ಚಲಿಸುವರು. ಸೂರ್ಯ ದೇವರು ಒಬ್ಬರೇ ತೇಜಸ್ಸು, ಅಗ್ನಿ, ವಾಯು ಮೂರು ರೂಪಗಳಿಂದ ಭೂಮಿ ಸಹಿತ ಮೂರು ಲೋಕಗಳನ್ನು ವ್ಯಾಪಿಸಿದ್ದಾರೆ. ಸೂರ್ಯದೇವರು ನಮ್ಮ ಶರೀರವನ್ನು ಆರೋಗ್ಯವಾಗಿಡಲಿ. ಆದಿತ್ಯ

ತೇಜಸ್ಸಿನಿಂದ ಎಲ್ಲ ಶರೀರಗಳನ್ನೂ ಆಕ್ರಮಿಸಿ ವಾತ,ಪಿತ್ತ ಶ್ಲೇಷ್ಮಗಳನ್ನು ಬರುವ ಹಾಗೆ ಮಾಡುವ ದೇವತಾ ರೂಪ.ವಾತ,ಪಿತ್ತ, ಶ್ಲೇಷ್ಮಗಳಿಂದ ಬಹು ಕಾಯಿಲೆಗಳು ಉಂಟಾಗುವವು. ಇದರ ಪ್ರಕೋಪದ ಶಾಂತಿ ಆದಲ್ಲಿ ಅನೇಕ ಕಾಯಿಲೆಗಳು ಕಮ್ಮಿ ಆಗುವುವು. ಸೂರ್ಯೋಪಾಸನೆ ಮಾಡುವುದರಿಂದ ಈ ಮೂರು ದೋಷಗಳಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳಿಂದ ಪಾರಾಗಬಹುದು. ಸೂರ್ಯದೇವರು ಆರೋಗ್ಯ. ತೇಜಸ್ಸು, ಬಲವನ್ನು ಪ್ರಸಾದಿಸುವರು ಎಂದು ಸಾಮವೇದ ಘೋಷಿಸುತ್ತಿದೆ. ಜ್ಞಾನವನ್ನು ಪಡೆಯಲು ಸೂರ್ಯಾರಾಧನೆ ಮಾಡಬೇಕು ಎಂದು ಕೃಷ್ಣಯಜುರ್ವೇದ ಘೋಷಿಸುತ್ತಿದೆ. ಹನ್ನೆರಡು ತಿಂಗಳಲ್ಲಿ ಹನೆರಡು ಆದಿತ್ಯ ರೂಪಗಳಾದ ಮಿತ್ರ, ರವಿ, ಸೂರ್ಯ,ಭಾನು,ಖಗ,ಪೂಷ,ಹಿರಣ್ಯಗರ್ಭ, ಮರೀಚ್ಯಾದಿತ್ಯ,




ಸವಿತ್ರರ್ಕ, ಭಾಸ್ಕರೇಭ್ಯೋ ನಮಃ ಎಂದು ಪ್ರಣಾಮ ಮಾಡುವರು.ತೈತ್ತೀರ್ಯೋಪನಿಷತ್‌ನಲ್ಲಿ ವ್ಯಾಕೃತಿಗಳು ಮತ್ತು ಸೂರ್ಯಚಂದ್ರರ ಸಂಧಾನವಾಗಿ ಪಂಚಭೂತಗಳಿಂದ ಅನುಸಂಧಾನವಾಗಿ ಸೌರ ಶಕ್ತಿಯ ಪ್ರಸಾರ, ಚಂದ್ರನಿಂದ ಜ್ಯೋತಿ ಪ್ರಕಾಶಪಡುವ ಮತ್ತು ಲೋಕಗಳು ಸೂರ್ಯಚಂದ್ರರಿಂದ ಬೆಳಗುವ ಪ್ರಸಕ್ತಿಯನ್ನು ವರ್ಣಿಸಲಾಗಿದೆ.

ಭೂರಿತಿ ವಾ ಅಯಂ ಲೋಕಃ। ಭುವ ಇತ್ಯನ್ತರಿಕ್ಷಮ್। ಸುವರಿತ್ಯಸೌ ಲೋಕಃ। ಮಹ ಇತ್ಯಾದಿತ್ಯಃ। ಆದಿತ್ಯೇನ ವಾವ ಸರ್ವೇಲೋಕ ಮಹೀಯನ್ತೇ ॥

ಭೂ, ಭುವಃ ಸುವಃ ಇವು ವ್ಯಾಕೃತಿಗಳು ಭೂ - ಎಂದರೆ ಈ ಲೋಕ, ಭವಃ ಎಂದರೆ ಅಂತರಿಕ್ಷ ಸುವಃ ಎಂದರೆ ಸ್ವರ್ಗ ಲೋಕ ಮಹಃ - ಎಂದರೆ ಆದಿತ್ಯ.

"ಭೂರಿತಿ ವಾ ಅಗ್ನಿಃ। ಭುವ ಇತಿ ವಾಯುಃ। ಸುವರಿತ್ಯಾದಿತ್ಯಃ। ಮಹ ಇತಿ ಚನ್ದ್ರಮಾಃ। ಚನ್ದ್ರಮಸಾ ವಾವ ಸರ್ವಾಣಿ ಜ್ಯೋತೀಂಷಿ ಮಹೀಯನ್ತೇ"

ಭೂ-ಎಂದರೆ ಅಗ್ನಿ, ಭುವಃ-ಎಂದರೆ ವಾಯು, ಸುವಃ-ಎಂದರೆ ಸೂರ್ಯ, ಮಹಃ ಎಂದರೆ ಚಂದ್ರ ಆದಿತ್ಯನಿಂದಲೇ ಎಲ್ಲ ಲೋಕಗಳು ಬೆಳಗುತ್ತಿವೆ. ಚಂದ್ರನಿಂದ ಜ್ಯೋತಿಗಳು ಪ್ರಕಾಶಿಸಲ್ಪಡುತ್ತಿದೆ. ತೈತ್ತಿರೀಯೋಪನಿಷತ್ ಸೂರ್ಯದೇವರನ್ನು ವಿಶ್ವ ಚಕ್ಷುವು, ಎಂದರೆ ಪ್ರಪಂಚಕ್ಕೆ ಕಣ್ಣುಗಳು ಎಂದು ವರ್ಣಿಸಲಾಗಿದೆ. ಬೆಳಕಿಲ್ಲದೆ ಕಾಣಿಸುವುದು ಅಸಾಧ್ಯ!

### ವಾಯುನಂದನನ ವೇದಾಭ್ಯಾಸ

ವಾಯುದೇವರ ಮತ್ತು ಅಂಜನೀದೇವಿಯ ಸುಪುತ್ರ ಆಂಜನೇಯರು. ಬಹು ಪರಾಕ್ರಮಶಾಲಿ ಮತ್ತು ಬಲಶಾಲಿ. ಆಂಜನೇಯ ಬಾಲ್ಯದಲ್ಲಿಯೇ ಅತಿ ಬಲವಂತನಾಗಿದ್ದರು. ವಾಯು ನಂದನ ಬಲ ಪರಾಕ್ರಮಕೆ ಸೋಲೇ ಇಲ್ಲ. ತಾಯಿ ಅಂಜನಾದೇವಿಯ ಹತ್ತಿರ ಶಿಕ್ಷೆ ಪಡೆಯುತ್ತ ಒಂದು ದಿನ ಗಗನದಲ್ಲಿ ಹೊಳೆಯುತ್ತಿರುವ ಸೂರ್ಯದೇವರು ಆಂಜನೇಯರ ಮನಸ್ಸನ್ನು ಆನಂದ ಪಡಿಸಿದರು. ತೇಜೋಮಯವಾದ ಸೂರ್ಯದೇವರು ಹನುಮಗೆ ಪ್ರೀತಿಪಾತ್ರರಾದರು.

"ಶ್ರೀ ಸೂರ್ಯನಾರಾಯಣ ವೇದ ಪಾರಾಯಣ ಲೋಕ ರಕ್ಷಾಮಣಿ ದೈವ ಚೂಡಾಮಣಿ"

ಸೂರ್ಯ ದಂಡಕದಲ್ಲಿ ಸೂರ್ಯದೇವರನ್ನು ವೇದ ಪಾರಂಗತ, ವೇದ ವಿದ್ವಾಂಸರು ಮತ್ತು ದೈವ ಚೂಡಾಮಣಿ ಎಂದು ಕೀರ್ತಿಸಲಾಗಿದೆ. ವೇದಾಧ್ಯಯನ ವಿದ್ಯಾಭ್ಯಾಸಕ್ಕಾಗಿ ಹನುಮಂತದೇವರು ಆದಿತ್ಯರನ್ನು ಆಶ್ರಯಿಸಿದರು. ನಿಲ್ಲದೆ ಚಲಿಸುವ ದೇವರು ಹೇಗೆ ಪಾಠ ಹೇಳಲು ಸಾಧ್ಯ? ಸೂರ್ಯದೇವರ ರಥ ಚಾಲನೆ ನಿಲ್ಲಲಾಗದು. ಹನುಮಂತರಾಯರು ಸೂರ್ಯ ರಥದ ಎದುರು ನಿಂತು ರಥಚಲನೆ ವೇಗವನ್ನು ಅನುಸರಿಸಿ ಸೂರ್ಯದೇವರ ಎದುರು ಮುಖವಾಗಿ ವಿದ್ಯಾಭ್ಯಾಸ ಮಾಡಿದರು. ಚತುಷ್ಷಷ್ಠಿ ಕಲೆಗಳನ್ನು ಅವಪಾಸನೆ ಮಾಡಿ ಪ್ರಾವೀಣ್ಯತೆ ಹೊಂದಿದರು. ಹೀಗಾಗಿ ಹನುಮಗೆ ಗುರುವು ಸೂರ್ಯದೇವರು.

### ತ್ರಿಕಾಲ ಸಂಧ್ಯ ಮತ್ತು ಸೂರ್ಯೋಪಾಸನೆ

ಭಗವಂತನ ಲೀಲೆ ಅರಿಯದೆ ಭಗವತ್ ತತ್ವ ತಿಳಿಯದೆ ಜೀವಿಗೆ ಭವಬಂಧನದಿಂದ ವಿಮುಕ್ತಿ ಇಲ್ಲವೆಂದು ಮಹರ್ಷಿಗಳ ನಿಶ್ಚಿತ ಮಾರ್ಗದರ್ಶನದಿಂದ ತಿಳಿದು ಬರುವುದು. ಕರ್ಮಗಳು

ಮೂರು ವಿಧ. ನಿತ್ಯಕರ್ತವ್ಯ, ನೈಮಿತ್ತಿಕ ಕರ್ತವ್ಯ ಮತ್ತು ಕಾಮ್ಯ ಕರ್ತವ್ಯ. ನಿತ್ಯ ಕರ್ಮಗಳ ಒಂದು ಭಾಗ ಸಂಧ್ಯೋಪಾಸನೆ. ಇದನ್ನು ಆಚರಿಸಲೇಬೇಕು. ಸಹಜವಾದ ಉತ್ತಮವಾದ ಸಾಧನೆ ಸಂಧ್ಯೋಪಾಸನೆ. ಸೂರ್ಯ ಪೂರ್ವದಲ್ಲಿ ಉದಯಿಸಿದಾಗ ಪ್ರಾತಃಕಾಲ. ಗಗನಕ್ಕೆ ಏರಿದಾಗ ಮಧ್ಯಾಹ್ನ ಕಾಲ ಮತ್ತು ಪಶ್ಚಿಮದಲ್ಲಿ ಅಸ್ತಮಿಸುವಾಗ ಸಂಧ್ಯಾಕಾಲ.

"ಬ್ರಹ್ಮಸ್ವರೂಪಮುದೆಯೇ ಮಧ್ಯಾಹ್ನೆತುಮಹೇಶ್ವರಂ ಸಾಯಂ ಧ್ಯಾಯೇತ್ವದಾ ವಿಷ್ಣುಮ್ ತ್ರಿಮೂರ್ತಿಮ್ ಚ ದಿವಾ ಕರಂ"

ಉದಯ ಕಾಲದಲ್ಲಿ ಬ್ರಹ್ಮ ಸ್ವರೂಪ. ಮಧ್ಯಾಹ್ನ ಕಾಲ ದಲ್ಲಿ ಮಹೇಶ್ವರ ಸಂಧ್ಯಾವೇಳೆಯಲ್ಲಿ ವಿಷ್ಣು ಹೀಗೆ ತ್ರಿಮೂರ್ತಿ ರೂಪವಾದ ದಿವಾಕರನಿಗೆ ನಮಸ್ಕಾರ! ಈ ಮೂರು ಕಾಲ ಗಳಲ್ಲಿ ಸೂರ್ಯೋಪಾಸನೆ. ಮಾಡುವುದು ಉತ್ತಮ. ಇದನ್ನೇ ತ್ರಿಕಾಲ ಸಂಧ್ಯೋಪಾಸನೆ ಎನ್ನುವರು. ಅನುದಿನ ಸಂಧ್ಯೋ ಪಾಸನೆ ಮಾಡುವುದರಿಂದ ಅಂತಃಕರಣ ಶುದ್ಧಿಯಾಗಿ ಪರಮಾತ್ಮನ ಸಾಕ್ಷಾತ್ಕಾರಕ್ಕೆ ದಾರಿ ತೋರುವುದು. ಸಂಧ್ಯಾ ವಂದನೆಗೆ ಅರ್ಘ್ಯ ಪ್ರಧಾನ, ಜಪ ಮತ್ತು ಉಪಸ್ಥಾನ ಎನ್ನುವ ಮೂರು ಅಂಗಗಳು. ಅರ್ಘ್ಯ ಪ್ರಧಾನವೆಂದರೆ ರಾಗಿ ಪಾತ್ರೆಯಲ್ಲಿ (ಚೊಂಬು) ಶುದ್ಧ ನೀರನ್ನು ತುಂಬಿಸಿ ಸೂರ್ಯದೇವರ ಅಭಿ ಮುಖವಾಗಿ ನಿಂತು ಕೈಗಳನ್ನು ಮೇಲಕ್ಕೆ ಎತ್ತಿ ನೀರಿನ ಧಾರೆ ಕೆಳಗಿನ ಇನ್ನೊಂದು ಪಾತ್ರೆಯಲ್ಲಿ ಬಿಡುತ್ತಾ ಮಂತ್ರ ಉಚ್ಚರಿ ಸುವುದನ್ನು ಅರ್ಘ್ಯ ಪ್ರಧಾನ ಕ್ರಿಯೆ ಎನ್ನುವರು. ಅರ್ಘ್ಯದ ನಂತರ ಜಪ. ಗಾಯತ್ರಿ ಜಪ ಶ್ರೇಷ್ಠ. ಜಪದನಂತರ ಸೂರ್ಯ ದೇವರನ್ನು ಸ್ತುತಿಸುವುದು ಉಪಸ್ಥಾನ ಸೂರ್ಯದೇವರನ್ನು ಸ್ತುತಿಸುವುದರಿಂದ ಸೂರ್ಯೋಪಸ್ಥಾನ ಅಂದರೆ ಸೂರ್ಯ ದೇವರೆ ಸಮೀಪಕ್ಕೆ ಸೇರುವ ಸಾಧನೆ.

## ಸೂರ್ಯ ದೇವರ ಮಹಿಮೆ

### ಆದಿತ್ಯ ಹೃದಯಂ:

ಆದಿತ್ಯ ಸೂರ್ಯದೇವ, ಹೃದಯಂ ಅಂದರೆ - ಹೃದಯ ಅಥವಾ ಮನಸ್ಸು ಒಟ್ಟು ೩೧ ಶ್ಲೋಕಗಳಿವೆ. ಸೂರ್ಯ ದೇವರ ಮಹಿಮೆಯನ್ನು ವರ್ಣಿಸಲಾಗಿದೆ.

ರಾಮ ರಾಮ ಮಹಾಬಾಹೋ ಶೃಣು ಗುಹ್ಯಂ ಸನಾ ತನಮ್।
ಯೇನ ಸರ್ವಾನರೀನ್ ವತ್ಸ ಸಮರೇ ವಿಜಯಿಷ್ಯಸಿ॥
ಆದಿತ್ಯ ಹೃದಯಂ ಪುಣ್ಯಂ ಸರ್ವಶತ್ರು ವಿನಾಶನಮ್ ।
ಜಯಾವಹಂ ಜಪೇನ್ನಿತ್ಯಮ್ ಅಕ್ಷಯ್ಯ ಪರಮಂ ಶಿವಮ್॥

ತ್ರೇತಾಯುಗದಲ್ಲಿ ಶ್ರೀ ರಾಮಚಂದ್ರಮೂರ್ತಿ ಲಂಕೆಗೆ ತೆರಳಿ ರಾವಣನ ಜೊತೆ ಯುದ್ಧ ಮಾಡಲು ವಾನರ ಸೇನೆಯ ಜೊತೆ ಸಿದ್ಧವಾದರು. ಲಂಕಾಧಿಪತಿಯ ಸೇನೆ ಎದುರು ನಿಂತಾಗ ರಾವಣ ಯುದ್ಧ ಭೂಮಿಗೆ ಬಂದರು. ಅಗಸ್ತ್ಯ ಮಹಾಮುನಿ ಶ್ರೀ ರಾಮಚಂದ್ರರ ಬಳಿ ಬಂದು ನುಡಿದರು. ಮಹಾ ಬಾಹೋ ಶ್ರೀ ರಾಮ! ಸನಾತನ ಗೋಪಾನೀಯ ಸ್ತೋತ್ರವನ್ನು ಕೇಳಿ! ಸ್ತೋತ್ರ ಜಪದಿಂದ ಯುದ್ಧದಲ್ಲಿ ನೀವು ಸಕಲ ಶತ್ರುಗಳನ್ನು ಜಯಿಸುವರು! ಈ ಸ್ತೋತ್ರದ ಜಪದಿಂದ ವಿಜಯಪ್ರಾಪ್ತಿ ಆಗುವುದು. ಈ ಸ್ತೋತ್ರಅಕ್ಷಯಕಾರಿ ಮತ್ತು ಸರ್ವಮಂಗಳ ಕಾರಿ. ಪಾಪನಾಶವಾಗಿ, ಶೋಕವಿನಾಶವಾಗಿ ಆಯುವನ್ನು ಕೊಡುವ ಸ್ತೋತ್ರ. ರಘುನಂದನ! ಸೂರ್ಯ ದೇವರು ಸೃಷ್ಟಿ ಪಾಲನೆ ಮಾಡುವರು. ಸೌರಶಕ್ತಿಯಿಂದ ಉಷ್ಣತೆ ಮತ್ತು ಮಳೆ ಬರುವುದಕ್ಕೆ ಕಾರಣಕಾರಿ. ರಾಘವಾ! ಪರಮ ಪುರಷಾ! ವಿಪತ್ತು ಬಂದಾಗ, ಕಷ್ಟಕಾಲದಲ್ಲಿ ಭಯವಾದಾಗ ಸೂರ್ಯದೇವರ ಸ್ಮರಣೆ ಕೀರ್ತನೆ ಮಾಡಿದಾಗ ಭಯ, ಸಂಕಟ ದೂರವಾಗು ವವು. ಸ್ತೋತ್ರ ಜಪಿಸಿ ಯುದ್ಧ ಆರಂಭಿಸಲು ಸೂಚಿಸಿ ಅಗಸ್ತ್ಯ ಮಹಾಮುನಿ ಯುದ್ಧ ಭೂಮಿಯಿಂದ ತೆರಳಿದರು. ಶ್ರೀರಾಮ ಚಂದ್ರ ಮೂರುಸಲ ಅಚಮನ, ಸೂರ್ಯ ನಮಸ್ಕಾರ ಮಾಡಿ ಸ್ತೋತ್ರ ಜಪಿಸಿದರು. ನಂತರ ಯುದ್ಧದಲ್ಲಿ ರಾವಣನ ಅಂತ್ಯ ವಾಗಿ ಸೀತಾಮಾತೆ ಜೊತೆಗೂಡಿ ಅಯೋಧ್ಯೆಗೆ ತೆರಳಿದರು.

## ಸತ್ರಾಜಿತ್ ಮಹಾರಾಜರು

ನಿಮಷ್ಣ ನಾಮದ ಮಹಾರಾಜರಿಗೆ ಸತ್ರಾಜಿತ್, ಪ್ರಸೇನ ಎಂಬ ಇಬ್ಬರು ಮಕ್ಕಳಿದ್ದರು. ಸತ್ರಾಜಿತ್ ಅಗ್ರಜರು ಸತ್ರಾಜಿತ್ ಸೂರ್ಯದೇವರ ಪ್ರಾರ್ಥನೆ ಮಾಡಿದಾಗ ಶಮಂತಕಮಣಿ ಕೊಟ್ಟರು. ಅಗ್ನಿ ಸಂಬಂಧಿತ ಮಣಿ ಇದ್ದ ಕಡೆ ಅತಿವೃಷ್ಟಿ. ಅನಾ ವೃಷ್ಟಿ ಇರುವುದಿಲ್ಲ. ಪ್ರತಿ ನಿತ್ಯ ಬಂಗಾರವನ್ನು ಕೊಡುವುದು ಎಂದು ಕರುಣಿಸಿದರು. ಸತ್ರಾಜಿತ್ ರಾಜರ ರಾಜ್ಯ ಸುಭಿಕ್ಷ ವಾಗಿ ನಡೆಯಿತು. ಪಾಲನೆಯಲ್ಲಿ ಪ್ರಜೆಗಳು ಸುಖವಾಗಿ ಬಾಳಿ ದರು. ಸತ್ರಾಜಿತ್ ಪುತ್ರಿ ಸತ್ಯಭಾಮಾದೇವಿ. ಶ್ರೀ ಕೃಷ್ಣ ಪರ ಮಾತ್ಮನು ಮದುವೆ ಆದರು.

## ಸಾಂಬ ಚರಿತೆ

ದ್ವಾಪರಯುಗದಲ್ಲಿ ಶ್ರೀ ಕೃಷ್ಣ ಪರಮಾತ್ಮರಿಗೆ ಅಷ್ಟ ಸತಿ ಯರು. ಅವರಲ್ಲಿ ಜಾಂಬವತಿದೇವಿ ಒಬ್ಬರು. ಶ್ರೀಕೃಷ್ಣ ಪರಮಾತ್ಮ ಮತ್ತು ಜಾಂಬವತೀದೇವಿಯ ಸುಪುತ್ರ ಸಾಂಬ. ಸಾಂಬರು ದೋರ್ವಾಸ ಮಹಾಮುನಿಯಿಂದ ಶಾಪಗ್ರಸ್ಥರಾದರು. ಕುಷ್ಠು ರೋಗದಿಂದ ಬಳಲುತ್ತಿದ್ದರು. ಶ್ರೀ ಕೃಷ್ಣನ ಸೂಚನೆ ಮೇರೆಗೆ ದ್ವಾರಕಾ ಪಟ್ಟಣದ ಉತ್ತರಕ್ಕೆ ಸಂಚರಿಸಿ ಮೂಲಸ್ಥಾನ ಎನ್ನುವ ನದೀ ತೀರದಲ್ಲಿ ಸೂರ್ಯ ದೇವರ ಉಪಾಸನೆ ಮಾಡುತ್ತಿದ್ದರು. ಅನುದಿನ ನದೀಸ್ನಾನ ಸೂರ್ಯೋಪಾಸನೆ ಮಾಡುತ ರೋಗ ದಿಂದ ಮುಕ್ತರಾದರು. ಅದೇ ಸ್ಥಳದಲ್ಲಿ ಸೂರ್ಯದೇವರ ದೇವ ಸ್ಥಾನ ಕಟ್ಟಿಸಿದರು. ಮೂಲಸ್ಥಾನ ಎನ್ನುವ ಸ್ಥಳ ಇಂದಿನ ಪಾಕಿ ಸ್ಥಾನ ದೇಶದ ಮುಲ್ತಾನ್ ಆಗಿದೆ. ನದೀ ತೀರದಲ್ಲಿ ಮಣ್ಣಿಗೆ

ಚರ್ಮರೋಗ ಗುಣ ಮಾಡುವ ತತ್ವ ಇದೆ.ಈ ಮಣ್ಣನ್ನು ಮುಲ್ತಾನೀ ಮಿಟ್ಟಿ (ಮಣ್ಣು) ಎಂದು ಇಂದಿಗೂ ಬಳಸುವರು.

## ಅಕ್ಷಯ ಪಾತ್ರೆ

ಧರ್ಮರಾಜರು ಜೂಜಾಟದಲ್ಲಿ ಸೋತು ಅರಣ್ಯವಾಸ, ಅಜ್ಞಾತವಾಸ ಮಾಡಲು ಕಾಡಿಗೆ ದ್ರೌಪದಿ ಮತ್ತು ತಮ್ಮಂದಿರ ಜೊತೆ ಹೊರಟರು. ಕಾಡಲ್ಲಿ ಕಂದಮೂಲಗಳನ್ನು ಸೇವಿಸುತ ಜೀವನ ನಡೆಸುತ್ತಿದ್ದರು. ಅತಿಥಿಗಳು ಬಂದಾಗ ಉಪಚಾರ ಮಾಡದೆ ಇದ್ದರೆ ರಾಜ ಧರ್ಮ, ಕ್ಷತ್ರಿಯ ಧರ್ಮವೇ ಅಲ್ಲ. ಮುನಿ ಸೂಚನೆಯಂತೆ ಧರ್ಮರಾಜರು ಸೂರ್ಯದೇವರಿಗೆ ಅರ್ಘ್ಯ ಕೊಟ್ಟು ಸೂರ್ಯೋಪಾಸನೆ ಮಾಡಿದರು. ಸೂರ್ಯ ದೇವರು ಪ್ರಸನ್ನರಾಗಿ ಅಕ್ಷಯಪಾತ್ರೆ ಕೊಟ್ಟರು.ಎಷ್ಟೇ ಅತಿಥಿಗಳು ಬಂದರೂ ಭೋಜನ ವ್ಯವಸ್ಥೆ ಆಗುವುದು ಮತ್ತು ಪಾತ್ರೆ ಅರಣ್ಯವಾಸ ಮುಗಿಯುವವರೆಗೂ ಆಹಾರ ನೀಡುವುದು. ಈ ರೀತಿ ಪಾಂಡವರು ಅತಿಥಿ ಸತ್ಕಾರ ಮತ್ತು ಅರಣ್ಯದಲ್ಲಿ ಜೀವನ ನಡೆಯಲು ಸೂರ್ಯದೇವರ ಕೃಪೆ ಕಾರಣ.

## ಕವಿವರ್ಯರಿಗೆ ಅಂಧಕಾರದಿಂದ ಮುಕ್ತಿ

ಮಯೂರಕವಿ ಶ್ರೀ ಹರ್ಷವರ್ಧನ ರಾಜನ ಆಸ್ಥಾನ ಪಂಡಿತರು. ಶಾಪಕ್ಕೆ ಒಳಗಾಗಿ ಕುಷ್ಠುರೋಗ ವಶವಾದರು. ರಾಜಸಭೆಗೆ ಹೋಗಲು ಬಹಿಷ್ಕಾರವಾಯಿತು.ಪಂಡಿತರು ನೊಂದು ಮನೆಯಲ್ಲೇ ಕಾಲ ಕಳೆಯುತ್ತಿದ್ದರು. ದೀನರಾದ ಕವಿವರ್ಯರಿಗೆ ಕಣ್ಣಿನ ದೋಷದಿಂದ ಅಂಧತ್ವವೂ ಬಂತು. ನೂರು ಶ್ಲೋಕಗಳ ಸೂರ್ಯ ಶತಕವನ್ನು ರಚಿಸಿ ಸೂರ್ಯೋಪಾಸನೆ ಮಾಡಿದರು.ಮಂದವಾದ ದೃಷ್ಟಿ ಸರಿಹೋಯಿತು. ಕುಷ್ಠುರೋಗದಿಂದ ವಿಮುಕ್ತರಾದರು. ಮಯೂರಕವಿಯ ಸೂರ್ಯಶತಕ ಶ್ಲೋಕಗಳನ್ನು ಇಂದಿಗೂ ಸೂರ್ಯದೇವರ ಆರಾಧನೆಗೆ ಪಠಿಸುವರು. "ಆರೋಗ್ಯಮ್ ಭಾಸ್ಕರಾದಿಚ್ಛೆತ್! ಎಂಬುವುದು ಶಾಸ್ತ್ರ ವಚನ!" ಭಾಸ್ಕರ ಕೃಪೆಯಿಂದ ಆರೋಗ್ಯ ಪಡೆಯಬಹುದು ಎಂದು ಅರ್ಥ! ಆರೋಗ್ಯ. ಬೆಳಕು ಮತ್ತು ಸರ್ವ ಜೀವಕೋಟಿ ಆಧಾರವಾದ ಸೂರ್ಯದೇವರಾಯರಿಗೆ ನಮಸ್ಕಾರ! ಸೂರ್ಯೋಪಾಸನೆ ಮಾಡಿ ಜ್ಞಾನ, ಆರೋಗ್ಯ ಮತ್ತು ಮುಕ್ತಿಪಡೆಯುವ ಶ್ಲೋಕಗಳು,ಪುರಾಣ ಕಥೆಯಲ್ಲಿ ವರ್ಣಿಸಲಾಗಿದೆ. ಕ್ರಮಶಿಕ್ಷಣೆ, ಸಮಯ ಪಾಲನೆಗೆ ಉಪಮಾನ ಸೂರ್ಯದೇವರು. ಕ್ರಮ ತಪ್ಪದೆ ಪೂರ್ವಕ್ಕೆ ಸಮಯಾನು ಸಾರವಾಗಿ ಪ್ರತ್ಯಕ್ಷವಾಗುವರು. ಸ್ವಯಂಪ್ರಕಾಶರಾಗಿ ಕಣ್ಣಿಗೆ ಕಾಣುವ ದೇವರಿಗೆ ಅನುದಿನ ನಮಸ್ಕಾರ!

"ಓಂ ಭಾಸ್ಕರಾಯ ವಿದ್ಮಹೇ ಮಹದ್ಯುತಿಕರಾಯ ಧೀಮಹಿ।
ತನ್ನೋ ಆದಿತ್ಯ ಪ್ರಚೋದಯಾತ್।

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಸಪ್ತಗಿರಿ

## ಚಂದಾದಾರರಿಗೆ ವಿಜ್ಞಾಪನೆ

ಸಪ್ತಗಿರಿ ಮಾಸಪತ್ರಿಕೆ ಪಾಠಕರಿಗೆ ಪ್ರತಿ ತಿಂಗಳು ಸಕಾಲದಲ್ಲಿ ಸೇರಲು ಅನೇಕ ಕ್ರಮಗಳನ್ನು ಕೈಗೊಂಡಿದೆ. ಭಕ್ತರು ತಮ್ಮ ವಿಳಾಸದಲ್ಲಿ ಏನಾದರೂ ಬದಲಾವಣೆ ಇದ್ದಲ್ಲಿ ನಮಗೆ ತಿಳಿಸಬೇಕಾಗಿ ಕೋರಲಾಗಿದೆ. ಪಾಠಕರು ಈ ವಿಷಯವನ್ನು ಈ ಕೆಳಗೆ ತಿಳಿಸಿದಂತೆ ಪ್ರಧಾನ ಸಂಪಾದಕರ ಕಾರ್ಯಾಲಯಕ್ಕೆ ತಿಳಿಸಬೇಕಾಗಿ ವಿನಂತಿ.

1) "ಸಪ್ತಗಿರಿ" ಮಾಸಪತ್ರಿಕೆಗೆ ಸಂಬಂಧಿಸಿದ ಸಲಹೆ/ಸೂಚನೆ/ದೂರುಗಳನ್ನು sapthagiri_helpdesk@tirumala.org ಮುಖಾಂತರ ತಿಳಿಯ ಪಡಿಸಿ.

2) ಸಪ್ತಗಿರಿ ಚಂದಾದಾರರ ವಿಳಾಸದಲ್ಲಿ ಬದಲಾವಣೆ ಇದ್ದಲ್ಲಿ 0877 - 2264543 ದೂರ ವಾಣಿ ಸಂಖ್ಯೆಗೆ ಕರೆ ಮಾಡಿ ತಮ್ಮ ಪೂರ್ತಿ ವಿಳಾಸವನ್ನು ಪಿನ್‌ಕೋಡ್, ಸೆಲ್ ನಂಬರ್ ಸಮೇತ ಕಾರ್ಯಾಲಯದ ಕೆಲಸದ ವೇಳೆ ಯಲ್ಲಿ (ಬೆ.10.30 ರಿಂದ ಸಂಜೆ 5.00 ಗಂಟೆ ಯೊಳಗೆ) ತಿಳಿಸಬೇಕು.

3. ಕಾರ್ಯಾಲಯದ ದೂರವಾಣಿ ನಂಬರ್ ಮುಖಾಂತರವಾಗಲಿ, sapthagiri_helpdesk @tirumala.org ಮುಖಾಂತರ ತಿಳಿಯಪಡಿಸಿ.

4. ಆನ್‌ಲೈನ್ ಚಂದಾದಾರರು ತಮ್ಮ ಪೂರ್ತಿ ವಿಳಾಸವನ್ನು ಕ್ರಮಬದ್ಧೀಕರಿಸಲು ತಿ.ತಿ.ದೇ. ವೆಬ್‌ಸೈಟ್ ಮುಖಾಂತರ ಮತ್ತೊಮ್ಮೆ ತಿಳಿಸಬೇಕಾಗಿ ಕೋರಲಾಗಿದೆ.

-ಪ್ರಧಾನ ಸಂಪಾದಕರು



## ಕೃಷ್ಣಾವತಾರ ಹಿನ್ನೆಲೆ

# ಭಗವಂತನು ದೇವಕಿಯ ಗರ್ಭಪ್ರವೇಶ

– ಶ್ರೀಮತಿ. ಸುಧಾಮಧುಸೂದನ್

ಕಾಲಕ್ರಮೇಣ ದೇವಕಿಗೆ ಎಂಟು ಗಂಡು ಮಕ್ಕಳೂ ಒಬ್ಬ ಹೆಣ್ಣು ಮಗಳನ್ನು ಪಡೆದಳು.

ಮೊದಲನೆಯ ಗಂಡು ಮಗುವು ಹುಟ್ಟಿದಾಗ ವಸುದೇವನು ತಾನು ಕಂಸನಿಗೆ ಕೊಟ್ಟ ಮಾತಂತೆ ಹುಟ್ಟಿದ ಕೂಡಲೆ ಕಂಸನ ಬಳಿಗೆ ಮಗುವನ್ನು ತಂದು ಒಪ್ಪಿಸಿದನು. ಮನಸ್ಸಿನಲ್ಲಿ ಸಂಕಟ ವೇದನೆಯೊಂದಿಗೆ, ಹುಟ್ಟಿದ ಮಗುವಿನ ಹಾಲುಗೆನ್ನೆಯ ಹಸುಳೆಯನ್ನು ನೋಡಿ ಕರುಣೆಯುಕ್ಕಿತು ಕೊಟ್ಟ ಮಾತು ತಪ್ಪಬಾರದೆಂದೂ ಮಗುವನ್ನು ಕಂಸನಿಗೆ ಒಪ್ಪಿಸಿದನು. ಈ ಕೂಸಿನಿಂದ ಯಾವ ಅಪಾಯವಿಲ್ಲ ಎಂದು ವಿನಾಕಾರಣ ಇದನ್ನು ಕೊಲ್ಲುವುದು ಬೇಡಾ ಎಂದು ಕಂಸನು ಕೂಸನ್ನು ವಸುದೇವನಿಗೇ ಹಿಂದಿರುಗಿಸಿದನು. ಯಾವ ಕಾಲಕ್ಕೆ ಕಂಸನಿಂದ ತನಗೆ ಯಾವ ಗಂಡಾಂತರ ಬರುವುದೋ ಎಂದು ಅಂಜುತ್ತಲೇ ಬಾಳಿದನು.

ಹೀಗಿರಲಾಗಿ ಒಂದು ದಿನ ನಾರದರು ಕಂಸನಲ್ಲಿಗೆ ಬಂದು ಕಂಸನು ಹೋದ ಜನ್ಮದಲ್ಲಿ ಕಾಲನೇಮಿ ಎಂಬ ದೈತ್ಯನನ್ನು ವಿಷ್ಣುವು ಹಗೆತನದಿಂದ ಕೊಂದನು. ಈ ಜನ್ಮದಲ್ಲಿ ದೈತ್ಯಾಂಶನಾದ ಕಾಲನೇಮಿ ಕಂಸನೇ ಎಂದು ತಿಳಿಸಿದರು. ಗೋಕುಲದಲ್ಲಿ ನಂದದ ಮೊದಲಾದ ಸಕಲ ಯಾದವರು, ದೇವತೆಗಳು,ಯಾದವ ಸ್ತ್ರೀಯರು, ಗೋಪಿಸ್ತ್ರೀಯರು, ದೇವತಾ ಸ್ತ್ರೀಯರು ಎಲ್ಲರೂ ಕಂಸನ ಪರಿವಾರದವರೆಲ್ಲರನ್ನು ಸೇಡು ತೀರಿಸಿಕೊಳ್ಳಲೆಂದೂ ಅವತರಿಸಿದ್ದಾರೆ ಎಂದರು.

ಕಂಸನು ಮೊದಲೇ ರಾಕ್ಷಸನು,ದೈತ್ಯನೂ ಕ್ರೂರಿಯೂ, ನಾರದರ ಮಾತನ್ನು ಕೇಳಿ. ಸಿಟ್ಟಿನಿಂದ ಹುಚ್ಚೆದ್ದು ವಸುದೇವ, ದೇವಕಿಯರನ್ನು ಕೂಡಲೆ ಕರೆಸಿ ಅವರ ಕೈ ಕಾಲುಗಳಿಗೆ ಸಂಕೋಲೆಯನ್ನು ತೊಡಿಸಿ ತನ್ನ ಕಾರಾಗೃಹದಲ್ಲಿ ಇರಿಸಿದನು. ತನ್ನ ತಂದೆ ಉಗ್ರಸೇನ ಮಹಾರಾಜನನ್ನು ತನ್ನ ಕಣ್‌ದೃಷ್ಟಿಯಲ್ಲೆ ಇಟ್ಟನು.

ಪ್ರತೀ ವರುಷವು ದೇವಕಿಯು ಗರ್ಭಧರಿಸಿ ಮಗುವನ್ನು ಹೆರುತ್ತಿದ್ದಳು. ಹೆತ್ತ ಮಗುವನ್ನು ಕಂಸನು ನಿರ್ದಾಕ್ಷಿಣ್ಯವಾಗಿ ಕೊಲ್ಲುತ್ತಾ ಬಂದನು. ಮೊದಲೇ ಯಾದವರೆಂದರೆ ಕಂಸನಿಗೆ ಆಗುತ್ತಿರಲಿಲ್ಲ ನಾರದರ ಉಪದೇಶವಾದ ಮೇಲಂತೂ ಅವನು ಸಂಪೂರ್ಣವಾಗಿ ಯಾದವರನ್ನು ದ್ವೇಷಿಸಲು ಶುರು ಮಾಡಿದನು. ಇವನ ಉಪಟಳವನ್ನು ತಾಳದೆ ಎಷ್ಟೋ ಯಾದವರು ಬೇರೆ ರಾಜ್ಯಗಳಿಗೆ ಆಶ್ರಯಿಗಳಾದರು. ದೇಶ ಬಿಟ್ಟು ಹೋಗಲಾಗದವರು ಕಂಸನಿಗೆ ಶರಣಾಗತರಾಗಿ ಇವನ ಸೇವೆಯಲ್ಲಿ ನಿಂತರು.

ಕಂಸನ ಉಪಟಳಕ್ಕೆ ಬೆದರಿ ವಸುದೇವನು ತನ್ನ ಉಳಿದ ಪತ್ನಿಯರನ್ನು ಬೇರೆ ಬೇರೆ ಕಡೆಗೆ ಕಳಿಸಿದನು. ಕೆಲವು ಕಾಲ ಗತಿಸಲಾಗಿ ದೇವಕಿಯ ಆರು ಶಿಶುಗಳು ಹತರಾಗಲು ಏಳನೆಯ ಶಿಶುವಿಗೆ ಗರ್ಭ ಧರಿಸಿದಳು. ಈ ಗರ್ಭದಿಂದ ಆದಿಶೇಷನೇ ಅವತರಿಸಿ ಬಲರಾಮನೆಂದು ನಾಮಬಲದಿಂದ ಪ್ರಸಿದ್ಧನಾಗತಕ್ಕವನು ಎಂದು ಶ್ರೀಮನ್ನಾರಾಯಣನು ತನ್ನ ಯೋಗ ಮಾಯೆಯನ್ನು ಕರೆದು ಆಜ್ಞಾಪಿಸಿದನು.

ಎಲೆ ಮಾಯೆಯೇ ನೀನು ದೇವಕಿಯ ಗರ್ಭದಲ್ಲಿ ಅಂಕುರವಾಗಿರುವ ಆದಿಶೇಷನನ್ನು ಗೋಕುಲಕ್ಕೆ ನಂದನ ಪತ್ನಿ ರೋಹಿಣಿಯ ಗರ್ಭದಲ್ಲಿಡು ಎಂದೂ ನಾರಾಯಣ ಹೇಳುವನು. ಸರಿ ಏಳನೆಯ ಗರ್ಭ ಕಲಕಿ ಹೋಯಿತು ಎಂದು ಕಂಸನು ಭಾವಿಸುತ್ತಾನೆ.

ನಾರಾಯಣನು ಯೋಗ ಮಾಯೆಯನ್ನು ಈ ಕೂಡಲೆ ಹೋಗಿ ಯಶೋಧೆಯ ಗರ್ಭದಲ್ಲಿರು ಎಂದು ತಾನು ದೇವಕಿಯ ಗರ್ಭ ಪ್ರವೇಶಿಸುವೆ ಎಂದು ಮಾಯೆಗೆ ಹೇಳಿದನು. "ನಾನು ದೇವಕಿಯ ಗರ್ಭದಿಂದ ಹುಟ್ಟಿದ ಮೇಲೆ ಹೇ ಮಾಯೆಯೇ ನೀನು ಸರ್ವಾಭಿಷ್ಟಳಾಗಿ ಇತರ ಎಲ್ಲಾ ಶಕ್ತಿ ದೇವತೆಗಳಿಗೂ ಅಧೀಶ್ವರಿಯಾಗಿ ಮೆರೆಯುವಿ, ನಿನಗೆ ಬೇಕಾದಲ್ಲಿ ನಾನಾ ವಿಧದ ಜನರಿಂದ ಅನೇಕ ನಾಮಗಳಿಂದ ನಿನ್ನನ್ನು ಕರೆಯುವರು - ದುರ್ಗಾ ಕಾಳಿ, ಭದ್ರಕಾಳಿ, ವಿಜಯ, ವೈಷ್ಣವಿ, ಕುಮುದೆ ಚಂಡಿ, ಕೃಷ್ಣ ಮಾಧವಿ, ಕನ್ಯಕಾ, ಮಾಯಾ , ನಾರಾಯಣಿ ಈಶಾನ್ಯ, ಅಂಬಿಕೆ ಮೊದಲಾದ ಹೆಸರುಗಳಿಂದ ಪೂಜಿಸಲ್ಪಡುವಿ, ವಂದ್ಯಳಾಗಿ ರುತ್ತೀಯೆ ಎಂದು ಆಶೀರ್ವದಿಸಿ ನಾರಾಯಣನು ಕಳಿಸಿದನು.

ಯೋಗ ಮಾಯೆಯ ಆಯಿತೆಂದು ಭಗವಂತನಿಗೆ ನಮಿಸಿ ಶ್ರೀ ಹರಿಗೆ ಪ್ರದಕ್ಷಿಣೆ ಮಾಡಿ ನಮಸ್ಕಾರಗಳನ್ನು ಅರ್ಪಿಸಿ ನೇರವಾಗಿ ದೇವಕಿಯಲ್ಲಿಗೆ ಬರುವಳು.

ಇತ್ತ ದೇವಕಿಗೆ ಗರ್ಭಸ್ರಾವವಾಯಿತು ಎಂದು ನಂಬಿ ಕಂಸನು ತಣ್ಣಗಾಗುವನು. ಏಳನೆಯ ಗರ್ಭ ಈ ರೀತಿಯಾಗಿ ಯೋಗಮಾಯೆಯಿಂದ ರೋಹಿಣಿ ಗರ್ಭದಲ್ಲಿ ಬೆಳೆಯಿತು ಬಲರಾಮನಾಗಿ.

ಮುಂದೆ ಕೆಲವು ದಿವಸಗಳ ನಂತರ ಶ್ರೀ ಹರಿಯು ವಸು ದೇವನಲ್ಲಿ ಬಂದು ಹೊಕ್ಕನು. ಭಗವಂತನ ಅಂಶವು ಸೇರಿ ಕೊಂಡಿದ್ದರಿಂದ ವಸುದೇವನು ಸೂರ್ಯನಂತೆ ತೇಜಃ ಪುಂಜರಾಗಿ ಬೆಳಗತೊಡಗಿದನು. ಒಂದು ಸುಮುಹೂರ್ತದಲ್ಲಿ ರಾತ್ರಿಯಲ್ಲಿ ವಸುದೇವನು ದೇವಕಿಯ ಸಂಗದಲ್ಲಿದಾಗ ಅವನಿಂದ ಶ್ರೀಹರಿಯ ತೇಜವು ದೇವಕಿ ಗರ್ಭವನ್ನು ಪ್ರವೇಶಿಸಿತು. ದೇವಕಿ ದೇವಿಯ ಮುಖದ ತೇಜಸ್ಸು ಇಡೀ ಕಾರಾಗೃಹವನ್ನೇ ಬೆಳಗಿಸಿದಂತಾಗಿತ್ತು ಅವಳ ದೇಹಕಾಂತಿಯನ್ನು ನೋಡಿ ಸಾಕ್ಷಾತ್ ಕಂಸನೇ ಬೆದರಿದನು. ಇವಳ ಗರ್ಭದಿಂದ ವಿಷ್ಣುವೇ ಪುನಃ ಬಂದು ತನ್ನನ್ನು ಕೊಂದೇ ಬಿಡುವನೆಂದು ಕಂಸನು ಬಹಳವಾಗಿ ಹೆದರಿದನು.

ಹಗಲು ರಾತ್ರಿ, ಕುಳಿತಾಗ, ನಿಂತಾಗ, ಮಲಗುವಾಗ, ಊಟ ಮಾಡುವಾಗ ಯಾವಾಗಲೂ ಕಂಸನು ವಿಷ್ಣುವನ್ನು ನೆನೆಯುತ್ತಾ ನೆನೆಯುತ್ತಾ ಬಹಳವಾಗಿ ತನ್ನ ನೆಮ್ಮದಿಯನ್ನು ಹಾಳುಮಾಡಿಕೊಂಡು ಶ್ರೀ ಹರಿಯೇ ತನನ್ನು ಕೊಲ್ಲುವನೆಂದು ದೃಢ ಪಡಿಸಿಕೊಂಡನು.

ದೇವಕಿ ವಸುದೇವರ ಆರು ಮಕ್ಕಳು
ಕೀರ್ತಿಮಾನ್, ಸುಶೇನ, ಭದ್ರಸೇನ,

ರಿಜು ಸಮ್ಮರ್ಧನ ಹಾಗೂ ಭದ್ರ ಎಂದು ಇವರನ್ನೆಲ್ಲಾ ಹುಟ್ಟಿದ ಕೂಡಲೇ ಕೊಂದು ಹಾಕಿದನು.



ಶ್ರೀ ಕೃಷ್ಣಾರ್ಪಣಮಸ್ತು


## ಡಯಲ್ ಯುವರ್ ಇ.ಓ.

## ಯಾತ್ರಿಕ ಭಕ್ತರಲ್ಲಿ..... ವಿನಂತಿ

ತಿರುಪತಿ ತಿರುಮಲೆಯಲ್ಲಿ ತಮ್ಮ ಅನುಭವಕ್ಕೆ ಬಂದ ಕುಂದು ಕೊರತೆಗಳ ಬಗ್ಗೆ ಹೆಚ್ಚು - ಕಡಿಮೆಗಳ ಬಗ್ಗೆ-ಸಲಹೆ ಸೂಚನೆಗಳನ್ನು ಕಾರ್ಯನಿರ್ವಹಣಾಧಿಕಾರಿಯವರಿಗೆ ನೇರವಾಗಿ ನೀಡಬಹುದು. ಅದಕ್ಕಾಗಿ **ಪ್ರತಿ ತಿಂಗಳ ಮೊದಲ ಶುಕ್ರವಾರ ಬೆಳಗ್ಗೆ 8-30 ರಿಂದ 9-30 ಗಂಟೆಯವರೆಗೆ** ತಾವು ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿಗಳೊಡನೆ ದೂರವಾಣಿಯಲ್ಲಿ ಮಾತನಾಡಬಹುದು.

ದೂರವಾಣಿ ಸಂಖ್ಯೆ -0877-2263261

ಯಾತ್ರಿಕರ ಸೌಕರ್ಯಗಳನ್ನು ಹೆಚ್ಚಿಸಲು

ತಮ್ಮ ಯಾತ್ರೆ ಸುಲಭತರವಾಗಿ ಕೈಗೂಡಲು - ಮಾತನಾಡಿ.

# ಗೋಕರ್ಣದ ಮಹಾಬಲೇಶ್ವರ

- ಮೂಲ: ಕೆ.ಸಿ. ನಾಯುಡು
- ಅನುವಾದ : ಶ್ರೀಮತಿ. ಸೂರ್ಯವಂಶಿ

ಈ ಪ್ರಪಂಚದಲ್ಲಿ "ಆತ್ಮಲಿಂಗ" ವಿರುವ ಏಕೈಕ ಶೈವ ಕ್ಷೇತ್ರ ಈ ಗೋಕರ್ಣ. ಇಲ್ಲಿರುವ ಶಿವನನ್ನು "ಮಹಾ ಬಲೇಶ್ವರ" ಎನ್ನುತ್ತಾರೆ. ಇದು ಕರ್ನಾಟದ ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಬ್ಬೀಸಮುದ್ರದ ತೀರದಲ್ಲಿದೆ. ಬೆಂಗಳೂರಿನಿಂದ 450 ಕಿ.ಮೀ. ಗೋವಾದಿಂದ 16 ಕಿ.ಮೀ. ಮಧ್ಯ ರಾಷ್ಟ್ರೀಯ ಹೆದ್ದಾರಿಯಿಂದ 16 ಕಿ.ಮೀ. ಪಶ್ಚಿಮದಿಕ್ಕಿನಲ್ಲಿ ನೆಲೆಸಿದೆ. ಇದನ್ನು ಪ್ರಾಣಲಿಂಗ ಅಥವಾ ಶಿವಲಿಂಗ ಎಂದೂ ಕರೆಯುತ್ತಾರೆ. ಈ ದೇವಾಲಯ ಆದಿಗುರು ಶಂಕರಾಚಾರ್ಯರು ಸ್ಥಾಪಿಸಿದ ಶ್ರೀ ರಾಮಚಂದ್ರ ಮಠದ ಅಧೀನದಲ್ಲಿದೆ.


ಹಿಂದೊಮ್ಮೆ ಈ ಜಗತ್ತೆಲ್ಲಾ ಜಲಮಯವಾಗಿ ಹೋಗಿತ್ತಂತೆ. ಆಗ ಬ್ರಹ್ಮ, ಸೃಷ್ಟಿಯ ಕೆಲಸವನ್ನು ಆರಂಭಿಸಬೇಕೆಂದು ರುದ್ರದೇವರನ್ನು ಆದೇಶಿಸಿದ. ಮಹಾಶಿವನು ಪಾತಾಳ ಲೋಕಕ್ಕೆ ಹೋಗಿ ಸೃಷ್ಟಿ ಹೇಗೆ ಮಾಡಬೇಕೆಂದು ಯೋಚಿಸುತ್ತಾ ಸುದೀರ್ಘವಾದ ತಪಸ್ಸನ್ನು ಮಾಡತೊಡಗಿದ. ಎಷ್ಟೇ ಸಮಯ ಕಳೆದರೂ ಮಾನವ ಸೃಷ್ಟಿ ನಡೆಯದೇ ಇದ್ದುದರಿಂದ ಬ್ರಹ್ಮ ಏನಾಯಿತೋ ಎಂದು ಯೋಚಿಸತೊಡಗಿದ. ಈ ವಿಷಯವನ್ನು ತಿಳಿದುಕೊಂಡ ಶಿವನು ಸೂಕ್ಷ್ಮ ರೂಪವನ್ನು ಧರಿಸಿ ಭೂಮಿಯ ಮೇಲೆ ಬಂದ. ಆದರೆ ಅದೇ ಸಮಯಕ್ಕೆ ಭೂದೇವಿ ಗೋ ರೂಪವನ್ನು ಧರಿಸಿದ್ದರಿಂದ ಆ ಗೋವಿನ ಕರ್ಣದಿಂದ ಶಿವನು ಹೊರಗೆ ಬರಬೇಕಾಯ್ತು. ಭೂಮಾತೆ ಈ ವಿಷಯವನ್ನು ಗಮನಿಸಿ ಗಾಬರಿಗೊಂಡಳು. ಆಗ ಶಿವನು ಚಿಂತಿಸುವ ಅಗತ್ಯವಿಲ್ಲವೆಂದೂ, ಇನ್ನು ಮುಂದೆ ಈ ಪ್ರದೇಶ ಗೋಕರ್ಣವೆಂಬ ಹೆಸರಿನಿಂದ ಪ್ರಸಿದ್ಧಿ ಪಡೆಯುತ್ತದೆಂದು ಹೇಳಿದ. ಆದ್ದರಿಂದಲೇ ಗೋಕರ್ಣದ ಶಿವಾಲಯದಲ್ಲಿನ ಶಿವಲಿಂಗವು ಎಲ್ಲಾ ಕಡೆಯಲ್ಲಿ ಇರುವಂತೆ ಇರದೇ ಅದರ ಒಳಗೆ ಗೋವಿನ ಕಿವಿಯ ಆಕಾರದಲ್ಲಿದೆ. ಭಕ್ತರು ನೀರಿನಿಂದ ಅಭಿಷೇಕಿಸಿ ಅದರೊಳಗೆ ಕೈಯಿರಿಸಿ ತನ್ಮಯತ್ತ್ವವನ್ನು ಹೊಂದುತ್ತಾರೆ.

ಲಂಕಾಧಿಪತಿಯಾದ ರಾವಣಾಸುರನು ಮಹಾಶಿವಭಕ್ತ. ರಾವಣ ಮತ್ತು ಅವನ ಸೋದರರಿಬ್ಬರೂ ಈ ಕ್ಷೇತ್ರದಲ್ಲೇ ಬ್ರಹ್ಮದೇವನನ್ನು ಕುರಿತು ತಪಸ್ಸು ಮಾಡಿ ವರಗಳನ್ನು ಪಡೆದರು. ರಾವಣನು ಅಣಿಮಾದಿ ಸಿದ್ಧಿಗಳನ್ನು, ಮಾನವರ ಕೈಯಲ್ಲಿ ಮರಣವು ಇಲ್ಲದಂತೆ ವರಗಳನ್ನು ಪಡೆದ. ವಿಭೀಷಣನು ಧರ್ಮಬುದ್ಧಿ, ಬ್ರಹ್ಮಾಸ್ತ್ರಸಿದ್ಧಿ,ಅಮರತ್ವವನ್ನು ವರಗಳನ್ನಾಗಿ ಪಡೆದ. ಇನ್ನು ಕುಂಭಕರ್ಣ ನಿದ್ರಾಸುಖವನ್ನು ಬಯಸಿದ. ಅವರ ತಾಯಿ ಕೈಕಸಿಗೆ ಪ್ರತೀನಿತ್ಯವೂ ಮರಳಿನಲ್ಲಿ ಮಾಡಿದ ಪಾರ್ಥಿವಲಿಂಗಕ್ಕೆ ಪೂಜೆ ಮಾಡುವ ಅಭ್ಯಾಸ. ಒಮ್ಮೆ ಸಮುದ್ರದ ಅಲೆಗಳ ರಭಸಕ್ಕೆ ಆ ಲಿಂಗ ಕೊಚ್ಚಿಕೊಂಡು ಹೋಯಿತು. ಅಯ್ಯೋ ಶಿವಾರ್ಚನೆ ಮಾಡಲಾಗಲಿಲ್ಲವೆಂದು ನೊಂದುಕೊಳ್ಳುತ್ತಿರುವ ಸಮಯದಲ್ಲಿ ತಾಯಿಯನ್ನು ನೋಡಿ ರಾವಣನು ನಿನಗೆ ಶಿವನ "ಆತ್ಮಲಿಂಗ" ವನ್ನು ತಂದುಕೊಡುತ್ತೇನೆಂದು ಮಾತುಕೊಟ್ಟ. ಈ ಆತ್ಮಲಿಂಗ ಸದಾಶಿವರುದ್ರನ ಮನೋಭಾವಕ್ಕೆ ಪ್ರತೀಕ. ಈ ಲಿಂಗದ ಮಹಿಮೆ ಅದ್ವಿತೀಯವಾದುದು. ಈ ಲಿಂಗವನ್ನು ನಿಷ್ಠೆಯಿಂದ ಪೂಜಿಸಿದವರಿಗೆ ಅತ್ಯದ್ಭುತವಾದ ಫಲ ದೊರೆತು ಆತ ಅಜೇಯನಾಗಬಲ್ಲ.

ತಾಯಿಗೆ ಕೊಟ್ಟ ಮಾತಿನಂತೆ ರಾವಣನು ಕೈಲಾಸಕ್ಕೆ ಹೋಗಿ ಶಿವನನ್ನು ಕುರಿತು ಘೋರವಾದ ತಪಸ್ಸು ಮಾಡಿದ. ಅವನ ತಪಸ್ಸಿಗೆ ಮೆಚ್ಚಿದ ಮಹಾಶಿವನು ಪ್ರತ್ಯಕ್ಷನಾಗಿ ಏನು ವರ ಬೇಕೆಂದು ಕೇಳಿದ. ಆಗ ರಾವಣನು ತನ್ನ ತಾಯಿಯ ಕೋರಿಕೆಯ ಮೇರೆಗೆ ಆತ್ಮಲಿಂಗವನ್ನು ನೀಡಬೇಕೆಂದು ಪ್ರಾರ್ಥಿಸಿದ.ಭಕ್ತನ ಬಯಕೆಯನ್ನು ಇಲ್ಲವೆನ್ನಲಾಗದ ಶಂಕರನು ಒಂದು ನಿಬಂಧನೆಯನ್ನೂ ವಿಧಿಸಿದ.

ರಾವಣಾಸುರನು ಲಂಕೆಗೆ ತಲುಪುವವರೆಗೂ ಆತ್ಮಲಿಂಗವನ್ನು ನೆಲದ ಮೇಲೆ ಇರಿಸಬಾರದು. ಆ ರೀತಿ ಇಟ್ಟರೆ ಅದು ಅಲ್ಲೇ ಸ್ಥಿರವಾಗಿದ್ದು ಬಿಡುತ್ತದೆ, ಎಂದು ಅದರ ಮಹಾತ್ಮೆಯ ಬಗೆಗೆ ಹೇಳಿ ಆತ್ಮಲಿಂಗವನ್ನು ಪ್ರಸಾದಿಸಿ ಅಂತರ್ಧಾನನಾದ. ಆತ್ಮಲಿಂಗವನ್ನು ಪಡೆದುಕೊಂಡ ರಾವಣನು ಅತ್ಯಂತ ಆನಂದಿಂದ ತನ್ನ ರಾಜ್ಯವಾದ ಲಂಕೆಗೆ ಹೊರಟ.

ಆಗಲೇ ವರ ಪಡೆದ ಗರ್ವದಿಂದ ರಾವಣನಿಗೆ ಆತ್ಮಲಿಂಗವೂ ಜೊತೆಯಾದರೆ ಲೋಕಗಳೆಲ್ಲಾ ಅಲ್ಲಕಲ್ಲೋಲವಾಗಿ ಹೋಗುತ್ತದೆಂದು ಭಯಗೊಂಡು ದೇವತೆಗಳು ನಾರದ ಮಹಾಮುನಿಯೊಂದಿಗೆ ಹೋಗಿ ತಮ್ಮನ್ನು ಕಾಪಾಡಬೇಕೆಂದು ಶ್ರೀ ಮಹಾವಿಷ್ಣುವನ್ನು ಬೇಡಿಕೊಂಡರು. ಆಗ ಶ್ರೀ ಹರಿಯು ರಾವಣನನ್ನು ಹೇಗಾದರೂ ತಡೆಯಬೇಕೆಂದು ವಿನಾಯಕ ನಿಗೆ




ಉಪದೇಶಿಸಿದ.ಗಣಪತಿ ದನ ಕಾಯುವವನ ವೇಷ ಧರಿಸಿ ಗೋಕರ್ಣ ಸಮುದ್ರದ ತೀರದಲ್ಲಿ ಸಂಚರಿಸ ತೊಡಗಿದ. ಆ ಸಮಯದಲ್ಲಿ ಶ್ರೀ ಮಹಾವಿಷ್ಣುವು ತನ್ನ ಸುದ ರ್ಶನ ಚಕ್ರದಿಂದ ಸೂರ್ಯನ ಪ್ರಕಾಶವನ್ನು ತಡೆಹಿಡಿದ. ಸೂರ್ಯಾಸ್ತವಾಯಿತೆಂದು ಭಾವಿಸಿದ ರಾವಣಾಸುರನು ಸಾಯಂಕಾಲದ ಸಂಧ್ಯಾವಂದನೆಯನ್ನು, ಸಮುದ್ರದ ಪಶ್ಚಿಮ ತೀರದಲ್ಲಿ ಮಾಡಬೇಕೆಂದು ನಿರ್ಧರಿಸಿದ. ತನ್ನ ಕೈಯಲ್ಲಿರುವ ಆತ್ಮಲಿಂಗವನ್ನು ಭೂಮಿಯ ಮೇಲೆ ಇರಿಸಬಾರದಲ್ಲವೇ ಎಂದು ಕೊಳ್ಳುತ್ತಿರುವ ಸಮಯದಲ್ಲಿ ಭಟನ ರೂಪದಲ್ಲಿ ಕಂಡು ಬಂದ ಗಣಪತಿಯನ್ನು ನೋಡಿ ತನ್ನನ್ನು ತಾನು ಪರಿಚಯಿಸಿಕೊಂಡು ತಾನು ಸಂಧ್ಯಾವಂದನೆಯನ್ನು ಮಾಡಿಕೊಂಡು ಬರುವವರೆಗೂ ಇದನ್ನು ಕೈಯಲ್ಲೇ ಇರಿಸಿ ಕೊಳ್ಳಬೇಕೆಂದು ಪ್ರಾರ್ಥಿಸಿದ.

ಅದಕ್ಕೆ ಒಪ್ಪಿದ ಬಾಲ ವಿನಾಯಕನು ತನಗೆ ಅತ್ಯ ವಸರವಾದ ಕೆಲಸವಿದೆಯೆಂದು,ಬಹಳ ಹೊತ್ತು ಇಲ್ಲಿರುವು ದಕ್ಕೆ ಸಾಧ್ಯವಿಲ್ಲವೆಂದೂ, ತಾನು ಮೂರು ಬಾರಿ ಕೂಗುತ್ತೇ ನೆಂದು, ಆಗಲೂ ನೀನು ಬರದಿದ್ದರೆ ಇಲ್ಲೆ ಇದನ್ನು ಇರಿಸಿ ಹೊರಟು ಹೋಗುತ್ತೇನೆಂದು ಹೇಳಿದ. ಅವನ ಮಾತಿಗೆ ಅಂಗೀಕರಿಸಿದ ರಾವಣನು, ಸಮುದ್ರದಲ್ಲಿ ಸಂಧ್ಯಾವಂದನೆ ಯನ್ನು ಪ್ರಾರಂಭಿಸುತ್ತಲೇ ವಿನಾಯಕನು 'ರಾವಣಾ' ಎಂದು ಕೂಗಿದ. ಅರ್ಘ್ಯ ನೀಡುವಾಗ ಎರಡನೆಯ ಬಾರಿ, ಓಡಿ ಬರುತ್ತಿ ರುವಾಗ ಮೂರನೆಯ ಬಾರಿ ಕೂಗಿದ. ರಾವಣ ಬರುವಷ್ಟರಲ್ಲಿ ನೆಲದ ಮೇಲೆ ಇರಿಸಿಬಿಟ್ಟ. ಅದನ್ನು ನೋಡಿದ ರಾವಣನು ಕೋಪೋದ್ರಿಕ್ತನಾಗಿ ಗಣಪತಿಯ ತಲೆಯ ಮೇಲೆ ಮೊಟಕಿದ. ಆವೇಶಗೊಂಡ ರಾವಣನು ಆತ್ಮಲಿಂಗವನ್ನು ಲಂಕೆಗೆ ತೆಗೆದು ಕೊಂಡು, ಹೋಗುವುದಕ್ಕೆ ಪ್ರಯತ್ನಿಸಿದ ತನ್ನ ಬಲವೆಲ್ಲವನ್ನೂ ಒಗ್ಗೂಡಿಸಿಕೊಂಡು, ತನ್ನ ಬಾಹುಗಳಿಂದ ಅದನ್ನು ಭೂಮಿ ಯಿಂದ ಕಿತ್ತಲು ಪ್ರಯತ್ನಿಸಿದ, ಶಿವನ ಆಜ್ಞೆಯ ಮೇರೆಗೆ ಆತ್ಮ ಲಿಂಗವು ಕದಲುವುದಿಲ್ಲ ಎಂದು ತಿಳಿದುಕೊಂಡು ಅಹಂ ನಿಂದ ಮೂರ್ಖತ್ವದಿಂದ ಬಲಶಾಲಿಯೆಂಬ ಗರ್ವದಿಂದ ತಾನೇನೂ ಮಾಡದಿದ್ದರೆ ಹೇಗೆ ಎಂಬ ನೋವಿನಿಂದ ಆತ್ಮ ಲಿಂಗದ ಮೇಲೆ ಶಕ್ತಿಯನ್ನೆಲ್ಲಾ ಪ್ರಯೋಗಿಸಿದ. ಆಗ ರಾವಣನ ಹಿಡಿತದಿಂದ ಆತ್ಮಲಿಂಗದ ಊರ್ಧ್ವಭಾಗ ನಾಲಕ್ಕು

ಚೂರುಗಳಾಗಿ ನಾಲ್ಕು ಪ್ರದೇಶಗಳಲ್ಲಿ ಬಿದ್ದುವು. ಕೆಳಗಿನ ಭಾಗ ಮಾತ್ರಾ ಭೂಮಿಯೊಳಗೆ  ಹುದುಗಿತು.

ತನ್ನ ಶಕ್ತಿಯನ್ನೆಲ್ಲಾ ಕಳೆದುಕೊಂಡು ರಾವಣನು ಚಿಂತಾಕ್ರಾಂತನಾಗಿ ನೀನೇ ಬಲಶಾಲಿಯೆಂದು ಶಿವನನ್ನು ಸ್ತುತಿಸಿ,ಇನ್ನು ಏನೂ ಮಾಡಲೂ ತೋಚದೇ ನಾಚಿಕೆಯಿಂದ, ಅವಮಾನದಿಂದ, ವೈಫಲ್ಯತೆಯಿಂದ ಲಂಕೆಗೆ ಹೊರಟು ಹೋದ.ಆದ್ದರಿಂದಲೇ ಈ ದೇವನು ಮಹಾಬಲೇಶ್ವರನೆಂದು ಕರೆಯಲ್ಪಡುತ್ತಿದ್ದಾನೆ. ನಂತರ ಮಹಾಶಿವನು ಪ್ರಸನ್ನನಾಗಿ, ಗಣಪತಿ ಮಾಡಿದ ಕೆಲಸ ಅಸಾಧ್ಯವಾದುದು. ಅವನ ಸಾಹಸ ದಿಂದಾಗಿ ಇಲ್ಲಿ ಲಿಂಗವು ಸ್ಥಾಪಿಸಲ್ಪಟ್ಟಿತು. ಆದ್ದರಿಂದ ಮೊದಲು ಶ್ರೀ ಮಹಾಗಣಪತಿಯನ್ನು ದರ್ಶಿಸಿದ ನಂತರವೇ ತನ್ನನ್ನು ಪೂಜಿಸಬೇಕೆಂದು ಆದೇಶಿಸಿದ.ಆಗ ಸಕಲ ದೇವತೆಗಳು ಸಂತೋಷಿಸಿ ಗಣಪತಿಯನ್ನು ಅಭಿನಂದಿಸಿದರು. ಈ ರೀತಿ ಗಜಾನನನಿಗೆ ಪ್ರಥಮ ಗೌರವ ದೊರೆಯಿತು. ಈಗಲೂ ಅಲ್ಲಿ ಗಣಪತಿಯ ತಲೆಯ ಮೇಲೆ ರಾವಣನು ಮೊಟುಕಿದ ಗುರುತನ್ನು ಕಾಣಬಹುದು.

ರಾವಣನ ಬಲದಿಂದ ಚೂರಚೂರಾದ ನಾಲ್ಕು ಭಾಗ ಗಳಲ್ಲಿ ಮೊದಲನೆಯದು ಕಾರವಾರದ ಬಳಿ ಸಂಪುಟೇಶ್ವರ, ಎರಡನೆಯದು ಹೊನ್ನಾರವರದ ಬಳಿ ಗುಣವಂತೇಶ್ವರ, ಮೂರನೆಯದು ಮುರಡೇಶ್ವರನಾಗೂ, ನಾಲ್ಕನೆಯದು ಕುಮಟ ದಲ್ಲಿ ದಾರೇಶ್ವರನೆಂದೂ ಪ್ರಸಿದ್ಧಿಯಾಗಿವೆ.ಆತ್ಮಲಿಂಗದೊಂದಿಗೆ ಬೆಸೆದುಕೊಂಡಿರುವ ಈ ಪ್ರದೇಶಗಳು ಶೈವ ಪಂಚಕ್ಷೇತ್ರ ಗಳೆಂದು ಹೆಸರು ವಾಸಿಯಾಗಿವೆ.

ಈ ಮಹಾಬಲೇಶ್ವರನು ಪಶ್ಚಿಮಾಭಿಮುಖನಾಗಿ ಸಮುದ್ರ ವನ್ನೇ ನೋಡುತ್ತಿರುವಂತಿದ್ದು, ಪಾರ್ವತೀ ಮಾತೆ  ಈ ಗುಡಿ ಯೊಳಗೆ ಹಿಂಭಾಗದಲ್ಲಿ ಪೂರ್ವಕ್ಕೆ ಅಭಿಮುಖವಾಗಿ ತಾಮ್ರ ಗೌರಿ ಎಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದಾಳೆ.

ಪ್ರತಿಯೊಂದು  ಆಲಯದಲ್ಲೂ ಹನ್ನೆರಡು ವರ್ಷಗಳಿ ಗೊಮ್ಮೆ ಆಗಮ್ಯ ಅಷ್ಟ ಬಂಧನ ಮಹೋತ್ಸವವನ್ನು ಆಚರಿಸ ಬೇಕೆಂದು ಶಾಸ್ತ್ರದ ನಿಯಮವಿದೆ. ಈ ಕಾರ್ಯಕ್ರಮವನ್ನು ಗೋಕರ್ಣದಲ್ಲಿ ಕೆಲವು ಕಾಲ ನಡೆಸಲಿಲ್ಲ. ಕ್ರಿ.ಶ.1903 ಮತ್ತು ಕ್ರಿ.ಶ. 1930 ಏಪ್ರಿಲ್‌ನಲ್ಲಿ ನಡೆದಂತೆ ದಸ್ತಾವೇಜುಗಳಿಂದ ತಿಳಿದುಬಂದಿದೆ. ನಂತರ ಕೊನೆಯಬಾರಿ 1983 ರ ಮೇ 16 ನೆಯ ತಾರೀಖಿನಂದು ಆತ್ಮಲಿಂಗವನ್ನು ಮೇಲಕ್ಕೆ ತೆಗೆದು ಸಾಲಿಗ್ರಾಮದ ಪೀಠದ  ಮೇಲೆ ಇರಿಸಿ ಎಂಟು ದಿನಗಳ ಕಾಲ ಮಂತ್ರದಿಂದ ಸಂಪ್ರೋಕ್ಷಣೆ ಮಾಡಿ ಪುನಃ ಭೂಸ್ಥಾಪಿತ ಗೊಳಿಸಿದರು. ಇಂತಹಾ ಸಮಯದಲ್ಲಿ  ಮಾತ್ರವೇ ಭಕ್ತರಿಗೆ ಆತ್ಮಲಿಂಗದ ದರ್ಶನಭಾಗ್ಯ ದೊರೆಯುತ್ತದೆ.

ಸ್ಥಳ ಪ್ರಭಾವ ಮತ್ತು ಕ್ಷೇತ್ರ ಮಹಾತ್ಮೆಯನ್ನು  ಹೊಂದಿ ರುವ ಈ ಪುಣ್ಯ ಕ್ಷೇತ್ರ, ಪಿಂಡ ಪ್ರದಾನದಿಂದ ಕೂಡಿದ ಪಿತೃ ದೋಷದ ಪೂಜೆಗಳಿಗೆ ಪ್ರಸ್ಧಿದ್ಧಿ ಪಡೆದಿದೆ ಎಂದೂ ತಮ್ಮ ಹಿರಿ ಯರನ್ನು ನೆನೆಯದವರು ಕೂಡಾ ಈ ಕ್ಷೇತ್ರದಲ್ಲಿ ನಾರಾಯಣ ಬಲಿ ಎಂಬ ದೋಷ ಪೂಜೆಗಳನ್ನು ಮಾಡಿದರೆ ಏಳುತಲೆ ಮಾರಿನವರೆಗೂ ಮುಕ್ತಿಯನ್ನು ಪಡೆಯಬಲ್ಲರೆಂದು ಆಸ್ತಿಕರ ನಂಬಿಕೆ.

ಈ ರೀತಿ ರುದ್ರನ ವರಪ್ರಸಾದದಿಂದ ಈ ಸ್ಥಳ ಪುಣ್ಯ ಪಾವನಿಯಾಗಿ ಕೈಲಾಸದಿಂದ ತರಲ್ಪಟ್ಟ ಆತ್ಮಲಿಂಗವು ಇಲ್ಲಿನ ಭೂಮಿಯಲ್ಲಿ ನೆಲೆಸಿರುವುದರಿಂದ ಇದು ಭೂ ಕೈಲಾಸ ಎಂದು ಹೆಸರು ವಾಸಿಯಾಗಿದೆ.

ಪ್ರತೀ ವರ್ಷ ಮಹಾಶಿವರಾತ್ರಿಯಂದು ಇಲ್ಲಿ ಪ್ರತ್ಯೇಕ ಉತ್ಸವಗಳು ನಡೆಯುತ್ತದೆ. ಇಲ್ಲಿ  ನಡೆಯುವ ರಥೋತ್ಸವ ಬಹಳ ಪ್ರಸಿದ್ಧಿಯಾಗಿದೆ. ಅದನ್ನು ತಿಲಕಿಸಲು ಕೇವಲ ಕರ್ನಾಟಕದಿಂದೇ ಅಲ್ಲದೇ ಆಂಧ್ರ. ತೆಲಂಗಾಣ, ತಮಿಳು ನಾಡಿನ ಪ್ರಜೆಗಳೂ ಬರುತ್ತಾರೆ. ಅದೇ ಅಲ್ಲದೇ ವಿದೇಶ ಗಳಿಂದಲೂ ಪ್ರಜೆಗಳು ಬಂದು ಈ ಕ್ಷೇತ್ರವನ್ನು ದರ್ಶಿಸಿ ಆ ಪರಶಿವನ ಕೃಪೆಗೆ ಪಾತ್ರರಾಗುತ್ತಿದ್ದಾರೆ.

## ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್‌ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನು ಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

– ಕಾರ್ಯನಿರ್ವಹಣಾಧಿಕಾರಿ

# ತೈತ್ತಿರೀಯೋಪನಿಷತ್

- ಶ್ರೀಮತಿ. ಎ. ಗೀತ ವೀರರಾಘವನ್

ಕೃಷ್ಣ ಯಜುರ್ವೇದದ ತೈತ್ತರೀಯ ಶಾಖೆಗೆ ಸೇರಿದುದು ಈ ತೈತ್ತಿರಿಯೋಪನಿಷತ್.ಮಾನವನ ದಿನ ನಿತ್ಯದ ವ್ಯವಹಾರಕ್ಕೆ ಅವಶ್ಯಕವಾದ ಆದರ್ಶಗಳನ್ನು ನೀತಿ ನಿಯಮಗಳನ್ನು ಈ ಉಪನಿಷತ್ತು ಉಪದೇಶಿಸಿದೆ. ಅಧ್ಯಯನ ಮಾಡುವ ಕ್ರಮ, ಶಿಷ್ಯನಿಗೆ ಆಚಾರ್ಯರು ಮಾಡುವ ಉಪದೇಶದ ಸಾರ, ಸತ್ಯ, ಧರ್ಮ,ಅಧ್ಯಯನ, ಪ್ರವಚನ, ತಾಯ್ತಂದೆಯಲ್ಲಿ ಭಕ್ತಿ, ಆಚಾರ್ಯರಲ್ಲಿ ಕೃತಜ್ಞತೆ, ಅತಿಥಿ ಸತ್ಕಾರ, ಹಿರಿಯರಿಗೆ ಗೌರವ ಸಮರ್ಪಣೆ ಮೊದಲಾದ ಅನೇಕ ಧಾರ್ಮಿಕ ಮತ್ತು ನೈತಿಕ ನಿಯಮಗಳನ್ನು ಪ್ರತಿಪಾದಿಸಿ ಮಹೋನ್ನತವಾಗಿ ಜೀವನ ದರ್ಶನವನ್ನು ನಿರೂಪಿಸಿದ. ಗುರು ಶಿಷ್ಯನಿಗೆ ಉಪದೇಶ ಮಾಡಿದ ನೀತಿ ಮಾತುಗಳು ಎಲ್ಲಾ ಕಾಲಕ್ಕೂ ಎಲ್ಲಾ ಜನಾಂಗಕ್ಕೂ ಸಮಾನವಾಗಿ ಅನ್ವಯಿಸುತ್ತದೆ.

ಈ ತೈತ್ತಿರಿಯೋಪನಿಷತ್ತಿನಲ್ಲಿ ಮೂರು ವಲ್ಲಿಗಳು ಅಥವಾ ಅಧ್ಯಾಯಗಳು ಇವೆ. ಅವು ಶಿಕ್ಷಾವಲ್ಲಿ, ಬ್ರಹ್ಮವಲ್ಲಿ ಮತ್ತು ಭೃಗುವಲ್ಲಿ. ಶಿಕ್ಷಾವಲ್ಲಿ ಶಿಕ್ಷಾಂ ಎನ್ನುವ ಪದದಿಂದ ಆರಂಭವಾಗುತ್ತದೆ. ಈ ಉಪನಿಷತ್ತಿನಲ್ಲಿ ಒಂದೊಂದು ವಲ್ಲಿಯಲ್ಲಿಯೂ 'ಅನುವಾಕ' ಎಂಬ ಒಳ ವಿಭಾಗವಿದೆ. ಒಂದೊಂದು ಅನುವಾಕದಲ್ಲಿಯೂ ಚಿಕ್ಕ ಚಿಕ್ಕ ಗದ್ಯವಾಕ್ಯಗಳಿವೆ.

ಶಿಕ್ಷಾವಲ್ಲಿಯಲ್ಲಿ ವೇದಭಾಗವನ್ನು ಅಧ್ಯಯನ ಮಾಡುವ ವಿಧಾನ ನಿರೂಪಿಸಿದೆ. ಅಲ್ಲದೆ ಬೇರೆ ಬೇರೆ ಫಲಗಳಿಗಾಗಿ ಮಾಡುವ ಉಪಾಸನೆಯೂ ಪ್ರಸ್ತುತವಾಗಿದೆ. ವೇದಾಧ್ಯಯನವನ್ನು ಪೂರ್ಣವಾಗಿ ಮುಗಿಸಿದ ಶಿಷ್ಯನಿಗೆ ನೀಡಿರುವ ಉಪದೇಶ ಎಲ್ಲರಿಗೂ ಅನ್ವಯಿಸುತ್ತದೆ. ಒಮ್ಮೆ ಅಧ್ಯಯನವನ್ನು ಮುಗಿಸಿದ ಮೇಲೆ ಅವನು ಪ್ರತಿದಿನವೂ ಅಧ್ಯಯನ ಮತ್ತು ಪ್ರವಚನ ಮಾಡಬೇಕು. ಇವೆರಡು ಎಂದೆಂದೂ ಮಾಡಬೇಕಾದುದು. ಇವೇ ತಪಸ್ಸು ಎಂದು ಮೌದ್ಗಲ್ಯ ನಂಬಿಕೆ. ಇದರ ಜೊತೆಗೆ ಆತ್ಮ ಗುಣಗಳು, ಶಮ, ದಮ, ಅತಿಥಿ, ಸತ್ಕಾರ ಸತ್ಯವನ್ನು ನುಡಿಯುವುದು ಇವುಗಳನ್ನು ಅಭ್ಯಾಸ ಮಾಡಬೇಕು.ಮನುಷ್ಯರಿಗೆ ಹಿತವಾದ ಸೇವೆ ಕೈಗೊಳ್ಳಬೇಕು. ಸತ್ಯವನ್ನೇ ಯಾವಾಗಲೂ ನುಡಿಯುವ ರಾಥೀತರರು ಈ ಧರ್ಮಗಳಲ್ಲಿಯೂ ಅದೇ ಪ್ರಧಾನವೆನ್ನುತ್ತಾರೆ. ನಿತ್ಯವೂ ತಪಸ್ಸಿನಲ್ಲಿ ನಿರತರಾದ ಪೌರುಶಿಷ್ಟಗಳು ತಪಸ್ಸೇ ಈ ಧರ್ಮಗಳಲ್ಲೆಲ್ಲಾ ಶ್ರೇಷ್ಠವೆನ್ನುತ್ತಾರೆ. ಮುದ್ಗಲರ ಮಕ್ಕಳಾದ ನಾಕರು ಅಧ್ಯಯನ ಮತ್ತು ಪ್ರವಚನ ಎಲ್ಲಕ್ಕಿಂತ ಶ್ರೇಷ್ಠವೆನ್ನುತ್ತಾರೆ. ಅದನ್ನು ತಪಸ್ಸು ಎನ್ನುತ್ತಾರೆ. ಅಹಂಕಾರ ಎಂಬ ವೃಕ್ಷವನ್ನು ಕತ್ತರಿಸಿ ಹಾಕಬೇಕು. ಜನರ ಹಿತವನ್ನು ಬಯಸಿ ನಡೆಯಬೇಕು.ತಾಯಿ, ತಂದೆ, ಗುರುಗಳನ್ನು ದೇವರಂತೆ ಭಾವಿಸಬೇಕು.ಗುರುಗಳಲ್ಲಿ ಇರುವ ಗುಣಗಳನ್ನು ಗುರುತಿಸಿ ನಡೆಯಬೇಕು. ದಾನ ಮಾಡುವಾಗ ಶ್ರದ್ಧೆಯಿಂದ ಕೊಡಬೇಕು. ಈ ಉಪದೇಶಗಳು ಮಾನವನ ಜೀವನ ಮೌಲ್ಯಗಳಾಗಿರುವುದರಿಂದ ಎಲ್ಲರೂ ಆದರಿಸಬೇಕು. ದೇವಪಿತೃಕಾರ್ಯಗಳಲ್ಲಿ ದೋಷಿಗಳಾಗಬಾರದು.

ಎರಡನೆಯ "ಬ್ರಹ್ಮವಲ್ಲಿ " ಅಧ್ಯಾಯದಲ್ಲಿ ಬ್ರಹ್ಮ ವಸ್ತುವಿನ ಲಕ್ಷಣವನ್ನು ಹೇಳಿ ಸೃಷ್ಟಿ ಕ್ರಮದ ವಿವೇಚನೆಯನ್ನು ಮಾಡಿದ್ದಾರೆ. ಈ ಸೃಷ್ಟಿಯ ರಹಸ್ಯ ಮಾನವನ ಯೋಚನೆಗೆ ಎಟುಕಲಾರದುದು. ಬಹಳ ನಿಗೂಢವಾದುದು.ಯಾರು ಎಷ್ಟೇ ಯೋಚಿಸಿದರೂ ಇಷ್ಟು ಎಂದು ತಿಳಿಯುವುದಕ್ಕಾಗಲಿ ಹೇಳುವುದಕ್ಕಾಗಲಿ ಆಗದುದು.ಜಗತ್ತಿನಲ್ಲಿ ಸಕಲ ವ್ಯಾಪಾರವೂ ಈ ಒಂದು ವಿಶ್ವ ಶಕ್ತಿಗೆ ಅಧೀನವಾಗಿದೆ.

ಬ್ರಹ್ಮವು ಸತ್ಯ, ಜ್ಞಾನ ಮತ್ತು ಅನಂತ. ಹೃದಯ ಗುಹೆಯಲ್ಲಿ ಮರೆಯಾಗಿರುವ ಬ್ರಹ್ಮವನ್ನು ಯಾರು ಉಪಾಸಿಸುವರೋ ಅವರು ಪರಮವ್ಯೂಹದಲ್ಲಿ ಆ ಬ್ರಹ್ಮವನ್ನು ಸಮಸ್ತ ಕಲ್ಯಾಣಗುಣಗಳೊಡನೆ ಅನುಭವಿಸುತ್ತಾರೆ.

ಅನ್ನದಿಂದಲೇ ಎಲ್ಲಾ ಜೀವಿಗಳೂ ಉಂಟಾಗುತ್ತವೆ. ಅವರು ಅನ್ನದಿಂದಲೇ ಬದುಕುತ್ತಾರೆ. ಆದುದರಿಂದ ಅನ್ನವು ಎಲ್ಲಾ ಭೂತಗಳಿಗಿಂತಲೂ ಹಿರಿದಾದುದು. ಆದ್ದರಿಂದ ಅದನ್ನು ಎಲ್ಲರಿಗೂ ಔಷಧಿ ಎಂದು ಹೇಳಿದೆ. ಯಾರು ಅನ್ನವನ್ನು ಬ್ರಹ್ಮವೆಂದು ಉಪಾಸಿಸುವರೋ ಅವರೆಲ್ಲರೂ ಅನ್ನವನ್ನು ಹೊಂದುತ್ತಾರೆ. ಬ್ರಹ್ಮದ ಅರಿವನ್ನು "ಬ್ರಹ್ಮವಲ್ಲೀ" ಮಾಡಿಕೊಡುತ್ತದೆ.

ಮೂರನೆಯ "ಭೃಗುವಲ್ಲಿ" ಯಲ್ಲಿ ಬ್ರಹ್ಮವೇ ಆನಂದವೆಂದು ವರ್ಣಿಸಿದೆ. ಈ ವಲ್ಲಿಯಲ್ಲಿ ಸಕಲ ಜಗತ್ತಿಗೂ ಕಾರಣವಾದ ಬ್ರಹ್ಮವಸ್ತುವಿನ ಮಹತ್ತ್ವವನ್ನು ನಿರೂಪಿಸಿ ಆ ಬ್ರಹ್ಮವನ್ನು ಯಥಾವತ್ತಾಗಿ ಯಾವನು ತಿಳಿಯುವನೋ ಅವನು ಅಮೃತನಾಗುತ್ತಾನೆ. ನಿತ್ಯಾನಂದವನ್ನು ಹೊಂದುತ್ತಾನೆ ಎಂದು ಪ್ರತಿಪಾದಿಸಿದೆ.



'ಬ್ರಹ್ಮವು ಇದೆ' ಎಂಬುದನ್ನು ಯಾವನು ತಿಳಿದಿಲ್ಲವೋ ಅವನು "ಅಸತ್ತೇ" ಆಗುತ್ತಾನೆ. 'ಬ್ರಹ್ಮವು' ಇದೆ ಎಂದು ತಿಳಿದವನನ್ನು 'ಸತ್' ಇರುವವನು ಎಂದು ಲೋಕದವರು ತಿಳಿಯುತ್ತಾರೆ.

ಯಾವ ಆನಂದದಿಂದ ವಾಕ್ಕು ಮತ್ತು ಮನಸ್ಸುಗಳು ಪೂರ್ಣವಾಗಿ ಗ್ರಹಿಸಲಾಗದೆ ಹಿಂತಿರುಗುವುವೋ ಅಂಥಾ ಬ್ರಹ್ಮದ ಆನಂದವನ್ನು ತಿಳಿದವನು ಯಾವಾಗಲೂ ಭಯಕ್ಕೊಳಗಾಗುವುದಿಲ್ಲ.

ಮೊದಲು ಇದೆಲ್ಲವೂ ನಾಮ, ರೂಪ ವಿಭಕ್ತವಿಲ್ಲದೆ ಬ್ರಹ್ಮವೇ ಆಗಿದ್ದಿತು. ಆದ್ದರಿಂದ ನಾಮರೂಪ ವಿಭಾಗಗಳನ್ನುಳ್ಳ "ಸತ್" ಉಂಟಾಯಿತು. ಈ ಬ್ರಹ್ಮವು ತನ್ನನ್ನು ತಾನೇ ಉಂಟು ಮಾಡಿಕೊಂಡಿತು. ಆದ್ದರಿಂದ ಅದು "ಸ್ವಕೃತ" ಎಂದು ಹೇಳಲ್ಪಡುತ್ತದೆ.

ಆ 'ಸ್ವಕೃತವು' (ಬ್ರಹ್ಮವು) ರಸ ಅಥವಾ ಆನಂದ. ಆ ರಸ ಸ್ವರೂಪಿಯನ್ನು ಪಡೆದುಕೊಂಡು ಒಬ್ಬನು ಆನಂದ ಉಳ್ಳವನಾಗುತ್ತಾನೆ.

ಆ ಬ್ರಹ್ಮನಿಗೆ ಹೆದರಿ ವಾಯುವು ಬೀಸುತ್ತಾನೆ. ಇವನಿಗೆ ಹೆದರಿ ಸೂರ್ಯನು ಉದಯಿಸುತ್ತಾನೆ. ಇವನಿಗೆ ಹೆದರಿ ಅಗ್ನಿಯೂ, ಇಂದ್ರನೂ ಅವರವರ ಕೆಲಸ ಮಾಡುತ್ತಾರೆ. ಇವನಿಗೆ ಹೆದರಿ ಐದನೆಯದಾದ ಮೃತ್ಯುವು ಧಾವಿಸುತ್ತಾನೆ.

ಈ ಉಪನಿಷತ್ತಿನಿಂದ ತಿಳಿದು ಬರುವ ಮುಖ್ಯ ಉಪದೇಶ ಈ ರೀತಿಯಾಗಿದೆ.

೧) ಮನುಷ್ಯನು ಜ್ಞಾನ ಸಂಪಾದನೆಯನ್ನು ಶ್ರದ್ಧೆಯಿಂದ ಮಾಡಬೇಕು.

೨) ತನ್ನ ಅಲ್ಪತ್ವವನ್ನು ಮತ್ತು ಜಗತ್ಕಾರಣದ ಮಹತ್ವವನ್ನು ಕಂಡು ವಿನೀತನಾಗಿ ಇಲ್ಲಿಯವರೆಗೆ ಸರ್ವಭೂತ ಹಿತಪರನಾಗಿರಬೇಕು.

೩) ಮನುಷ್ಯನ ಜೀವನದ ಪರಮ ಉದ್ದೇಶ ಬ್ರಹ್ಮಜ್ಞಾನವನ್ನು ಪಡೆದುಕೊಳ್ಳುವುದೇ ಆಗಬೇಕು.

೪) ಅಹಂಕಾರವನ್ನು ತ್ಯಜಿಸಿ ಆತ್ಮಗುಣಗಳನ್ನು ಸಂಪಾದಿಸಿ ಸತ್ಯ, ಧರ್ಮ, ಅಧ್ಯಯನ, ದಾನ ಮೊದಲಾದ ಧರ್ಮಗಳನ್ನು ಅನುಷ್ಠಿಸುತ್ತಾ ಜೀವನದಲ್ಲಿ ಕೃತಕೃತ್ಯನಾಗಿ ಸಾರ್ಥಕತೆಯನ್ನು ಪಡೆಯಬೇಕು.

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥ ತಿರುಮಲೆ ತಿರುಪತಿ ದೇವಸ್ಥಾನದವರು **ಟೋಲ್ ಫ್ರಿ ನಂಬರ್** ಅನ್ನು ಏರ್ಪಡಿಸಿದ್ದಾರೆ.ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪ್ರದಿಸಬಹುದು.

ತಿರುಮಲೆ ತಿರುಪತಿ ದೇವಸ್ಥಾನಗಳು
**ಟೋಲ್ ಫ್ರಿ ನಂಬರ್**
**18004254141**

**ಈ ಅವಕಾಶವನ್ನು ಎಲ್ಲರೂ ಉಪಯೋಗಿಸಿಕೊಳ್ಳಿ!**

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**




123 ನೆ ಯ ಶಾಸನವು ಆಲಯದಲ್ಲಿ ಆರು ದೀಪಗಳನ್ನು ಬೆಳಗಿಸಿಡಲು ಆರು ದೀಪದ ಕಂಭಗಳನ್ನು ಏರ್ಪಡಿಸಿದ ಬಗ್ಗೆ ತಿಳಿಸುವುದು.

125 ಹಾಗೂ 126 ನೆಯ ಶಾಸನಗಳು ಒಬ್ಬ ಆಳ್ವಾರಳಿಗೆ-ಇವರ ಹೆಸರು ತ್ರುಟಿತವಾಗಿದೆ-ಪ್ರತಿನಿತ್ಯ ಹಾಲಿನ ನೈವೇದ್ಯಕ್ಕೆಂದು ಹಸುಗಳನ್ನು ದಾನವಾಗಿ ಪಡೆದದ್ದನ್ನು ತಿಳಿಸುವುದು. ಈ ದಾನವನ್ನು ಸ್ವೀಕರಿಸಲು ಸಭೆಯವರು ಒಪ್ಪಿದ್ದನ್ನು ಹೇಳಲಾಗಿದೆ. ಆದರೆ ತಿರುಮಲೆಯಲ್ಲಿ ವೆಂಕಟೇಶ್ವರಾಲಯದಲ್ಲಿ ಯಾವ ಆಳ್ವಾರ್ ವಿಗ್ರಹವೂ ಇಲ್ಲ.

ಕುಲೋತ್ತುಂಗ ಚೋಳನು ತನ್ನ ರಾಣಿ ಉಲಗಮುಡೈಯಾಳ ಜೊತೆ ಸೇರಿ ರಾಜ್ಯಭಾರ ಮಾಡುತ್ತಿರುವ ಕಾಲದಲ್ಲಿ ತಿರುಮಲೆಯ ಆಳ್ವಾರರಿಗೆ ಹಾಲು ಮೊಸರುಗಳನ್ನು ಆಕೆ ಸಮರ್ಪಿಸಲು ಏರ್ಪಾಡು ಮಾಡಿರುವುದನ್ನು 27 ನೇ ಶಾಸನದಲ್ಲಿ ಕಾಣುವೆವು.ಇಲ್ಲಿನ ಎರಡನೆಯ ಸಾಲು "ನಿನ್ರಪೆರುಮಾಳ" ರನ್ನು ಉಲ್ಲೇಖಿಸುವುದರಿಂದಾಗಿ 125 ಹಾಗೂ 126 ನೇ ಶಾಸನಗಳಲ್ಲಿ ಹೇಳಲಾದ ಆಳ್ವಾರರು ಶ್ರೀ ವೆಂಕಟೇಶ್ವರ ಸ್ವಾಮಿಯೇ ಎಂದು ನಿಸ್ಸಂದೇಹವಾಗಿ ಹೇಳಬಹುದು.

130 ಹಾಗೂ 131 ನೇ ಶಾಸನಗಳೆರಡೂ ತಿರುವೆಂಕಟಮುಡೈಯಾನನಿಗೆ ನಂದಾದೀಪಗಳ ಏರ್ಪಾಡಿಗಾಗಿ ಹಸು ಹಾಗೂ ಗೂಳಿಗಳ ಬೆಲೆಯಾಗಿ 310 ಪಣವನ್ನು ಠೇವಣಿ ಮಾಡಿದ ದಾತರ ಬಗ್ಗೆ ಹೇಳುವುದು. 132 ರಲ್ಲಿ ನಾಲ್ಕು ದೀಪಗಳನ್ನು ಸ್ವಾಮಿಗೆ ಏರ್ಪಡಿಸಿದಂತಿದೆ. 134, 135 ಸಹ ದೀಪಗಳಿಗಾದ ಏರ್ಪಾಡುಗಳೇಯೆ. 142, 143 ಶಾಸನಗಳು ಎರಡು ದೀಪಗಳನ್ನೂ, ಎರಡು ದೀಪದ ಕಂಬಗಳನ್ನೂ ಯಾವುದೋ ರಾಜನ ಆಡಳಿತದ 22 ವರ್ಷದಾನಮಾಡಿ ದಂತಿದೆ. 169 ನೆಯ ಶಾಸನವು 32 ಹಸುಗಳನ್ನು ಒಂದು ಗೂಳಿಯನ್ನೂ ನೀಡುತ್ತ ಒಂದು ದೀಪದ ಕಂಭವನ್ನೂ ದಾನ ನೀಡಿದ್ದನ್ನು ತಿಳಿಸುವುದು. 150ನೆಯ ಶಾಸನವು ಚೇರನೈ ವೆನ್ರಾನ್ (ಚೇರನನ್ನು ಗೆದ್ದವನು) ಕಟ್ಟಿಸಿದ ಮಂಟವನ್ನು ಆಲಯದ ಉದ್ಯೋಗಿಗಳಲ್ಲಿ ಒಬ್ಬನಾಗಿದ್ದ ತಂಬಿರಾನ್ನರ್ ಆಲಯದಲ್ಲಿ ವಿನ್ನಪಂ ಸೆಯ್ಯುವಾರ್ (ಉತ್ಸವದ ಆರಂಭಕ್ಕೆ ಮುನ್ನ ಅನುಮತಿ ಪಡೆಯತಕ್ಕವನು)ಗಳನ್ನು ಹೆಸರಿಸುವುದು.

151, 152, 153, 154 ಗಳು (ಅನ್ನದಾನ ಮಾಡಲು) 400 ಪಣಗಳನ್ನು ಠೇವಣಿಯಾಗಿಟ್ಟು ಹಲವು ನೈವೇದ್ಯಗಳನ್ನು ಮಾಡಿಸಲೂ, 2000 ಕುಳಿ ಭೂಮಿದಾನ ಏರ್ಪಡಿಸಿದ್ದನ್ನು ತಿಳಿಸಿದರೆ, 154 ನೆಯ 155 ನೆಯ ಶಾಸನಗಳು ಮೊದಲ್ ಸಂಧಿಯ - ಮೊದಲನೆಯ ನೈವೇದ್ಯವನ್ನು ಅವಿಷ್ಟಂ (ಧನಿಷ್ಠ) ನಕ್ಷತ್ರದ ದಿನ ಹೆಸರಿಸುವುವು. ಜೊತೆಗೇ ಒಂದು ನಂದಾ ದೀಪವನ್ನು ಹೆಸರಿಸುವುದು. 166 ನೆ ಯ ಶಾಸನವು ಒಂದು ತಿರುಬ್ಬೋನಕದ ಏರ್ಪಾಡನ್ನು ಸೂಚಿಸುವುದು. 167 , 168 ಶಾಸನಗಳು, ಹೂದೋಟಗಳನ್ನು ನಿವೇದನೆಗಳನ್ನು ಕುರಿತು ಹೇಳುತ್ತವೆಯಾದರೆ, 168 ನೆಯ ಶಾನವು ಕೋಡೈ ತಿರುನಾಳ್ (ಗ್ರೀಷ್ಮೋತ್ಸವನ್ನು ) ಕುರಿತು ಹೇಳುವುದು.

ತಿರುಚಾನೂರು ಆಲಯದಲ್ಲಿ ನಮಗೆ ಹದಿನಾರು ತ್ರುಟಿತ ಶಾಸನಗಳು ದೊರೆತಿವೆ. ಇವುಗಳಲ್ಲಿ 118, 119, 120, 137 ನೇ ಶಾಸನಗಳು ತಿರುವಿಳಂಕೋಯಿಲ್ ಪೆರುಮಾನಡಿಗಳನ್ನು-ಹೊಸ ಆಲಯದ ದೇವರನ್ನು ಕುರಿತು ಹೇಳುವುದು. 118 ನೇ ಶಾಸನವು ಹಲವು ಕಳಂಜು ಚಿನ್ನದ ದಾನದಿಂದ ಮಾಡತಕ್ಕ ನೈವೇದ್ಯವನ್ನು ಕುರಿತು ಹೇಳುವುದು.119 ರಲ್ಲಿ ಚೋಳನಾಡಿನ ಒಂದಷ್ಟು ಭೂಮಿಯ ದಾನವು ತಿಳಿಯುವುದು. 120 ನೆಯ ಶಾಸನದಲ್ಲಿ ಹತ್ತು ಪೊನ್ ಹಣದ ದಾನದಿಂದ ಹಲವಾರು ಬ್ರಾಹ್ಮಣರಿಗೆ ಭೋಜನ ನೀಡುವಿಕೆಯ ತಿರುವುಣ್ಣಲಿಕೈಪುರಂ ಬಗ್ಗೆಯೂ,137ರಲ್ಲಿ ಗರ್ಭಗುಡಿಯಲ್ಲಿ ಸಮರ್ಪಿಸುವ ನೈವೇದ್ಯದ ಬಗ್ಗೆ ತಿಳಿದು ಬರುತ್ತದೆ.

121 ನೇ ಶಾಸನವು ಚಿನ್ನದ ರೂಪದಲ್ಲಿ ಸಂಗ್ರಹಿಸಿದ ಸುಂಕದಿಂದಲೂ ಪ್ರಾಯಶಃ ಕಡಿಮೆ ಬಿದ್ದ ಮೊತ್ತವನ್ನು ನಗದು ಹಣದ ರೂಪದಲ್ಲಿಯೂ ಪಡೆದು ಅದರಿಂದಾಗಿ ನೈವೇದ್ಯವನ್ನು ನೀಡಲೆಂದು ಆದ ಶಾಸನ. 127, 128, 129 ಶಾಸನಗಳು ತಿರುವೆಂಕಟದೇವರಿಗೆ ದಾನಿಗಳು ತಲಾ 40 ಕಳಂಜು ಚಿನ್ನವನ್ನು ನೀಡಿ ಬೇರೆ ಬೇರೆ ಸೇವೆಗಳನ್ನು ಏರ್ಪಡಿಸಿದ

ಹದಿನೆಂಟು ನಾಡಿನ ಎಂಬೆರುಮಾನಡಿಯಾರರ ದಾನಗಳನ್ನು ವೈಷ್ಣವರು ರಕ್ಷಿಸಿಕೊಂಡು ಹೋಗಬೇಕೆಂದು ಬೇಡುತ್ತವೆ. 139 ನೇ ಶಾಸನವು ತೇವಣಿಯಿಟ್ಟ ಚಿನ್ನದಿಂದ ಪ್ರತಿನಿತ್ಯವೂ ನಿಷದಪ್ಪಡಿ ನಿವೇದನೆಯಾಗಬೇಕೆನ್ನುವುದು. 140 ನೇ ಶಾಸನವು 100 ಕಳಂಜು ಚಿನ್ನದ ದಾನವನ್ನು ಕುರಿತು ಹೇಳುವುದು. ಇದರಿಂದ ತಿರುಚಾನೂರು ಸಭೆಯವರು ಭತ್ತ ಬೆಳೆಯುವ ಭೂಮಿಯನ್ನು ಕೊಂಡರೆಂದು ತಿಳಿಯುತ್ತದೆ.141 ನೇ ಶಾಸನವು ದೀಪವನ್ನು ಕುರಿತದ್ದಾಗಿದೆ. 170 ನೆಯ ಶಾಸನವು ತಿರುವೆಂಕಟ ಮುಡ್ಯೆಯಾನನಿಗೆ ನಿವೇದನೆಗೆಂದು 10 ತೂಂಬು (80 ಅಳತೆ) ಅಕ್ಕಿಯನ್ನೂ, ಅದಕ್ಕೆ ತಕ್ಕ ಪ್ರಮಾಣದ ತುಪ್ಪ, ತರಕಾರಿ, ಬೇಳೆಗಳು, ಉಪ್ಪು, ಮೊಸರು, ವೀಳೆಯದಲೆ, ಅಡಿಕೆ, ಗಂಧ, ಹಾಗೂ ದೀಪಕ್ಕೆ ಎಣ್ಣೆಯ ಬಗ್ಗೆ ಮಾತನಾಡಿದರೆ, 146 ನೆಯ ಶಾಸನವೂ ಸಹ 80 ವಟ್ಟಿ (ಪಟ್ಟಿ) ಭತ್ತವನ್ನೂ, ಎಲೆಯಡಿಕೆ, ದೇವರ ದೇಹಕ್ಕೆ ಸವರುವ ಎಣ್ಣೆಯನ್ನು, ಮತಿತ್ತರ ಸಾಧನಗಳನ್ನು ಕುರಿತು ಹೇಳುವುದು. 144 ನೇ ಶಾಸನವು ಗೋವಿಂದ ಪೆರುಮಾಳ್ ಹಾಗೂ ನಾರಾಯಣ, ತಿರುವಿಳಂಕೋಯಿಲ್, ಅಳಗಿಯ ಪೆರುಮಾಳ್‌ರನ್ನು ಹೆಸರಿಸುತ್ತ ಶ್ರೀ ಭಂಡಾರಕ್ಕೆ ಸಲ್ಲಿಸಿದ ಒಂದಷ್ಟು ಹಣವನ್ನು ಕುರಿತು ಹೇಳುವುದು. ನಾರಾಯಣ ಎಂದರೆ ತಿರುವೆಂಕಟ ನಾಥ ಯಾದವರಾಯನು ತಿರುಪತಿಯಲ್ಲಿ ಪ್ರತಿಷ್ಠಾಪಿಸಿದ ಯಾದವನಾರಾಯಣ ವಿಗ್ರಹವಾಗಿರಬೇಕು. ಇದಕ್ಕೆ ನಿವೇದನೆಗೆಂದು ಆತ 100, 101 ನೆಯ ಶಾಸನಗಳಲ್ಲಿ ಪ್ರಾವಧಾನ ಮಾಡಿದ್ದು, ಅಳಗಿಯ ಪೆರುಮಾಳ್ ದೇವರು (ಸಂಪುಟ 34 ಪುಟ - 54, 55,ಸಂಪುಟ-1) ತಿರುಚಾನೂರಿನ ಸುಂದರರಾಜ ಸ್ವಾಮಿಯೇ ಆಗಿರಬೇಕು.

171, 172, 173, ಹಾಗೂ 175 ನೇ ಶಾಸನಗಳು ನಿವೇದನೆ, ನಂದನ ವನಗಳೊಡನೆ ಉಡ್ಯೆಯವರು, ರಾಮಾನುಜ, ವೆಂಕಟತ್ತುರೈವರ್ ಮುಂತಾದ ತಿರುಪತಿಯ ಆಚಾರ್ಯ ಪುರುಷರನ್ನು ಹೆಸರಿಸುತ್ತವೆ. ಆನಂದಾಳ್ವಾನರು ಭಗವದ್ರಾಮಾನುಜರ ಪಟ್ಟ ಶಿಷ್ಯರೆನ್ನಲಾಗಿದ್ದು, ಶ್ರೀ ವೆಂಕಟೇಶ್ವರ ಸ್ವಾಮಿಯ ಸೇವೆಗೆಂದು ತಿರುಮಲೆಯಲ್ಲಿಯೇ ನೆಲೆಸಿದವರಾಗಿದ್ದರೆನ್ನಲಾಗಿದೆ.ತಿರುಮಲೆಯ ಸ್ವಾಮಿ ಆಲಯದ ದಕ್ಷಿಣಕ್ಕೆ ಆಳ್ವಾರ್ ಟ್ಯಾಂಕ್ ಎಂಬ ಕರೆಯನ್ನು ನಿರ್ಮಿಸಿದರು ಎಂದು ನಂಬಲಾಗಿದೆ. ತಿರುಮಲೆಯಲ್ಲಿಯೇ ನೆಲೆನಿಂತ ಇವರ ಮೊಮ್ಮಗ ವೆಂಕಟತ್ತುರೈವರ್ ಇವರ ದಾನ ಧರ್ಮಕಾರ್ಯವನ್ನು ಕೈಗೆತ್ತಿಕೊಂಡು ಮುಂದುವರೆಸಿದರೆನ್ನಲಾಗಿದೆ (171) ತಾವೋ ಅಥವಾ ಬೇರೆಯವರೋ ಪ್ರತಿಷ್ಠಾಪಿಸಿದ ಭಗವದ್ರಾಮಾನುಜರ ವಿಗ್ರಹಕ್ಕೆ ಚಂದನ, ಹೂವಿನ ಹಾರ, ಅಲಂಕಾರಗಳನ್ನೂ ಮಾಡುತ್ತ ಪೂಜಿಸುತ್ತಿದ್ದರೆನ್ನಲಾಗಿದೆ. (171, 172) ರಾಮಾನುಜ ತಿರುನಂದನವನಂ ಎಂಬ ಹೂದೋಟವನ್ನು ಬೆಳಸಿದರು ಎನ್ನಲಾಗಿದೆ. (175) ಈತ ತಿರುಪತಿಯ ಆಚಾರ್ಯ ಪುರುಷರಲ್ಲಿ ಒಬ್ಬರು. ರಾಮಾನುಜರ ಮರಣ ಸಮಯದಲ್ಲಿ ಎಂದರೆ ಕ್ರಿ.ಶ. 1137 -38 ರಲ್ಲಿ ವೆಂಕಟತ್ತುರೈವರು ತಮ್ಮ ತಾರುಣ್ಯದಲ್ಲಿದ್ದಿರಬೇಕು. ತಿರುಮಲೆಯಲ್ಲಿ ರಾಮಾನುಜರ ವಿಗ್ರಹವನ್ನು ಈತ ಪ್ರತಿಷ್ಠಾಪಿಸಿದ್ದೇ ಆದರೆ ಅದು ಹನ್ನೆರಡನೆಯ ಶತಮಾನದ ಮೂರನೆಯ ಹಾಗದಲ್ಲಿ ಎಂದರೆ ಕ್ರಿ.ಶ. 1150-75 ರ ನಡುವೆ ನಡೆದಿರಬೇಕು.ಹಾಗಾದಲ್ಲಿ 79 ಶಾಸನದಲ್ಲಿನ ರಾಮಾನುಜರ - ಎಂಬೆರುಮಾನರ ಹೆಸರಿನ ಉಲ್ಲೇಖ ಸೌಮ್ಯ ಸಂವತ್ಸರದಲ್ಲಿ (1248 -49 ) ಅವರಿಗಾಗಿ ಮಾಡಿದ ನೈವೇದ್ಯದ ಏರ್ಪಾಡಿನದ್ದಾಗಿರಬೇಕು.

176 ನೇ ಶಾಸನವು ಚಿಕ್ಕದಾಗಿರುವ ಪೂರ್ಣಶಾಸನವಾಗಿದ್ದು ತಿರುಪತಿ ಹಾಗೂ ಅವಿಲಾಲಿ ಗ್ರಾಮಗಳ ನಡುವಣ ಗಡಿಗಳನ್ನು ಗುರುತಿಸುವುದು. (ಅವಿಲಾಲ ಗ್ರಾಮವು ತಿರುಪತಿಯ ದಕ್ಷಿಣದಲ್ಲಿ ಒಂದು ಮೈಲಿ ದೂರದಲ್ಲಿರುವ ಗ್ರಾಮ.) ತಿರುಪತಿಯ ನೈಋತ್ಯ ಮೂಲೆಯಲ್ಲಿರುವ ಪೆರಿ ಏರಿಯಿಂದ ಹಿಡಿದು ಜೀಯರ್ ಕುಳಿಯ ಪಶ್ಚಿಮದಲ್ಲಿ ನೆಟ್ಟಿರುವ ಸರಹದ್ದು ಕಲ್ಲನ್ನು ಗುರುತಿಸಿದ.

177ನೇ ಶಾಸನವು ತಿರುಮಲೆಯ ಬೆಟ್ಟಕ್ಕೆ ಹೋಗುವ ಮೆಟ್ಟಿಲ ಹಾದಿಯ ಆರಂಭದಲ್ಲಿರತಕ್ಕ ಅಲಿಪಿರಿಯಲ್ಲಿ ಪೆರಿಯಾಳ್ವಾರ್ ಗುಡಿಯಲ್ಲಿದ್ದು ಸರ್ಪಗಿರಿಯಪ್ಪನಿಗಾಗಿ ಒಂದು ಚಿಕ್ಕ ಬಾವಿಯನ್ನು ಕಾಮವಲ್ಲಿಯೆಂಬಾತ ತೋಡಿಸಿ ನೀಡಿದನು ಎನ್ನುವುದು. (ಹಾವಿನಂತೆ ಸುರುಳಿಸುತ್ತಿ ನಿಂತಿರುವ ಆದಿಶೇಷನ ಬೆಟ್ಟ ಸರ್ಪಗಿರಿ) ಮೂವತ್ತೆರಡು ಧರ್ಮದ ಕೆಲಸಗಳ ಬಗ್ಗೆ ತಿಳಿಸಿ ಕೊಟ್ಟ ತನ್ನ ತಾಯಿಯ ಹೆಸರನ್ನಿಟ್ಟ ಎನ್ನುವುದು.

ಸಂಪುಟ 1 ರಲ್ಲಿ 10, 11 ನೆ ಯ ಶಾಸನಗಳು ಮೂರನೇ ರಾಜೇಂದ್ರ ಚೋಳನ ಆಡಳಿತದ ಮೊದಲ ವರ್ಷಗಳಲ್ಲಿ ಸೆಂದಮಂಗಳದ (ದಕ್ಷಿಣ ಆರ್ಕಾಡು ಜಿಲ್ಲೆ) ರಾಜ್ಯಪಾಲನಾಗಿ ಕೆಲಸ ನಿರ್ವಹಿಸಿದ ಮಹಾರಾಜ ಸಿಂಹನೆಂದು ಹೆಸರಾದ ಪಲ್ಲವ ರಾಜಕುವರ ಸರ್ವಜ್ಞ ಖಡ್ಗಮಲ್ಲನನ್ನು ಹೆಸರಿಸುತ್ತ ಆತನು ಬಿರುದುಗಳನ್ನು ಉಗ್ಘಡಿಸುತ್ತವೆ.- ಕಾಠಕ ಕುಲತಿಲಕ, ಕಾಂಚೀ ನಾಯಕ, ಕವಿಸಾರ್ವಭೌಮ, ಸಹೋದರ ಸುಂದರ (ಒಂದನೇ ಜಟಾವರ್ಮ ಸುಂದರ ಪಾಂಡ್ಯನ ಸಹೋದರ ನಂತಿದ್ದವನು) ಕರ್ನಾಟಕ ಲಕ್ಷ್ಮೀ ಲುಂಠಕ (ಕರ್ನಾಟ-ದ್ವಾರ ಸಮುದ್ರದ ಹೊಯ್ಸಳ ರಾಜ್ಯವನ್ನು ಸೂರೆಗೊಂಡವನು) ಗಣಪತಿ ಅಟ್ಟಿ ವೀರ ಪದಮುದ್ರ (ವಾರಂ ಗಲ್ಲಿನ ಗಣಪತಿ ದೇವನು ತೊಡಿಸಿದ ಕಾಲಿನ ಗಂಡ ಪೆಂಡೇರದವನು) ಮುಂತಾಗಿ, ಈ ಎರಡೂ ಶಾಸನಗಳಲ್ಲಿ ಇವನು ಆಲಯಕ್ಕೆ ಮಾಡಿದ ಯಾವ ಸೇವೆಯೂ ಉಕ್ತವಾಗಿಲ್ಲ. ಈತ ಒಬ್ಬ ಮಹತ್ವಾಕಾಂಕ್ಷಿ ಸಾಮಂತ ರಾಜನಾಗಿದ್ದು ಚೋಳ ಸಾಮ್ರಾಟನ ಭಾವ ಮೈದುನನಾದ ಕರ್ನಾಟಕದ ರಾಜನು ಆತನನ್ನು ಸೆರೆಯಿಂದ ಬಿಡಿಸಿ ತಂಜಾವೂರಿನ ಸಿಂಹಾಸನದ ಮೇಲೆ ಮತ್ತೆ ಕೂರಿಸಿದನು. ಈತನ ದಾಖಲೆಗಳು ಶ್ರೀಶೈಲಂ ಆಲಯದಲ್ಲಿ ಸಂಸ್ಕೃತದಲ್ಲಿ ಲಿಖಿತವಾಗಿದೆ. ಈತನು ಕ್ರಿ.ಶ. 1225 ರಿಂದ 1272-73 ರ ವರೆಗೆ ಆಳಿದನು.

-(ಸಶೇಷ)



# ಆರೋಗ್ಯಕ್ಕಾಗಿ ಮೆಂತ್ಯೆ

– ಮೂಲ : ಡಾ|| ಸಿ. ಮಧುಸೂದನಶರ್ಮ
9000761390
ಅನುವಾದ : ಶ್ರೀಮತಿ

"ಪ್ರಾಣಃ ಪ್ರಾಣಭೃತಾಮನ್ನಂ ಮನ್ನಂ ಲೋಕೋಽಭಿಧಾವತಿ"

ಎನ್ನುತ್ತದೆ ಚರಕ ಸಂಹಿತೆಯೆಂಬ ಪ್ರಾಮಾಣಿಕ ಆಯುರ್ವೇದಗ್ರಂಥ. ಪ್ರಾಣವಿರುವ ಪ್ರತಿ ಜೀವಿಗೂ ಅನ್ನ ಎಂದರೆ ಆಹಾರ ಬೇಕೇ ಬೇಕು ಎಂಬುದು ಇದರ ಅರ್ಥ. ಆಹಾರದಿಂದ ಈ ಶರೀರ ಉದ್ಭವಿಸುತ್ತದೆಂದೂ ಆಹಾರದಿಂದಲೇ ಈ ಕಾಯಕ್ಕೆ ರೋಗಗಳು ಬರುವುದೆಂದೂ, ಹಿತಕರವಾದ ಆಹಾರ ಆರೋಗ್ಯಕ್ಕು, ಅಹಿತಕರ ಆಹಾರ ಅನಾರೋಗ್ಯಕ್ಕೂ ದಾರಿ ಮಾಡಿಕೊಡುತ್ತದೆಂದೂ ಸಹಾ " ಆಹಾರ ಸಂಭವಂ ವಸ್ತುಃ ರೋಗಶ್ಚಾಹಾರ ಸಂಭವಃ। ಹಿತಾ ಹಿತ ವಿಶೇ ಶ್ಚ ವಿಶೇಷಃ ಸುಖ ದುಃಖಯಾಃ॥ ಎಂಬ ಶ್ಲೋಕದ ಮೂಲಕ ಚರಕ ಮಹರ್ಷಿಯು ತಮ್ಮ ಚರಕಸಂಹಿತೆಯಲ್ಲಿ ತಿಳಿಸಿದ್ದಾರೆ.

ಅಂತಹ ದೈವದತ್ತವಾದ ಆಹಾರ ಪದಾರ್ಥಗಳ, ಪಾಕಶಾಲೆಯ ತಯಾರಿಕೆಗಳಲ್ಲಿ ರುಚಿಗೆ, ಸುವಾಸನೆಗೆ ಅತ್ಯಂತ ಸರ್ವೇ ಸಾಮಾನ್ಯವಾಗಿ ನಾವು ಬಳಸುವ ಆಹಾರೌಷಧಿಯಾದ ಮೆಂತ್ಯೆಯ ಬಗ್ಗೆ ಪ್ರಸ್ತುತ ತಿಳಿದುಕೊಳ್ಳೋಣ.

ಮೆಂತ್ಯೆಯನ್ನು ಸಂಸ್ಕೃತದಲ್ಲಿ ಮೇಧಿಕಾ ಎಂದು ವ್ಯವಹರಿಸುತ್ತಾರೆ. "ಮೇಧಿಕಾ ವಾತಶಮನಿ ಶ್ಲೇಷ್ಮಘ್ನಿ ಜ್ವರ ನಾಶಿನಿ" ಎನ್ನುತ್ತಾನೆ. ಭಾವಮಿಶ್ರನು ತನ್ನ ಭಾವ ಪ್ರಕಾಶ ಗ್ರಂಥದಲ್ಲಿ. ಅಂದರೆ ಮೆಂತ್ಯೆ ವಾತವನ್ನು ಶಮನಗೊಳಿಸಿ ಶ್ಲೇಷ್ಮಹರವಾಗಿ ಕೆಲಸ ಮಾಡುತ್ತದೆಂದೂ,ಜ್ವರವನ್ನು ತಗ್ಗಿಸುತ್ತದೆಂದೂ ಅರ್ಥೈಸಿಕೊಳ್ಳಬಹುದು.

ಆಂಗ್ಲದಲ್ಲಿ 'ಫೆನುಗ್ರೀಕ್' ಎಂಬ ಹೆಸರಿನಿಂದ ಬೋಧಿಸಲ್ಪಡುವ ಮೆಂತ್ಯೆಯ ಶಾಸ್ತ್ರೀಯ ನಾಮಧೇಯ 'ಟ್ರೆಗೆನೆಲ್ಲಾ ಫಾನುಗ್ರೀಕಂ'

ನಮ್ಮ ದೈನಂದಿನ ಜೀವನದಲ್ಲಿ ಎದುರಾಗುವ ವಿವಿಧ ಅನಾರೋಗ್ಯ ಸಮಸ್ಯೆಗಳಿಗೆ ಮೆಂತ್ಯೆಯ ಮೂಲಕ ಯಾವ ರೀತಿ ಪರಿಷ್ಕಾರ ಪಡೆಯಬಹುದೆಂದು ತಿಳಿಯೋಣ.

ಮೆಂತ್ಯೆಯನ್ನು ಔಷಧಿಗಾಗಿ ಬಳಸುವಾಗ ಪುಡಿಮಾಡಿ ಬಳಸಬೇಕು.

## ಮೂತ್ರಾಂಗ ರಚನೆಯಲ್ಲಿ ಕಲ್ಲುಗಳು

ಮೆಂತ್ಯೆ ಪುಡಿ 100 ಗ್ರಾಂ, ಹುರುಳಿಕಾಳು ಕುಟ್ಟಿ ಪುಡಿ ಮಾಡಿದ್ದು 100 ಗ್ರಾಂ ಕಲಿಸಿಟ್ಟುಕೊಂಡು ದಿನವೂ ಎರಡು ಬಾರಿ ಬಾರಿಯೊಂದಕ್ಕೆ 50ಮಿ.ಲೀ. ಮೂಲಂಗಿ ರಸದಲ್ಲಿ 2-3 ಗ್ರಾಂ ಚೂರ್ಣವನ್ನು ಕಲಿಸಿ ಸೇವಿಸುತ್ತಾ ಇದ್ದರೆ ಮೂತ್ರ ಪಿಂಡಗಳು, (ಕಿಡ್ನಿ) ಮೂತ್ರ ನಾಳಗಳು, ಮೂತ್ರ ರಚನೆಗಳಲ್ಲಿ ಉಂಟಾಗಬಹುದಾದ ಕಲ್ಲುಗಳು ಮಾಯವಾಗುತ್ತವೆ.

### ಮಧುಮೇಹ (ಶುಗರ್) ನಿಯಂತ್ರಣಕ್ಕೆ

ನಿತ್ಯ ರಾತ್ರಿ ಹೊತ್ತು 200 ಮಿ.ಲೀ ನೀರಿನಲ್ಲಿ 10 ಗ್ರಾಂ ಮೆಂತ್ಯೆ ಹಾಕಿ, ನೆನೆಸಿ, ಬೆಳಗ್ಗೆ ಹಸಿಹೊಟ್ಟೆಯಲ್ಲಿ ನೆಂದ ಮೆಂತ್ಯೆಯನ್ನು ಅಗೆದು ತಿಂದು ಮಿಕ್ಕ ನೀರನ್ನು ಕುಡಿಯಬೇಕು.

ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ ಮತ್ತು ನ್ಯಾಷನಲ್ ಇನ್ಸಿಟ್ಯೂಟ್ ಆಫ್ ನ್ಯೂಟ್ರಿಷಿಯನ್ ರವರು ಮೆಂತ್ಯೆಯ ಮೇಲೆ ಮಾಡಿದ ಸಮಗ್ರ ಪರಿಶೋಧನೆಯಲ್ಲಿ ಮಧುಮೇಹಕ್ಕೆ ಬಹಳ ಒಳ್ಳೆಯ ಫಲಿತಾಂಶ ಸಿಕ್ಕಿದೆಯೆಂದು ಕಂಡಿದ್ದಾರೆ.



### ಬಾಯಿ ಹುಣ್ಣಿಗೆ

ರಾತ್ರಿ ವೇಳೆ 200 ಮಿ.ಲೀ. ನೀರಿನಲ್ಲಿ 10-15 ಗ್ರಾಂ ಮೆಂತ್ಯೆಯನ್ನು ಹಾಕಿ ಬೆಳಗ್ಗೆ ನೀರನ್ನು ಸೋಸಿ, ಆ ನೀರಿನಲ್ಲಿ ಬಾಯಿ ಮುಕ್ಕಳಿಸುವುದರಿಂದ ಈ ಸಮಸ್ಯೆ ಕುಗ್ಗಿ ಹೋಗುತ್ತದೆ.

### ತಾಯಿ ಹಾಲು ವಿಫಲವಾಗಿರಲು

ಮೆಂತ್ಯೆಯನ್ನು ತುಪ್ಪದೊಂದಿಗೆ ಹುರಿದು ಕುಟ್ಟಿದ ಚೂರ್ಣ 100 ಗ್ರಾಂ, ಗೋಧಿಹಿಟ್ಟು 100 ಗ್ರಾಂ, ಕಲ್ಲುಸಕ್ಕರೆ 200 ಗ್ರಾಂ ಕಲಿಸಿಟ್ಟುಕೊಂಡು ಬಾರಿಯೊಂದಕ್ಕೆ 200 ಮಿ.ಲೀ. ಹಾಲಿನಲ್ಲಿ ಈ ಪುಡಿ 10 ಗ್ರಾಂ, 2 ಟೀ ಸ್ಪೂನ್ ತುಪ್ಪ ಹಾಕಿ ಕುದಿಸಿ ಆ ಹಾಲನ್ನು ತಾಯಿ ಸೇವಿಸುತ್ತಿದ್ದರೆ ಶಿಶುವಿಗೆ ಬೇಕಾದಷ್ಟು ಸ್ತನ್ಯ ಉತ್ಪತ್ತಿಯಾಗುವುದರ ಜೊತೆಗೆ ಶಿಶುವಿಗೂ ಯಾವುದೇ ತರಹದ ಚಿಕ್ಕ- ಪುಟ್ಟ ಅನಾರೋಗ್ಯದ ಸಮಸ್ಯೆಗಳು ಕಾಣಿಸಿಕೊಳ್ಳದೇ ಒಳ್ಳೆಯ ಬೆಳವಣಿಗೆ ಕಂಡು ಬರುತ್ತದೆ.

### ಹೆಚ್ಚಾಗಿ ಬರುವ ನೆಗಡಿಗೆ

ಮೆಂತ್ಯೆ, ಅಜ್ವಾನ, ಮೆಣಸನ್ನು ಬೇರೆ ಬೇರೆಯಾಗಿ ಪುಡಿಮಾಡಿ. ಒಂದೊಂದನ್ನು 25 ಗ್ರಾಂನಂತೆ ಕಲಿಸಿಟ್ಟುಕೊಂಡು ದಿನವೂ ಬೆಳಗ್ಗೆ ಒಂದು ವೀಳ್ಯೆದೆಲೆಯ ಮೇಲೆ ಒಂದು ಗ್ರಾಂ ಚೂರ್ಣ, ಅರ್ಧ ಟೀ ಸ್ಪೂನು ಜೇನು ಹಾಕಿ ಕಲಿಸಿ ಎಲೆ ಯನ್ನು ಚಿಕ್ಕದಾಗಿ ಸುತ್ತಿ ಮೆತ್ತಗಾಗುವವರೆಗೆ ಅಗೆದು ನುಂಗಬೇಕು. ಇದರಿಂದ ರೋಗ ನಿರೋಧಕ ಶಕ್ತಿ ಬೆಳೆದು ಅಲರ್ಜಿಗಳಂತಹ ಸಮಸ್ಯೆಗಳಲ್ಲಿ ಉತ್ತಮವಾದ ಪರಿಹಾರವುಂಟಾಗುತ್ತದೆ.

### ತಲೆಗೂದಲು ಚೆನ್ನಾಗಿ ಬೆಳೆಯಲು

ಮೆಂತ್ಯೆ, ಉದ್ದಿನಬೇಳೆ, ನೆಲ್ಲಿಕಾಯಿಯ ಚೂರ್ಣವನ್ನು ಒಂದೊಂದು 100 ಗ್ರಾಂನಂತೆ ತೆಗೆದುಕೊಂಡು ಎಲ್ಲವನ್ನು ಕಲಿಸಿ ಶೀಶೆಯಲ್ಲಿ ಶೇಖರಿಸಿಟ್ಟುಕೊಂಡು ವಾರಕ್ಕೆರಡು ಬಾರಿ ರಾತ್ರಿ ಹೊತ್ತು ಬೇಕಾದಷ್ಟು ಪುಡಿಯನ್ನು ಅದು ಸಂಪೂರ್ಣವಾಗಿ ಮುಳುಗುವಂತೆ ನಿಂಬೆರಸ ಹಾಕಿ ಬೆಳಗ್ಗೆಯವರೆಗೂ ನೆನೆಸಿ, ಎಲ್ಲವನ್ನು ಚೆನ್ನಾಗಿ ಕಲಿಸಿ ತಲೆಗೆ ಹಚ್ಚಿಕೊಂಡು ಎರಡು ತಾಸಿನ ನಂತರ ಅಂಟೋಳಕಾಯಿ ಅಥವಾ ಸೀಗೆಕಾಯಿ ಯೊಂದಿಗೆ ತಲೆಸ್ನಾನ ಮಾಡಬೇಕು.

ಗರ್ಭ ಸ್ರಾವವನ್ನುಂಟು ಮಾಡುವ ಗುಣ ಈ ಮೆಂತ್ಯೆಗೆ ಇರುವುದರಿಂದ ಗರ್ಭವತಿಯರು ಮೆಂತ್ಯೆಯನ್ನು ಬಳಸದಿರುವುದು ಒಳಿತು.

### ಕೊಲೆಸ್ಟ್ರಾಲ್ ಸಮಸ್ಯೆಗೆ

150 ಗ್ರಾಂ ಮೆಂತ್ಯೆ ಪುಡಿ, 50 ಗ್ರಾಂ ಶುಂಠಿ ಪುಡಿ, ಕಲಿಸಿಟ್ಟುಕೊಂಡು ದಿನವೂ ಬೆಳಗ್ಗೆ - ಸಂಜೆ ಒಂದು ಬಾರಿಗೆ 2-3 ಗ್ರಾಂ ಪುಡಿಯನ್ನು ತಕ್ಕಷ್ಟು ಜೇನಿನಲ್ಲಿ ಸೇವಿಸುತ್ತಿದ್ದರೆ ಒಳ್ಳೆಯ ಕೊಲೆಸ್ಟ್ರಾಲ್ ಬೆಳೆದು ಅನಗತ್ಯ ಕೊಲೆಸ್ಟ್ರಾಲ್ ಕಳೆದು ಉತ್ತಮ ಆರೋಗ್ಯಕ್ಕೆ ನಾಂದಿಯಾಗುತ್ತದೆ. ಅಷ್ಟೇ ಅಲ್ಲದೇ ಈ ಔಷಧ ಸೇವನೆಯಿಂದ ಕೀಲುನೋವು, ಮಾಂಸಖಂಡದ ನೋವುಗಳು ಸಹಾ ಶಮನಗೊಳ್ಳುತ್ತವೆ.


### ಅಧಿಕ ಬೆವರಿಕೆ

ಮೆಂತ್ಯೆ, ಕರಿ ಹುರುಳಿ, ಗಂಧದ ಚೆಕ್ಕೆ, ಕಾರ್ಚಿಕಾಯಿಗಳ ಚೂರ್ಣವನ್ನು ಒಂದೊಂದು 100 ಗ್ರಾಂ ನಂತೆ ಕಲಿಸಿಟ್ಟುಕೊಂಡು ದಿನವೂ ಒಂದು ಬಾರಿ ಬೇಕಾದಷ್ಟು ಪುಡಿಯನ್ನು ತಕ್ಕಷ್ಟು ನೀರು ಹಾಕಿ ಪೇಸ್ಟಿನಂತೆ ಮಾಡಿ ಲೇಪಿಸಿಕೊಂಡು ಎರಡು ತಾಸು ಬಿಟ್ಟು ಸ್ನಾನ ಮಾಡುತ್ತಿದ್ದರೆ ಅಧಿಕವಾಗಿ ಬರುವ ಬೆವರು ಸಮಸ್ಯೆಯೊಂದಿಗೆ ಶರೀರದ ದುರ್ಗಂಧವೂ ಸಹಾ ಕಡಿಮೆಯಾಗುತ್ತದೆ.

ಭಾಗವತ ಕಥಾಸಾಗರ

# ಇಂದ್ರನ ಗರ್ವಭಂಗ

ಡಾ॥ ವೈಷ್ಣವಾಂಘ್ರಿಸೇವಕ್‌ದಾಸ್
ಅನುವಾದ : ಡಿ.ಎಸ್.ಬದ್ರಿನಾಥ್




ಈ ಚರಿತ್ರೆ ಶ್ರೀಮದ್ಭಾಗವತದ ಷಷ್ಠಸ್ಕಂದದಲ್ಲಿ ಬರುತ್ತದೆ. ಮೂಲೋಕಾಧಿಪತ್ಯದ ಕಾರಣವಾಗಿ ಒಮ್ಮೆ ಇಂದ್ರನು ಅಮಿತ ಗರ್ವಿಷ್ಠನಾಗಿದ್ದಾನೆ. ಸಭೆಯಲ್ಲಿ ಒಮ್ಮೆ ವಿಲಾಸಿಯಾಗಿ ಆಸೀನವಾದ ಆತನಿಗೆ ವಿವಿಧ ದೇವತೆಗಳು ಉತ್ತಮ ರೀತಿಯಲ್ಲಿ ಸೇವೆಗಳನ್ನು ಮಾಡುತ್ತಿದ್ದಾರೆ; ಹಾಡಿ ಹೊಗಳುತ್ತಿದ್ದಾರೆ. ಅಪ್ಸರಸ್ತ್ರೀಯರು ನಾಟ್ಯ ಮಾಡುತ್ತಿದ್ದಾರೆ,ಗಂಧರ್ವರು ಹಾಡು ಹೇಳುತ್ತಿದ್ದಾರೆ. ಇಂದ್ರನ ತಲೆಯ ಮೇಲೆ ಶ್ವೇತ ಛತ್ರವು ಬಿದಿಗೆ ಚಂದ್ರಮನಂತೆ ದೇದೀಪ್ಯಮಾನವಾಗಿ ಬೆಳಗುತ್ತಿದೆ. ಆ ಸಮಯದಲ್ಲಿ ಇಂದ್ರನು ಶುಚಿದೇವಿ ಸಮೇತನಾಗಿ ಆಸನದಲ್ಲಿ ಕುಳಿತಿದ್ದಾನೆ. ಆಗ ದೇವಗುರುವಾದ ಬೃಹಸ್ಪತಿ ಸಭೆಗೆ ಆಗಮಿಸಿದ್ದಾರೆ. ಋಷಿ ಶ್ರೇಷ್ಠರಾದ ಬೃಹಸ್ಪತಿಯು ದೇವತೆಗಳಿಗೆಲ್ಲರಿಗೂ ಗುರುವು. ಆತನು ದೇವದಾನವರಿಬ್ಬರಿಗೂ ಸಮಾನವಾಗಿ ಗೌರವ ನೀಡುಲ್ಪಡುವನು. ಗುರುವನ್ನು ನೋಡಿಯೂ ಇಂದ್ರನು ತನ್ನ ಸಿಂಹಾಸನದಿಂದ ಏಳಲಿಲ್ಲ. ಆತನನ್ನು ಆಹ್ವಾನಿಸುವುದಾಗಲೀ. ಆಸನವನ್ನು ಸಮರ್ಪಿಸುವುದನ್ನಾಗಲೀ ಮಾಡಲಿಲ್ಲ. ಈ ವಿಧವಾಗಿ ಆತನು ವೇದಮರ್ಯಾದೆಯನ್ನು ಆತಿಕ್ರಮಿಸಿದ್ದಾನೆ. ಇಂದ್ರನು ಐಶ್ವರ್ಯ ಮದದಲ್ಲಿರುವುದನ್ನು ಬೃಹಸ್ಪತಿ ಗಮನಿಸಿದ್ದಾನೆ. ಆತನ ಮತ್ತನ್ನು ಇಳಿಸಲೆಂದು ಬಯಸಿ, ಇಳಿಸಬೇಕಾದರೆ ತೀವ್ರವಾಗಿ ಶಪಿಸಬೇಕಾಗುವುದೆಂದು ಅರಿತು ಸ್ವಲ್ಪ ಸಹನೆ ವಹಿಸಿ ಮೌನವಾಗಿ ಸಭೆಯಿಂದ ಹಿಂದಿರುಗಿ ಹೊರಟು ಹೋಗಿದ್ದಾನೆ.

ಈ ರೀತಿಯಾಗಿ ಬೃಹಸ್ಪತಿ ಹಿಂತಿರುಗಿ ಹೋಗುತ್ತಲೇ ಇಂದ್ರನಿಗೆ ಮತಿ ಬಂದಿದೆ. ಭಗವತ್ಸಮಾನರಾದ ಗುರುಗಳನ್ನು ನಿರ್ಲಕ್ಷಿಸಿದಕ್ಕಾಗಿ ಆತನು ಚಿಂತೆಗೊಳಗಾಗಿದ್ದಾನೆ. ತಾನು ಮಾಡಿದ ತಪ್ಪನ್ನು ಇಂದ್ರನು ಎಲ್ಲರೆದುರಿಗೆ ಹೇಳಿ ತನ್ನನ್ನು ತಾನೇ ಧಿಕ್ಕರಿಸಿಕೊಂಡಿದ್ದಾನೆ.ಕೂಡಲೇ ಗುರುಗಳ ಬಳಿ ಸಾರಿ ಅವರ ಪಾದಗಳನ್ನು ಹಿಡಿದು ನಮಸ್ಕರಿಸಿ ಆತನನ್ನು ಪ್ರಸನ್ನಗೈಯಲು ಪ್ರಯತ್ನಿಸುತ್ತೇನೆಂದು ಹೇಳಿ ಇಂದ್ರನು ಪಲ್ಲಕ್ಕಿಯಲ್ಲಿ ಕುಳಿತು ಬೃಹಸ್ಪತಿ ಮಂದಿರಕ್ಕೆ ತಲುಪಿದ್ದಾನೆ.

ಇಂದ್ರನು ಸಭಾಸದರ ಮುಂದೆ ಪಶ್ಚಾತ್ತಾಪ ಪಟ್ಟ ವಿಷಯ ಬೃಹಸ್ಪತಿಗೆ ತಿಳಿದು ಬಂದಿದೆ. ಶಿಷ್ಯನಿಗಿಂತಲೂ ಅಧಿಕ ಶಕ್ತಿವಂತನಾದ ಬೃಹಸ್ಪತಿಯು ತನ್ನನ್ನು ಇಂದ್ರನು ಕಾಣಬರುವ ಮೊದಲೇ ಅಲ್ಲಿಂದ ಅದೃಶ್ಯನಾಗಿದ್ದಾನೆ. ಇಂದ್ರನು ಒಂದು ಗುರುಮಂದಿರವನ್ನೆಲ್ಲಾ ಹುಡುಕಿದ್ದಾನೆ. ಗುರುವಿನ ಜಾಡುಸಿಗಲಿಲ್ಲ.ಇಂದ್ರನಿಗೆ ತನಗಿನ್ನು ಅಶುಭವೇ ಉಂಟಾಗಲಿದೆಯೆಂದು ಅರ್ಥವಾಗಿದೆ. ಸುತ್ತೂ ದೇವತೆಗಳಿದ್ದರೂ ಆತನ ಮನಸ್ಸು ಚಿಂತಾಕ್ರಾಂತವಾಗಿದೆ. ಗುರು ಪ್ರಸನ್ನನಾದರೆ ಸಾಕ್ಷಾತ್ ಭಗವಂತನೇ ಪ್ರಸನ್ನನಾದಂತೆ. ಇನ್ನು ಗುರುವೇ ಪ್ರಸನ್ನ ನಾಗದಿದ್ದರೆ ಶಿಷ್ಯನ ಗತಿ ಅಥೋಗತಿಯೇ ಸರಿ. ತನ ಗುಂಟಾಗಬಹುದಾದ ದುರ್ಗತಿ ಏನಿರಬಹುದೆಂದು ಇಂದ್ರನು ವ್ಯಾಕುಲ ಮನಸ್ಕನಾಗಿದ್ದಾನೆ.

ಇಂದ್ರನ ದಮನೀಯ ಸ್ಥಿತಿಯನ್ನು ಅರಿತ ದಾನವರು ತಮ್ಮ ಗುರುವಾದ ಶುಕ್ರಾಚಾರ್ಯರ ಆದೇಶದ ಮೇರೆಗೆ ಕೂಡಲೇ ದೇವತೆಗಳ ಮೇಲೆ ದಂಡೆತ್ತಿ ಬಂದಿದ್ದಾರೆ. ಯಥಾವಿಧಿಯಾಗಿ ದೇವತೆಗಳು ದಾನವರ ಜೊತೆ ಹೋರಾಡಲು ನಿಂತಾಗ ಗುರುಗಳ ಆಶೀರ್ವಾದದ ಲೋಪದಿಂದಾಗಿ ತೀವ್ರವಾದ ನಷ್ಟವನ್ನು ಕಂಡಿದ್ದಾರೆ. ಇದರಿಂದ ಅವರು ರಣರಂಗದಿಂದ ಹೊರಬಂದು ಶಿರಬಾಗಿಸಿಕೊಂಡು ಬ್ರಹ್ಮನನ್ನು ನಮಿಸಿದ್ದಾರೆ. ಸರ್ವಜ್ಞನಾದ ಬ್ರಹ್ಮ

ದೇವತೆಗಳ ಈ ದೈನ್ಯಸ್ಥಿತಿ ಕಂಡು ಅವರೊಂದಿಗೆ ಹೀಗೆ ನುಡಿದಿದ್ದಾನೆ.

"ದೇವತೆಗಳಿರಾ! ಐಶ್ವರ್ಯವಂತರಾದ ನೀವು ಗುರುಗಳನ್ನು ಅವಮಾನಿಸಿದ್ದೀರಿ. ಆತನು ಸಭೆಯನ್ನು ಪ್ರವೇಶಿಸಿದಾಗ ನೀವು ಮರ್ಯಾದೆಯಿಂದ ಎದ್ದು ನಿಲ್ಲಲಿಲ್ಲ. ಆತನನ್ನು ಆಹ್ವಾನಿಸಲಿಲ್ಲ ಗುರುಗಳಡೆಗೆ ನೀವು ತೋರಿದ ದುರ್ವರ್ತನೆಯ ಕಾರಣದಿಂದಾಗೇ ನೀವು ದಾನವರಿಂದ ಪರಾಜಿತರಾಗಿದ್ದೀರಿ. ಇಂದ್ರಾ! ದಾನವರು ತಮ್ಮ ಗುರುವಾದ ಶುಕ್ರಾಚಾರ್ಯರಿಗೆ ಸಮೋಚಿತ ಸ್ಥಾನವನ್ನು ನೀಡಿ ಉತ್ತಮವಾಗಿ ಆದರಿಸಿದ ಕಾರಣಕ್ಕೆ ಈಗ ಬಲವಂತರಾಗಿದ್ದಾರೆ. ಬ್ರಾಹ್ಮಣರನ್ನು, ಗೋವುಗಳನ್ನು, ಗೋವಿಂದನನ್ನು ಭಕ್ತಿಯಿಂದ ಅರ್ಚಿಸಿದವರು ತಂತಮ್ಮ ಸ್ಥಾನಗಳಲ್ಲಿ ಸುಸ್ಥಿರರಾಗಿದ್ದಾರೆ. ಇದೇ ಎಲ್ಲರ ವಿಜಯ ರಹಸ್ಯವೆಂದು ತಿಳಿದುಕೋ. ನೀವೀಗ ತ್ವಷ್ಟ ತನಯನಾದ ವಿಶ್ವರೂಪನ ಬಳಿ ಸಾರಿ ಆತನನ್ನು ನಿಮ್ಮ ಗುರುವನ್ನಾಗಿ ಸ್ವೀಕರಿಸಿ. ಆತನು ತಪೋಮಯನಾದ ಬ್ರಾಹ್ಮಣನು. ಆತನಿಗೆ ದಾನವರ ಪಕ್ಷಪಾತವಿದೆ.ಆದರೂ ನೀವು ಅದನ್ನು ಸಹಿಸಿಕೊಳ್ಳುವವರಾದರೆ ನಿಮ್ಮೆಡೆಗೆ ಆತನು ಪ್ರಸನ್ನನಾಗಿ ನಿಮ್ಮ ಅಭೀಷ್ಟೆಗಳನ್ನು ತೀರಿಸುತ್ತಾನೆ."

ದೇವಮಾತೆ ಅದಿತಿ ಹಾಗೂ ಕಶ್ಯಪನಿಗೆ ಹುಟ್ಟಿದ ಸಂತಾನಗಳಲ್ಲಿ ತ್ವಷ್ಟ ಪ್ರಜಾಪತಿಯೂ ಒಬ್ಬನು. ದಾನವರ ಕುವರಿಯಾದ ರಚನೆ ತ್ವಷ್ಟ ಪ್ರಜಾಪತಿಯ ಮಡದಿಯಾಗಿದ್ದಾಳೆ. ಅವರಿಗೆ ಹುಟ್ಟಿದ ಮಕ್ಕಳೇ ಸನ್ನಿವೇಶನು,ಮತ್ತು ವಿಶ್ವರೂಪರು. ಅಂದರೆ ವಿಶ್ವರೂಪನು ದೇವತೆಗಳ ನಿತ್ಯ ವೈರಿಗಳಾದ ದಾನವರ ಕುಮಾರಿಯಿಂದ ಹುಟ್ಟಿದವನು. ಆದರೂ ಆತನನ್ನೇ ಆಶ್ರಯಿಸೆಂದು ಬ್ರಹ್ಮನು ದೇವತೆಗಳಿಗೆ ಆದೇಶಿಸಿದ್ದಾನೆ. ತಾಯಿಯ ಪಕ್ಷದವರಾದ್ದರಿಂದ ವಿಶ್ವರೂಪನಿಗೆ ನಿಶ್ಚಯವಾಗಿ ದಾನವರೆಡೆಗೆ ಪಕ್ಷಪಾತವಿದ್ದೇ ಇರುತ್ತದೆ. ಆದರೂ ದೇವತೆಗಳು ಅದನ್ನು ಸಹಿಸಿಕೊಳ್ಳುವ ವರಾದರೆ ಅದ್ಭುತವಾದ ಫಲಿತಾಂಶಗಳು ಬರಲಿವೆಯೆಂದು ಬ್ರಹ್ಮದೇವನು ಹೇಳುತ್ತಲೇ ದೇವತೆಗಳು ಅದನ್ನು ಅಂಗೀಕರಿಸಿದ್ದಾರೆ.

ಬ್ರಹ್ಮನ ಆದೇಶದ ಮೇರೆಗೆ ದೇವತೆಗಳು ನಿರ್ಮಲವಾದ ಮನಸ್ಸಿನಿಂದ ತ್ವಷ್ಟ ತನಯನಾದ ವಿಶ್ವರೂಪನ ಬಳಿ ಸಾರಿ ವಿನಮ್ರತೆಯಿಂದ ಪ್ರಾರ್ಥಿಸಿದ್ದಾರೆ.

"ವಿಶ್ವರೂಪಾ! ನಿಮಗೆಂದು ಶುಭವಾಗಲಿ! ನಾವೆಲ್ಲರೂ ನಿಮ್ಮ ಆಶ್ರಮಕ್ಕೆ ಅತಿಥಿಗಳಾಗಿ ಬಂದಿದ್ದೇವೆ. ನಾವೆಲ್ಲರೂ ನಿನಗೆ ಪಿತೃಸಮಾನರು. ಆದ್ದರಿಂದ ನಮ್ಮ ಕೋರಿಕೆಯನ್ನು ತೀರಿಸಬೇಕಾಗಿ ಕೋರುತ್ತಿದ್ದೇವೆ. ನೀನು ನಮಗಿಂತಲೂ ಸಣ್ಣವನೆಂದು ಚಿಂತಿಸಬೇಡ. ವೇದಮಂತ್ರ ನಿಪುಣನಾದವನು ವಯಸ್ಸಿನಲ್ಲಿ ಚಿಕ್ಕವನಾದರೂ ನಮಸ್ಕರಿಸಲ್ಪಡುವವನು. ಆದ್ದರಿಂದ ನಿಸ್ಸಂಕೋಚವಾಗಿ ನಮಗೆ ಪುರೋಹಿತನಾಗಲೇಬೇಕು"


ಈ ವಿಧವಾಗಿ ದೇವತೆಗಳು ಪ್ರಾರ್ಥಿಸಲು ವಿಶ್ವರೂಪ ಹರ್ಷಿತನಾಗಿದ್ದಾನೆ. ವಿನಮ್ರಚಿತ್ತನಾಗಿ ಆತನು "ದೇವತೆಗಳಿರಾ! ವಿಶ್ವಪಾಲಕರಾದ ನಿಮ್ಮ ಬೇಡಿಕೆಯನ್ನು ತಿರಸ್ಕರಿಸುವವರಾರು? ನಿಜದಲ್ಲಿ ಪೌರೋಹಿತ್ಯವು ಬ್ರಹ್ಮವರ್ಚಸ್ಸನ್ನು ತಗ್ಗಿಸುತ್ತದೆ. ಆದರೂ ನಾನು ತಪ್ಪದೇ ನಿಮ್ಮ ಪೌರೋಹಿತ್ಯ ಮಾಡಬೇಕಾಗಿದೆ. ನೀವೆಲ್ಲರೂ ನನಗೆ ಗುರುತುಲ್ಯರು. ಆದ್ದರಿಂದ ಧನ-ಪ್ರಾಣಗಳನ್ನಾದರೂ ಸರಿಯೇ ನೀಡಿ ನಾನು ನಿಮ್ಮ ಕೋರಿಕೆಗಳನ್ನು ತೀರಿಸುತ್ತೇನೆ ಎಂದು ಹೇಳಿ ದೇವತೆಗಳಿಗಾಗಿ ಹಿತವಾದ ಪೌರೋಹಿತ್ಯವನ್ನು ಆರಂಭಿಸಿದ್ದಾರೆ.

ಸುರದ್ವೇಷಿಗಳಾದ ದಾನವರ ಐಶ್ವರ್ಯವೆಲ್ಲಾ ಶುಕ್ರಾಚಾರ್ಯರ ವಿದ್ಯೆಗಳಿಂದ ರಕ್ಷಿಸಲ್ಪಟ್ಟಿದೆ. ಆದ್ದರಿಂದ ಶ್ರೀ ವಿಶ್ವರೂಪನು ದೇವತೆಗಳಿಗೆ ಪರಮರಕ್ಷಣ ಕವಚವಾದ ನಾರಾಯಣ ಕವಚವನ್ನು ಪ್ರಸಾದಿಸಬೇಕೆಂದು ಸಂಕಲ್ಪಸಿದ್ದಾನೆ. ನಾರಾಯಣ ಮಂತ್ರ ಕವಚವನ್ನೂ, ಉಪಾಸನೆ ಮಾಡುವ ವಿಧಾನವನ್ನು ಆತನು ಆಗ ಇಂದ್ರನಿಗೆ ಉಪದೇಶಿಸಿದ್ದಾನೆ. ಈ ವಿಧವಾಗಿ ನಾರಾಯಣ ಕವಚ ಮಂತ್ರೋಪಾಸನೆಯು ಇಂದ್ರನಿಗೆ ಉಪದೇಶಿಸಿದ ವಿಶ್ವರೂಪನು ಹೀಗೆ ನುಡಿದಿದ್ದಾನೆ.

"ಇಂದ್ರ! ಅದ್ಭುತವಾದ ನಾರಾಯಣ ಕವಚವನ್ನು ನಿನಗೆ ಉಪದೇಶಿಸಿದ್ದೇನೆ. ಇದರಿಂದ ನೀನು ಶಕ್ತಿವಂತನಾಗಿ ಅಸುರನಾಯಕರನ್ನು ಜಯಿಸುತ್ತೀಯೆ. ಈ ಮಂತ್ರ ಕವಚವನ್ನು ಧರಿಸಿದ ವ್ಯಕ್ತಿ ಯಾರನ್ನು ನೋಡುತ್ತಾನೋ ಅಥವಾ ಕಾಲಿನಿಂದ ಏನನ್ನು ಸ್ಪರ್ಶಿಸುತ್ತಾನೋ ಆತನು ಸಹ ಎಲ್ಲಾ ಆಪತ್ತುಗಳಿಂದ ಹೊರಬೀಳುತ್ತಾನೆ. ಈ ಕವಚಪ್ರಭಾವದಿಂದ ಮನುಷ್ಯನು ಎಲ್ಲಾ ಭಯಗಳಿಂದ ಮುಕ್ತನಾಗಿ ಸರ್ವರಿಂದ ಪೂಜಿಸಲ್ಪಡುತ್ತಾನೆ.

ವಿಶ್ವರೂಪನಿಂದ ಅನುಗ್ರಹಿತವಾದ ನಾರಾಯಣ ಕವಚ ಮಂತ್ರವನ್ನು ಹೊಂದಿದ ಇಂದ್ರನು ಭಕ್ತಿ ಶ್ರದ್ಧೆಗಳಿಂದ ಅದನ್ನು ಉಪಾಸನೆ ಮಾಡಿ ಶ್ರೇಷ್ಠ ಬಲಸಂಪನ್ನನಾಗಿ ದಾನವರ ಮೇಲೆ ವಿಜಯವನ್ನು ಸಾಧಿಸಿದ್ದಾನೆ. ತನ್ನ ಸಮಸ್ತ ಸಂಪತ್ತುಗಳಿಗೆ ಈ ವಿಧವಾಗಿ ಆತ ಮತ್ತೆ ಒಡೆಯನಾಗಿದ್ದಾನೆ. ಗುರುವನ್ನು ನಿರ್ಲಕ್ಷಿಸಿದ ಕಾರಣಕ್ಕೆ ಎಲ್ಲವನ್ನು ಕಳೆದುಕೊಂಡ ಇಂದ್ರನು ಬ್ರಹ್ಮೋಪದೇಶದಿಂದ ಗುರುತುಲ್ಯನಾದ ವಿಶ್ವರೂಪವನ್ನು ಆಶ್ರಯಿಸುವುದರ ಮೂಲಕ ಗತವೈಭವವನ್ನು ಮರಳಿ ಪಡೆದಿದ್ದಾನೆ.

# ಪುಸ್ತಕ ವಿಮರ್ಶೆ




## ಮನೋವಿಕಾಸವನ್ನು ಉಂಟುಮಾಡುವ ಅಂತಃಸತ್ವಪೂರ್ಣ ಕೃತಿ ಮಾನಸೋಲ್ಲಾಸ

-ಪ್ರಣವ

ಕನ್ನಡದ ಅತ್ಯಂತ ಪ್ರಸಿದ್ಧವಾದ ಪ್ರಾಚೀನ ಕೃತಿಗಳನ್ನು ವಿದ್ವಜನರ ಜೊತೆಗೆ ಜನಸಾಮಾನ್ಯರಿಗೂ ಸುಲಭವಾಗಿ ತಿಳಿಯುವ ರೀತಿಯಲ್ಲಿ, ವಿಶ್ಲೇಷಣೆಯೊಂದಿಗೆ ಅರ್ಥ ಸಾರಾಂಶಗಳ ಸಮೇತ ಮತ್ತು ಅತ್ಯಂತ ಪ್ರಮುಖವಾದ ಅರ್ವಾಚೀನ ಕೃತಿಗಳನ್ನು ಸರ್ವಾಂಗ ಸುಂದರವಾಗಿ ಹೊರತರುವ ಮೂಲಕ ಕನ್ನಡ ನಾಡಿನ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಹಿರಿಮೆಯನ್ನು ಎತ್ತಿ ಹಿಡಿಯುವ, ಕನ್ನಡ ನಾಡು ನುಡಿಯ ಸೇವೆ ಮಾಡುವ, ಅಭ್ಯಾಸಶೀಲರಾದ ಕನ್ನಡಿಗರ ಬೇಡಿಕೆಯನ್ನು ಕೈಗೆಟುಕುವ ದರದಲ್ಲಿ ಪೂರೈಸುವ ಮಹೋನ್ನತ ಉದ್ದೇಶದಿಂದ ಸ್ಥಾಪಿತವಾಗಿರುವ ಪ್ರಕಟಣಾ ಸಂಸ್ಥೆಯೇ ದರೇಸಾ ಪಬ್ಲಿಕೇಷನ್ಸ್.

ದರೇಸಾ ಪ್ರಕಟಣಾ ಸಂಸ್ಥೆಯು ತನ್ನ ಧ್ಯೇಯೋದ್ದೇಶಕ್ಕನುಗುಣವಾಗಿ ಈಗಾಗಲೇ ಕೆಳದಿ ಬಸವರಾಜ ಭೂಪಾಲ ವಿರಚಿತ ವಿಶ್ವಕೋಶವಾದ "ಶಿವತತ್ವ ರತ್ನಾಕರ" ಕೃತಿಯನ್ನು ಸರಳ ಕನ್ನಡದ ಸಾರಾಂಶದ ಸಮೇತ, ಐದು ಸಂಪುಟಗಳಲ್ಲಿ ಹೊರತಂದು ಗಮನ ಸೆಳೆದಿದೆ. ಈ ಪ್ರಕಟಣೆಯ ನಂತರ ಅಲ್ಪ ಅವಧಿಯಲ್ಲೇ ಕನ್ನಡ ನಾಡಿನ ಪ್ರಪ್ರಥಮ ಅಧಿಕೃತ ವಿಶ್ವ ಕೋಶವಾದ ಕಲ್ಯಾಣ ಚಾಲುಕ್ಯವಂಶದ ಕೊನೆಯ ದೊರೆ ಮೂರನೆಯ ಸೋಮೇಶ್ವರ ಭೂಪಾಲ ವಿರಚಿತ "ಮಾನಸೋಲ್ಲಾಸ" ಅಥವಾ "ಅಭಿಲಷಿ ತಾರ್ಥ ಚಿಂತಾಮಣಿ"ಎಂಬ ಸಂಸ್ಕೃತ ವಿಶ್ವ ಕೋಶವನ್ನು ಕನ್ನಡ ಸಾರಾಂಶದ ಸಮೇತ ಐದು ಸಂಪುಟಗಳಲ್ಲಿ ಹೊರ ತಂದು ಒಂದು ಹೊಸ ದಾಖಲೆಯನ್ನೇ ಸ್ಥಾಪಿಸಿದೆ.

ಸಂಸ್ಕೃತ ಸಾಹಿತ್ಯ ಲೋಕದಲ್ಲೇ ವಿಶಿಷ್ಟ ವಿಶ್ವಕೋಶ ಎನಿಸಿಕೊಂಡಿರುವ ಮಾನಸೋಲ್ಲಾಸ ಮೂಲ ಪದ್ಯದೊಡನೆ ಸರಳ ಕನ್ನಡ ಅನುವಾದದ ಸಮೇತ ಕನ್ನಡಿಗರಿಗೆ ದೊರೆಯುತ್ತಿರುವುದು ಪೂರ್ವ ಪುಣ್ಯವೇ ಸರಿ. ಈ ವಿಷಯದಲ್ಲಿ ವಿದ್ವಾನ್ ಡಾ. ಮಲ್ಲೇಪುರಂ ಜಿ. ವೆಂಕಟೇಶ್, ಸಂಸ್ಕೃತ ವಿಶ್ವವಿದ್ಯಾನಿಲಯದ ಪ್ರಭಾರ ಉಪಕುಲಪತಿಗಳು, ರಿಜಿಸ್ಟ್ರಾರ್ ಮೊದಲಾದ ಅಧಿಕಾರಿಗಳ ಸಹಕಾರ, ಅನುವಾದಕ ವಿದ್ವನ್ಮಂಡಲಿಯ ಶ್ರಮ ಉಲ್ಲೇಖನೀಯ. ಮಾನಸೋಲ್ಲಾಸದಲ್ಲಿ ಪ್ರಕಟವಾಗಿರುವ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಪರಿಸರ ಆಡಳಿತಗಾರರಿಗೆ ಸೂಕ್ತ ಮಾರ್ಗದರ್ಶನ ನೀಡುವ ಕೃತಿಯಾಗಿದೆ. ಈ ರೀತಿ ಮಾನಸೋಲ್ಲಾಸವು ಇಂದಿನ ಆಡಳಿತಗಾರರು,ಜ್ಯೋತಿಷ್ಕರು, ಸಂಗೀತಗಾರರು, ವೈದ್ಯರು, ಕ್ರೀಡಾಪಟುಗಳು, ಚಿತ್ರಕಾರರು, ಶಿಲ್ಪಿಗಳು ಎಲ್ಲರಿಗೂ ಅವರಿಗೆ ಬೇಕಾದ ಶಾಸ್ತ್ರೀಯವಾದ ನಿಖರವಾದ ಮಾಹಿತಿಯನ್ನು ನೀಡುವ ವಿಶ್ವಕೋಶವಾಗಿದ್ದು, ದರೇಸಾ ಪಬ್ಲಿಕೇಷನ್ಸ್‌ನವರು ಇದನ್ನು ಐದು ಸಂಪುಟಗಳಲ್ಲಿ ಸರ್ವಾಂಗ ಸುಂದರವಾಗಿ, ಕೈಗೆಟುಕುವ ಬೆಲೆಯಲ್ಲಿ ಪ್ರಕಟಿಸಿರುವುದು ಕನ್ನಡ ಪುಸ್ತಕ ಲೋಕಕ್ಕೆ, ಪ್ರಕಟಣಾ ಲೋಕಕ್ಕೆ ಮಾಡಿರುವ ಮಹದುಪಕಾರವಾಗಿದೆ ಎಂದು ಹೇಳಬಹುದು.

ಹೆಚ್ಚಿನ ವಿವರಗಳಿಗೆ: -9110284490

# ಪದಬಂಧ

**ಎಡದಿಂದ ಬಲಕ್ಕೆ**

01.ಶ್ರೀ ವಿಷ್ಣುವನ್ನು ಹೀಗೂ ಕರೆಯುತ್ತಾರೆ ...(6)

02.'ಘು' ಇಂದ ಆರಂಭ ಕುಲಶೇಖರ ಆಳ್ವಾರರ ಮುಕುಂದ ಮಾಲಾ ಸ್ತೋತ್ರದ ಪ್ರಾರ್ಥನಾ ಶ್ಲೋಕ ಮೊದಲ ...(3)

03.ಮಧುರ ಕವಿ ಆಳ್ವಾರರ ಪ್ರಬಂಧವನ್ನು ಹೀಗೆ ಕರೆಯುತ್ತೇವೆ 'ಕ' ನಿಂದ ಆರಂಭ ...(8)

**ಬಲದಿಂದ ಎಡಕ್ಕೆ**

04.ಆಳವಂದಾರರ ಸ್ತೋತ್ರರತ್ನದ 64 ನೇ ಪದ್ಯದ ಆರಂಭ 'ನ' ಯಿಂದ ಆರಂಭ ...(2)

05.ದೇಶಿಕರ ತಮಿಳು ಗ್ರಂಥ 'ಮು' ಯಿಂದ ಆರಂಭ ...(7)

06.ಆಂಡಾಳ್ ರಚನೆ - ನಾಚ್ಚಿಯಾರ್ ತಿರುಮೊಷಿ 6 ಪದು ವಿಶೇಷವಾಗಿ ಶ್ರೀವೈಷ್ಣವರು ಮದುವೆಗಳಲ್ಲಿ ಉಪಯೋಗಿಸುತ್ತಾರೆ. ...(6)

| ಕ್ರ.ಸಂ | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|
| 1 | 1 7 | 8 | | 9 | | | | |
| 2 | | | | | | | | |
| 3 | | | | | | 13 | | |
| 4 | | | 11 | | 12 | | | |
| 5 | 2 | | | | | 4 | 14 | 15 |
| 6 | 3 10 | | | | | | | |
| 7 | | | | | | | | 5 |
| 8 | | | | | | | | |

**- ಪಿ.ಜಿ. ಶ್ರೀನಿವಾಸನ್**

- 43 ನೇ ಪುಟದಲ್ಲಿ ಉತ್ತರವನ್ನು ನೋಡಬಹುದು.

**ಮೇಲಿಂದ ಕೆಳಕ್ಕೆ**

07.ಸ್ವಾಮಿ ರಾಮಾನುಜರು ರಚಿಸಿದ ಗ್ರಂಥ - 'ಶ್ರೀ' ಯಿಂದ ಆರಂಭ ...(3)

08.ಸ್ವಾಮಿಯನ್ನು ಹೀಗೂ ಸ್ಮರಿಸುತ್ತಾರೆ. 'ಮ' ನಿಂದಾರಂಭ ...(4)

09.ಶ್ರೀ ವತ್ಸ ಚಿಹ್ನಮಿಶ್ರರ ಅತಿಮಾನುಷಸ್ತವ 62 ನೇ ಸ್ತೋತ್ರ ಆರಂಭ ...(5)

10. ನಾಚ್ಚಿಯಾರ್ ತಿರುಮೊಷಿ 7 ನೇ ಪತ್ತಿನಲ್ಲಿ ಮೊದಲ ಪಾಶುರ ಮೂರಕ್ಷರದ ಪದ ತಾವರೆಯ ಇನ್ನೊಂದು ಹೆಸರಾ? ...(3)

**ಕೆಳಗಿನಿಂದ ಮೇಲಕ್ಕೆ**

11. ಶ್ರೀ ಲಕ್ಷ್ಮಿಯನ್ನು ಸ್ತುತಿಸುವ ಸ್ತೋತ್ರ - 'ಶ್ರೀ' ಯಿಂದ ...(3)

12. ಪೆರಿಯಾಳ್ವಾರ್ 'ಪಲ್ಲಾಂಡು ಪಲ್ಲಾಂಡು ಹಾಡಿದ ಸ್ಥಳ - 'ಮ' ಯಿಂದ ಆರಂಭ ...(3)

13) ಪುರಾಣಗಳಲ್ಲಿ ಸ್ತ್ರೀ ಪಾತ್ರಧಾರಿಗಳು ತಮ್ಮ ಗಂಡನನ್ನು ಹೀಗೆ ಕರೆಯುತ್ತಾರೆ 'ರ' ಯಿಂದಾರಂಭ ...(3)

14) ರಾಮರನ್ನು ಸೀತೆಯನ್ನು ಕ್ರಮವಾಗಿ ಸೇರಿಸಿ ತಮಿಳರು ಹೀಗೆ ಕರೆಯುತ್ತಾರೆ. 'ರಾ' ಯಿಂದಾರಂಭ ...(5)

15) ಆಳ್ವಾರರಲ್ಲಿ ಮೊದಲನೆಯವರು ...(5)

## ವೈಕುಂಠ ಏಕಾದಶಿ ಸಂದರ್ಭವಾಗಿ (2020 ಜನವರಿ 06) ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯದಲ್ಲಿ ಅಲಂಕರಣ, ಸ್ವರ್ಣ ರಥೋತ್ಸವದ ದೃಶ್ಯಗಳು



ಆಲಯದಲ್ಲಿ ಅಲಂಕರಣ



ಸ್ವರ್ಣರಥೋತ್ಸವ



ಸ್ವಾಮಿಯವರ ಭಕ್ತರಿಗೆ ವೈಕುಂಠ ಏಕಾದಶಿ ಶುಭಾಷಯಗಳನ್ನು ತಿಳಿಸುತ್ತಿರುವ ತಿ.ತಿ.ದೇ. ಪಾಲಕ ಮಂಡಳಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿಯವರು



ಸ್ವಾಮಿ ಪುಷ್ಕರಿಣಿಯಲ್ಲಿ ಚಕ್ರಸ್ನಾನ

ತಿರುಮಲೆ ತಿರುಪತಿ ದೇವಸ್ಥಾನಗಳು
ಸಪ್ತಗಿರಿ
ಸಚಿತ್ರ ಮಾಸಪತ್ರಿಕೆ
ಫೆಬ್ರವರಿ 2020



# ಸೂರ್ಯಾಷ್ಟೋತ್ತರ ಶತನಾಮಾವಳಿಃ

ಓಂ ಅರುಣಾಯ ನಮಃ
ಓಂ ಶರಣ್ಯಾಯ ನಮಃ
ಓಂ ಕರುಣಾರಸಸಿಂಧವೇ ನಮಃ
ಓಂ ಅಸಮಾನಬಲಾಯ ನಮಃ
ಓಂ ಆರ್ತಾರಕ್ಷಕಾಯ ನಮಃ
ಓಂ ಆದಿತ್ಯಾಯ ನಮಃ
ಓಂ ಆದಿಭೂತಾಯ ನಮಃ
ಓಂ ಅಖಿಲಾಗಮವೇದಿನೇ ನಮಃ
ಓಂ ಅಚ್ಯುತಾಯ ನಮಃ
ಓಂ ಅಖಿಲಜ್ಞಾಯ ನಮಃ 10
ಓಂ ಅನಂತಾಯ ನಮಃ
ಓಂ ಇನಾಯ ನಮಃ
ಓಂ ವಿಶ್ವರೂಪಾಯ ನಮಃ
ಓಂ ಇಜ್ಯಾಯ ನಮಃ
ಓಂ ಇಂದ್ರಾಯ ನಮಃ
ಓಂ ಭಾನವೇ ನಮಃ
ಓಂ ಇಂದಿರಾಮಂದಿರಾಪ್ತಾಯ
ನಮಃ
ಓಂ ವಂದನೀಯಾಯ ನಮಃ

ಓಂ ಈಶಾಯ ನಮಃ
ಓಂ ಸುಪ್ರಸನ್ನಾಯ ನಮಃ 20
ಓಂ ಸುಶೀಲಾಯ ನಮಃ
ಓಂ ಸುವರ್ಚಸೇ ನಮಃ
ಓಂ ವಸುಪ್ರದಾಯ ನಮಃ
ಓಂ ವಸವೇ ನಮಃ
ಓಂ ವಾಸುದೇವಾಯ ನಮಃ
ಓಂ ಉಜ್ಜ್ವಲಾಯ ನಮಃ
ಓಂ ಉಗ್ರರೂಪಾಯ ನಮಃ
ಓಂ ಉರ್ಧ್ವಗಾಯ ನಮಃ
ಓಂ ವಿವಸ್ವತೇ ನಮಃ
ಓಂ ಉದ್ಯತ್ಕಿರಣಜಾಲಾಯ ನಮಃ 30
ಓಂ ಹೃಷೀಕೇಶಾಯ ನಮಃ
ಓಂ ಊರ್ಜಸ್ವಲಾಯ ನಮಃ
ಓಂ ವೀರಾಯ ನಮಃ
ಓಂ ನಿರ್ಜರಾಯ ನಮಃ
ಓಂ ಜಯಾಯ ನಮಃ
ಓಂ ಊರುದ್ವಯಾಭಾವ
ರೂಪಯುಕ್ತಸಾರಥಯೇ ನಮಃ

ಓಂ ಋಷಿವಂದ್ಯಾಯ ನಮಃ
ಓಂ ರುಗ್ಘನ್ತ್ರೇ ನಮಃ
ಓಂ ಋಕ್ಷಚಕ್ರಚರಾಯ ನಮಃ
ಓಂ ಋಜುಸ್ವಭಾವಚಿತ್ತಾಯ ನಮಃ 40
ಓಂ ನಿತ್ಯಸ್ತುತ್ಯಾಯ ನಮಃ
ಓಂ ಋೂಕಾರಮಾತೃಕಾವರ್ಣ
ರೂಪಾಯ ನಮಃ
ಓಂ ಉಜ್ಜ್ವಲತೇಜಸೇ ನಮಃ
ಓಂ ಋಕ್ಷಾದಿನಾಥಮಿತ್ರಾಯ ನಮಃ
ಓಂ ಪುಷ್ಕರಾಕ್ಷಾಯ ನಮಃ
ಓಂ ಲುಪ್ತದಂತಾಯ ನಮಃ
ಓಂ ಶಾಂತಾಯ ನಮಃ
ಓಂ ಕಾಂತಿದಾಯ ನಮಃ
ಓಂ ಘನಾಯ ನಮಃ
ಓಂ ಕನತ್ಕನಕಭೂಷಾಯ ನಮಃ 50
ಓಂ ಖದ್ಯೋತಾಯ ನಮಃ
ಓಂ ಲೂನಿತಾಖಿಲದೈತ್ಯಾಯ ನಮಃ
ಓಂ ಸತ್ಯಾನಂದಸ್ವರೂಪಿಣೇ ನಮಃ
ಓಂ ಅಪವರ್ಗಪ್ರದಾಯ ನಮಃ
ಓಂ ಆರ್ತಶರಣ್ಯಾಯ ನಮಃ
ಓಂ ಏಕಾಕಿನೇ ನಮಃ
ಓಂ ಭಗವತೇ ನಮಃ
ಓಂ ಸೃಷ್ಟಿಸ್ಥಿತ್ಯಕಾರಿಣೇ ನಮಃ
ಓಂ ಗುಣಾತ್ಮನೇ ನಮಃ
ಓಂ ಘೃಣಿಭೃತೇ ನಮಃ 60
ಓಂ ಬೃಹತೇ ನಮಃ
ಓಂ ಬ್ರಹ್ಮಣೇ ನಮಃ
ಓಂ ಐಶ್ವರ್ಯದಾಯ ನಮಃ
ಓಂ ಶರ್ವಾಯ ನಮಃ
ಓಂ ಹರಿದಶ್ವಾಯ ನಮಃ
ಓಂ ಶೌರಯೇ ನಮಃ
ಓಂ ದಶದಿಕ್ಸಂಪ್ರಕಾಶಾಯ ನಮಃ
ಓಂ ಭಕ್ತವಶ್ಯಾಯ ನಮಃ
ಓಂ ಓಜಸ್ಕರಾಯ ನಮಃ
ಓಂ ಜಯಿನೇ ನಮಃ 70
ಓಂ ಜಗದಾನಂದ ಹೇತವೇ ನಮಃ
ಓಂ ಜನ್ಮಮೃತ್ಯುಜರಾವ್ಯಾಧಿ
ವರ್ಜಿತಾಯ ನಮಃ
ಓಂ ಉಚ್ಚಸ್ಥಾನ ಸಮಾರೂಢ ರಥಸ್ಥಾಯ ನಮಃ

ಓಂ ಅಸುರಾರಯೇ ನಮಃ
ಓಂ ಕಮನೀಯಕರಾಯ ನಮಃ
ಓಂ ಅಬ್ಜವಲ್ಲಭಾಯಾ ನಮಃ
ಓಂ ಅನ್ತರ್ಭಹಿಃ ಪ್ರಕಾಶಾಯ ನಮಃ
ಓಂ ಅಚಿಂತ್ಯಾಯ ನಮಃ
ಓಂ ಆತ್ಮರೂಪಿಣೇ ನಮಃ
ಓಂ ಅಚ್ಯುತಾಯ ನಮಃ 80
ಓಂ ಅಮರೇಶಾಯ ನಮಃ
ಓಂ ಪರಸ್ಮೈಜ್ಯೋತಿಷೇ ನಮಃ
ಓಂ ಅಹಸ್ಕರಾಯ ನಮಃ
ಓಂ ರವಯೇ ನಮಃ
ಓಂ ಹರಯೇ ನಮಃ
ಓಂ ಪರಮಾತ್ಮನೇ ನಮಃ
ಓಂ ತರುಣಾಯ ನಮಃ
ಓಂ ವರೇಣ್ಯಾಯ ನಮಃ
ಓಂ ಗ್ರಹಾಣಾಂಪತೇಯೇ ನಮಃ
ಓಂ ಭಾಸ್ಕರಾಯ ನಮಃ 90
ಓಂ ಆದಿಮಧ್ಯಾಂತರಹಿತಾಯ
ನಮಃ
ಓಂ ಸೌಖ್ಯಪ್ರದಾಯ ನಮಃ
ಓಂ ಸಕಲಜಗತಾಂಪತಯೇ ನಮಃ
ಓಂ ಸೂರ್ಯಾಯ ನಮಃ
ಓಂ ಕವಯೇ ನಮಃ
ಓಂ ನಾರಾಯಣಾಯ ನಮಃ
ಓಂ ಪರೇಶಾಯ ನಮಃ
ಓಂ ತೇಜೋರೂಪಾಯ ನಮಃ
ಓಂ ಶ್ರೀಂಹಿರಣ್ಯಗರ್ಭಾಯ ನಮಃ
ಓಂ ಹ್ರೀಂ ಸಂಪತ್ಕರಾಯ ನಮಃ 100
ಓಂ ಐಂ ಇಷ್ಟಾರ್ಥದಾಯ ನಮಃ
ಓಂ ಅನುಪ್ರಸನ್ನಾಯ ನಮಃ
ಓಂ ಶ್ರೀಮತೇ ನಮಃ
ಓಂ ಶ್ರೇಯಸೇ ನಮಃ
ಓಂ ಭಕ್ತಕೋಟಿಸೌಖ್ಯಪ್ರದಾಯಿನೇ
ನಮಃ
ಓಂ ನಿಖಿಲಾಗಮವೇದ್ಯಾಯ ನಮಃ
ಓಂ ನಿತ್ಯಾನಂದಾಯ ನಮಃ
ಓಂ ಛಾಯಾಉಷಾದೇವೀ ಸಮೇತ - 108
ಶ್ರೀ ಸೂರ್ಯನಾರಾಯಣ ಸ್ವಾಮಿನೇ
ನಮಃ



ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯದಲ್ಲಿ
(25 ದಿನಗಳು) ನಡೆದ ಅಧ್ಯಯನೋತ್ಸವ ದೃಶ್ಯಗಳು



ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯದಲ್ಲಿ ವೈಕುಂಠ ಏಕಾದಶಿ ಸಂದರ್ಭವಾಗಿ
ತಿ.ತಿ.ದೇ. ನಿರ್ವಹಿಸಿದ ಕೊಯಿಳ್ ಆಳ್ವಾರ್ ತಿರುಮಂಜನ (ಆಲಯಶುದ್ಧಿ) ಕಾರ್ಯಕ್ರಮ ದೃಶ್ಯಗಳು



ಇತ್ತೀಚೆಗೆ ತಿರುಪತಿ ಶ್ರೀಪದ್ಮಾವತಿ ವಿದ್ಯಾಲಯದಲ್ಲಿ ಮಹಿಳೆಯರೊಂದಿಗೆ ಉತ್ತಮ ಸಮಾಜ ನಿರ್ಮಾಣಕ್ಕೆ ಮಹಿಳೆಯರಿಗೆ ವಿದ್ಯೆ ಎಷ್ಟು
ಮುಖ್ಯವೆಂದು ತಿಳಿಸುತ್ತಿರುವ ತಿ.ತಿ.ದೇ. ಧರ್ಮಕರ್ತ ಮಂಡಳಿ ಸದಸ್ಯರು ಡಾ॥ ಸುಧಾ ನಾರಾಯಣಮೂರ್ತಿ



ಡಿಸೆಂಬರ್ ತಿಂಗಳಲ್ಲಿ ತಿರುಮಲೆ ಕುಮಾರಧಾರ, ಪಸುಪುಧಾರ ಡ್ಯಾಮ್ ಬಳಿ ಗಂಗೆ ಪೂಜೆಯನ್ನು
ನಿರ್ವಹಿಸುತ್ತಿರುವ ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ್‌ಕುಮಾರ್ ಸಿಂಘಾಲ್ ಐ.ಏ.ಎಸ್.



## ಮಧ್ವನವಮಿ ತನಿಮಿತ್ತ ಈ ಸಕಾಲಿಕ ಚಿಂತನೆ

# ಆಚಾರ್ಯಮಧ್ವ – ಮನುಕುಲತಿಲಕ – ಅಸಾಮಾನ್ಯ ಆಧ್ಯಾತ್ಮಸಾಧಕ

- ಡಾ॥ ಗುರುರಾಜ ಪೋಶೆಟ್ಟಿ ಹಳ್ಳಿ
9035618076

ತಮ್ಮ ನಡೆನುಡಿಗಳಿಂದ ಜನತೆಯ ಕ್ಷೇಮವನ್ನು ಬಯಸಿದ, ಸಾಧಿಸಿದ ಶ್ರೀ ಮಧ್ವಾಚಾರ್ಯರು ತಮ್ಮ ಅಪೂರ್ವ ಗ್ರಂಥಗಳಿಂದಲೂ ಸಮಾಜದ ಸೌಖ್ಯವನ್ನೂ ನೀಡಿ ಅನ್ವರ್ಥನಾಮರೆನಿಸಿದರು. ಮಧು ಅಂದರೆ ಸುಖ, ಆನಂದ. ಆದನ್ನು ನೀಡುವ ಅಂದರೆ ಶಾಸ್ತ್ರ. ಅದನ್ನು ರಚಿಸಿದವರಾದ್ದರಿಂದ ಮಧ್ವ ಎಂದು ಸಾರ್ಥಕನಾಮರಾಗಿ ಮೋಕ್ಷಾದರ್ಶ ಮತ್ತು ಜೀವನಾದರ್ಶನವನ್ನು ನೀಡಿದರು.

ಆ ಹುಡಗನ ವಯಸ್ಸು ಕೇವಲ ಹನ್ನೆರಡು! ಮುಖ ತೇಜಸ್ಸಿನಿಂದ ಕಂಗೊಳಿಸುತ್ತಿತ್ತು. ಹೊಂಬಣ್ಣದ ಶರೀರ. ಕಂಗಳಲ್ಲಿ ದಿವ್ಯ ಪ್ರಭೆ ಪ್ರತಿಫಲಿಸುತ್ತಿತ್ತು. ಹಣೆಯಲ್ಲಿ ಗೋಪಿ ಚಂದನ. ಶಿಖೆಯನ್ನು ಬಿಟ್ಟಿದ್ದ ಅವನು ಚುರುಕು ಬುದ್ಧಿಯವನೆಂಬುದು ನೋಡಿದ ಕೂಡಲೇ ಗೋಚರಿಸುತ್ತಿತ್ತು. ಮೊಣಕಾಲ ಮೇಲೆ ಬರುವಂತೆ ತುಂಡು ಪಂಚೆಯುಟ್ಟು ಮೈಮೇಲೆ ಉತ್ತರೀಯ ಹೊದ್ದಿದ್ದ ಅವನು ಅಂದು ತನ್ನ ತಂದೆಯ ಮುಂದೆ ಬಂದು ನಿಂತಾಗ ಅದು ಎಂದಿನಂತಿರಲಿಲ್ಲ. ಏನೋ ಒಂದು ಮಹತ್ವದ ಸಂಗತಿಯನ್ನು ಅರುಹಲು ಅವನು ಅಲ್ಲಿ ಬಂದು ನಿಂತಂತ್ತಿತ್ತು. ಯಾವುದೋ ತಾಳೆಗರಿ ಗ್ರಂಥದ ಪರಿಶೀಲನೆಯಲ್ಲಿದ್ದ ತಂದೆ ಏನನ್ನುವಂತೆ ಎದುರು ನಿಂತ ಮಗನತ್ತ ನೋಡಿದರು.

"ಅಪ್ಪಾ, ನಾನೊಂದು ನಿರ್ಧಾರವನ್ನು ತಳೆದಿದ್ದೇನೆ. ಅದನ್ನು ತಮಗೆ ತಿಳುಹಲೆಂದು ಬಂದೆ".

"ನಿರ್ಧಾರ! ಏನು ನಿರ್ಧಾರವಪ್ಪ ಅದು?"

"ನಾನು ಸಂನ್ಯಾಸ ದೀಕ್ಷೆ ಸ್ವೀಕರಿಸಲು ನಿಶ್ಚಯಿಸಿದ್ದೇನೆ".

ತಂದೆಗೆ ತಮ್ಮ ಕಿವಿಗಳನ್ನೇ ನಂಬಲಾಗಲಿಲ್ಲ. ತಾವು ಕೇಳುತ್ತಿರುವುದು ನಿಜವೇ? ಅಥವಾ ಹುಡುಗ ಹುಡುಗಾಟದ ಮಾತನಾಡುತ್ತಿದ್ದಾನೆಯೇ?

"ಏನೆಂದೆ? ಸಂನ್ಯಾಸ ದೀಕ್ಷೆಯೇ? ಅದೂ ಇಷ್ಟು ಚಿಕ್ಕ ವಯಸ್ಸಿನಲ್ಲಿ! "

"ಹೌದು ಅಪ್ಪ. ನನಗೆ ಈ ಲೌಕಿಕ ಜೀವನದಲ್ಲಿ ಆಸಕ್ತಿ ಇಲ್ಲ. ಹೆಂಡತಿ, ಮಕ್ಕಳು, ಆಸ್ತಿ ಪಾಸ್ತಿ ಎಂಬ ಈ ಜಂಜಾಟದಲ್ಲಿ ಬೀಳಲು ಇಷ್ಟವಿಲ್ಲ. ನನಗೆ ಸಂನ್ಯಾಸಕ್ಕೆ ಅಪ್ಪಣೆ ಕೊಡಿ."

"ಅದರ ಚಿಂತೆ ಬೇಡ, ನಿಮಗೊಬ್ಬ ಮಗ ಹುಟ್ಟಿ ವಂಶ ಮುಂದುವರಿಸುತ್ತಾನೆ. ನನ್ನನ್ನು ಬಿಟ್ಟು ಕೊಡಿ."

**ಶ್ರೀಮಧ್ವಾಚಾರ್ಯರು ರಚಿಸಿರುವ 'ಸರ್ವಮೂಲ' ವೆಂಬ ಮೂವತ್ತೇಳು ಗ್ರಂಥಗಳು**

**1.ಗೀತಾ ಪ್ರಸ್ಥಾನ - 1. ಗೀತಾ ಭಾಷ್ಯ, 2.ಗೀತಾ ತಾತ್ಪರ್ಯ ನಿರ್ಣಯ**

**2. ಸೂತ್ರ ಪ್ರಸ್ಥಾನ - 1. ಬ್ರಹ್ಮಸೂತ್ರ ಭಾಷ್ಯ 2. ಅಣು ವ್ಯಾಖ್ಯಾನ 3. ನ್ಯಾಯ ವಿವರಣ 4. ಅಣು ಭಾಷ್ಯ**


**3.ಉಪನಿಷತ್ ಪ್ರಸ್ಥಾನ - ಎಲ್ಲ ಹತ್ತು ಮುಖ್ಯ ಉಪನಿಷತ್ತುಗಳ ಮೇಲೆ ಭಾಷ್ಯ**

**4. ಋಗ್ಭಾಷ್ಯ - ಋಗ್ವೇದದ ಮೊದಲ ಋಕ್ಕುಗಳಿಗೆ ಅರ್ಥ.**

**5. ಪ್ರಕರಣಗಳು - ಕಥಾಲಕ್ಷಣ, ಪ್ರಮಾಣ ಲಕ್ಷಣ, ತತ್ತ್ವ ಸಂಖ್ಯಾನ, ತತ್ತ್ವವಿವೇಕ, ಮಾಯವಾದ ಖಂಡನ, ಮಿಥ್ಯಾತ್ವಾನುಮಾನ ಖಂಡನ, ಉಪಾದಿ ಖಂಡನ, ತತ್ತ್ವೋದ್ಯೋತ, ಶ್ರೀಮದ್ವಿಷ್ಣುತತ್ತ್ವ ನಿರ್ಣಯ.**

**6. ಪುರಾಣೇತಿಹಾಸ - ಮಹಾಭಾರತ ತಾತ್ಪರ್ಯ ನಿರ್ಣಯ, ಭಾಗವತ ತಾತ್ಪರ್ಯ, ಯಮಕ ಭಾರತ.**

**7. ಸ್ತೋತ್ರಗಳು - ದ್ವಾದಶ ಸ್ತೋತ್ರ, ನರಸಿಂಹ ನಖ ಸ್ತೋತ್ರ, ಕೃಷ್ಣಾಮೃತ ಮಹಾರ್ಣವ, ಜಯಂತೀ ನಿರ್ಣಯ, ಯತಿ ಪ್ರಣವ ಕಲ್ಪ, ಸದಾಚಾರ ಸ್ಮೃತಿ.**



ಹೀಗೆ ಶುರುವಾದ ಅಪ್ಪ ಮಗನ ನಡುವಿನ ದ್ವಂದ್ವ ಮಗ ಗೆಲ್ಲುವುದರಲ್ಲಿ ಮುಕ್ತಾಯಗೊಂಡಿತು. ಅವನ ಸಂಕಲ್ಪದ ಮುಂದೆ ತಂದೆ ತಾಯಿಯ ಮೋಹ ಮುರಿದು ಬಿತ್ತು. ಅವನು ಶ್ವೇತ ವಸ್ತ್ರವನ್ನು ನೀರಿನಲ್ಲಿ ವಿಸರ್ಜಿಸಿ ಕಾಷಾಯ ವಸ್ತ್ರವನ್ನು ಧರಿಸಿಯೇ ಬಿಟ್ಟ, ಕೇವಲ ಹನ್ನೆರಡು ವರ್ಷ ವಯಸ್ಸಿನಲ್ಲಿ.

ಯಾರೀ ಬಾಲಕ?

ಅಷ್ಟು ಚಿಕ್ಕವಯಸ್ಸಿನಲ್ಲೇ ಆ ಬಾಲಕ ಸಂನ್ಯಾಸ ಸ್ವೀಕರಿಸಬೇಕಾದರೆ ಅನೇಕ ಜನ್ಮಗಳ ಪುಣ್ಯಶೇಷ ವಿರಲೇಬೇಕು. ನಿಜ. ತಮ್ಮ ಹಿಂದಿನ ಜನ್ಮದಲ್ಲಿ ಹನುಮಂತ ಹಾಗೂ ಭೀಮಸೇನನಾಗಿದ್ದ ತಾವು ಈ ಜನ್ಮದಲ್ಲಿ ಈ ರೂಪದಲ್ಲಿ ಹುಟ್ಟಿರುವುದಾಗಿ ಸರಿದ ಅವರು ತ್ರಿಮತಸ್ಥಾಚಾರ್ಯರಲ್ಲಿ ಒಬ್ಬರಾದ ಶ್ರೀ ಮನ್ಮಧ್ವಾಚಾರ್ಯರು. ಸನಾತನ ಧರ್ಮಕ್ಕೆ ಸುತ್ತಲೂ ಅಪಾಯಗಳು ಮುತ್ತಿಕೊಂಡಿದ್ದಾಗ ವೇದೋದ್ಧಾರಕ್ಕಾಗಿ ಅವತರಿಸಿದ ಮಹಾನುಭಾವರು.

ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನು, "ಧರ್ಮವು ನಶಿಸಿ, ಅಧರ್ಮವು ವಿಜೃಂಭಿಸಿದಾಗ ಧರ್ಮ ಸಂಸ್ಥಾಪನೆಗಾಗಿ ಅವತರಿಸುವುದಾಗಿ" ನೀಡಿರುವ ಭರವಸೆಯಂತೆ ವಿವಿಧ ಕಾಲ ಖಂಡಗಳಲ್ಲಿ, ವಿವಿಧ ರೂಪಗಳಲ್ಲಿ ಅವತರಿಸಿ ಧರ್ಮವನ್ನು ವಿನಾಶದಿಂದ ರಕ್ಷಿಸಿದ್ದನ್ನು ಭರತ ಖಂಡದ ಇತಿಹಾಸ ಸಾರಿ ಹೇಳುತ್ತದೆ. ಹಾಗೆ ಜನಿಸಿದವರು ಈ ಸಂತ ಶ್ರೇಷ್ಠರು.

ವೇದೋಪನಿಷತ್ತುಗಳು ಭರತ ಭೂಮಿಯ ಅಮೂಲ್ಯ ಆಸ್ತಿ. ಜಗತ್ತೇ ಕೊಂಡಾಡುವ ಜ್ಞಾನನಿಧಿ. ಮಹಾನ್ ಋಷಿಗಳ ಅಖಂಡ ತಪಸ್ಸಿನ ಫಲವಾಗಿ ಅವರಿಗೆ ಗೋಚರಿಸಿ ಮನುಕುಲಕ್ಕೆ ಅವರು ನೀಡಿದ ಅಪೌರುಷೇಯವಾದ ಜೀವನ ಧರ್ಮಶಾಸ್ತ್ರ. ಅವು ಅಂದಿಗೂ ಇಂದಿಗೂ ಎಂದೆಂದಿಗೂ ಮಾನವರನ್ನು ದೈವತ್ವದ ಕಡೆಗೆ ಕರೆದೊಯ್ಯುವ ಮಾರ್ಗ ಸೂತ್ರಗಳು.

ಶ್ರೀಮನ್ಮಧ್ವಾಚಾರ್ಯರಂಥ ಆಚಾರ್ಯರುಗಳು ಎಷ್ಟೋ ಮಂದಿ ಹುಟ್ಟಿ ದಾರಿ ತಪ್ಪುತ್ತಿದ್ದ ಜನರನ್ನು ಧರ್ಮಮಾರ್ಗಕ್ಕೆ ಕರೆದುಕೊಂಡು ಬರುವ ಕಾರ್ಯವನ್ನು ಮಾಡಿದರೂ ಅವರ ಮಹಾನ್ ಕಾರ್ಯಕ್ಕೆ ವಿಘ್ನಗಳನ್ನೊಡುತ್ತಿದ್ದ ವಿರೋಧಿ ಶಕ್ತಿಗಳು ಕಾಲಕಾಲಕ್ಕೆ ತಲೆ ಎತ್ತಿ ಅಂಥವರ ಪ್ರಯತ್ನಗಳನ್ನು ಕುಂಠಿತಗೊಳಿಸುತ್ತಿದ್ದುದು ಅಷ್ಟೇ ವಾಸ್ತವ. ಎಲ್ಲ ಮತಗಳ ಗುರುಗಳು ಹೇಳಿದ್ದನ್ನು ಸಯಾಗಿ ಪಾಲಿಸದೆ, ಅರ್ಥಮಾಡಿಕೊಳ್ಳದೆ ಕೆಲವೊಮ್ಮೆ ಮಿತಿಮೀರಿ ವರ್ತಿಸುತ್ತಿದ್ದ ಅವರ ಶಿಷ್ಯವರ್ಗದವರೂ ಅವರ ಕಾರ್ಯಕ್ಕೆ ಅಡ್ಡಿ ಆತಂಕಗಳನ್ನುಂಟು ಮಾಡುತ್ತಿದ್ದುದನ್ನು ಕಡೆಗಣಿಸುವಂತಿಲ್ಲ.

ಸುಮಾರು ಎಂಟುನೂರು ವರ್ಷಗಳ ಹಿಂದಿನ ಮಾತು. ಇಂದಿನ ಉಡುಪಿಯಿಂದ ಸುಮಾರು ಎಂಟು ಕಿಲೋ ಮೀಟರಿನ ಆಸುಪಾಸಿನಲ್ಲಿರುವ



ಪಾಜೆ ಅಥವಾ ಪಾಜಕ ಗ್ರಾಮದಲ್ಲಿನ ಬೀದಿಯ ನಡುಮನೆಯ ವಾಸಿ ನಾರಾಯಣ ಭಟ್ಟ ಮತ್ತು ವೇದವತಿಯರ ಮೂರನೆಯ ಸುಪುತ್ರರೆ ಶ್ರೀ ಮಧ್ವರು. ಅವರ ಅಣ್ಣಂದಿರಿಬ್ಬರೂ ಬಾಲ್ಯಕ್ಕೆ ಮುನ್ನವೇ ವಿಧಿವಶ. ಸಾತ್ವಿಕ ಬ್ರಾಹ್ಮಣ ದಂಪತಿ ಬಯಸಿ ಪಡೆದ ಕೂಸಿಗೆ ಇಟ್ಟ ಹೆಸರು ಅವರ ಆರಾಧ್ಯದೈವವಾದ ವಾಸುದೇವ. ಜನನ ಆಶ್ವಯುಜ ಮಾಸ ಶುಕ್ಲಪಕ್ಷ ದಶಮಿಯ ದಿನ. ಅಂದರೆ ವಿಜಯದಶಮಿಯ ಶುಭ ತಿಥಿಯಲ್ಲಿ . ಹುಟ್ಟಿದ ಇಸವಿಯ ಬಗೆಗೆ ಭಿನ್ನಾಭಿಪ್ರಾಯವಿದ್ದರೂ ಬಹುಮತದಂತೆ ಕ್ರಿ.ಶ. 1200. ಅವರು ಜನಿಸಿದ ಪಾಜಕ ಪರಶುರಾಮ ಕ್ಷೇತ್ರವೆಂದರೆ ಪ್ರಸಿದ್ಧಿ. ಪರಶುರಾಮರ ಮೂರ್ತಿಯನ್ನು ಧರಿಸಿದ ಪರಶುರಾಮ ಬೆಟ್ಟ, ದುರ್ಗೆಯಿಂದ ಕಂಗೊಳಿಸುವ ಕುಂಜಾರುಗಿರಿ ಸನಿಹದ ತಾಣಗಳು. ಪಾಜಕದ ಸುತ್ತಲಿರುವ ತೀರ್ಥಗಳೇ ಪರಶು ತೀರ್ಥ, ಧನುಸ್ ತೀರ್ಥ, ಬಾಣ ತೀರ್ಥ ಮತ್ತು ಗದಾ ತೀರ್ಥ. ಬಾಲ್ಯದಲ್ಲಿಯೇ ತಂದೆ-ತಾಯಿಯನ್ನು ಪಿಶಾಚಿಯಿಂದ ರಕ್ಷಿಸಿದ ಹಿರಿಮೆ ಆ ಮಗುವಿನದು. ಹುರುಳಿಯನ್ನು ತಿಂದು ಅರಗಿಸಿಕೊಂಡ ಕೂಸು, ತಂದೆಯನ್ನು ಋಣಭಾರದಿಂದ ಪಾರು ಮಾಡಲು ಗ್ರಾಮದ ಧನಿಕನಿಗೆ ಹುಣಿಸೆ ಬೀಜಗಳನ್ನು ಕೊಟ್ಟಾಗ, ಆ ಧನಿಕನಿಗೆ ಆ ಬೀಜಗಳು ಬಂಗಾರದ ನಾಣ್ಯಗಳಾಗಿ ಕಂಡವಂತೆ. ಆ ಬಾಲಕ ಕುಂಜಾರುಗಿರಿಯಲ್ಲಿ ಓಡಾಡಿದ ಜಾಗಗಳಲ್ಲಿ ಹೆಜ್ಜೆ ಗುರುತುಗಳು ಕಲ್ಲಿನಲ್ಲಿ ಮೂಡುತ್ತಿದ್ದವಂತೆ. ಇದನ್ನೆಲ್ಲ ಕಂಡ ಹಳ್ಳಿಯ ಜನ ಮಗು ದೈವಾಂಶ ಸಂಜಾತವೆಂದೆ ಭಾವಿಸಿ ಬಾಲಕೃಷ್ಣನನ್ನು ನೆನೆಯುತ್ತಿದ್ದರಂತೆ.

ವಾಸುದೇವನದು ಕೇವಲ ಶರೀರ ಶ್ರೀಮಂತಿಕೆಯಲ್ಲ. ಆ ಬಾಲಕನ ಕಂಠ ಸರಸ್ವತಿಯ ಸಿರಿಯನ್ನು ಹೊತ್ತು ಭಾವ-ಭಾಷೆ ಅಸ್ಖಲಿತವಾಗಿ, ಸಂಸ್ಕೃತದ ಗುಣಿತಾಕ್ಷರಗಳು ಅಗಣಿತವಾಗಿ ಹೊರ ಹೊಮ್ಮುತ್ತಿದ್ದುವಂತೆ. ಬಾಲ್ಯದಿಂದಲೆ ಶ್ಲೋಕ ಪಂಡಿತನಾದ ವಾಸುದೇವ, ಉಡುಪಿಯ ಅನಂತೇಶ್ವರನ ಭಕ್ತರಾದ ತಂದೆಯಿಂದ ಪುರಾಣ ಕಥನಗಳನ್ನು ಕೇಳಿ ಆಧ್ಯಾತ್ಮದಲ್ಲಿ ಆಸಕ್ತಿ ತಳೆಯುತ್ತಾನೆ. ಉಪನಯನವಾಗುತ್ತಿದ್ದಂತೆ ತೋಟಂತಿಲ್ಲಾಯರ ಗುರುಕುಲ ಸೇರುತ್ತಾನೆ. ಅಲ್ಲಿಯ ಪಾಠ-ಪ್ರವಚನಗಳು ತೀರ ಸಾಧಾರಣವೆನಿಸಿ,ಯತಿಯಾಗಬೇಕೆಂಬ ಹಂಬಲದಿಂದ ಉಡುಪಿಯ ಅಚ್ಯುತಪ್ರಜ್ಞರೆಂಬ ಆಚಾರ್ಯರನ್ನು ಭೇಟಿ ಮಾಡಿ ಅವರಿಂದ ಸಂನ್ಯಾಸ ದೀಕ್ಷೆ ಪಡೆಯುತ್ತಾನೆ. ಅಚ್ಯುತ ಪ್ರಜ್ಞರಾದರಾದರೋ ತಮ್ಮ ಶಿಷ್ಯನ ಜ್ಞಾನ ಸಂಪತ್ತನ್ನು ಕಂಡು ವಾಸುದೇವನನ್ನು 'ಪೂರ್ಣಪ್ರಜ್ಞ' ನೆಂದು ಕರೆಯುತ್ತಾರೆ. ಕಾವಿ ಧರಿಸಿದ ಬಾಲಕನಿಗೆ ಆಗ ಕೇವಲ ಹನ್ನೊಂದು ವರುಷಗಳು. ಈ ವಿಷಯ ತಿಳಿದ ನಾರಾಯಣಭಟ್ಟ - ವೇದಾವತಿ ದಂಪತಿ ಮಗನನ್ನು ಗೃಹಸ್ಥನನ್ನಾಗಿಸಲು ಪ್ರಯತ್ನಪಟ್ಟರೂ ಅದು ಫಲಕಾರಿಯಾಗದೆ ನಿರಾಶರಾಗುತ್ತಾರೆ. ಅಚ್ಯುತ ಪ್ರಜ್ಞರಾದರೋ ತಮ್ಮ ಪೀಠಕ್ಕೆ ಉತ್ತರಾಧಿಕಾರಿ ಸಿಕ್ಕಿದನೆಂಬ ಸಂತಸದಿಂದ 'ಪೂರ್ಣಪ್ರಜ್ಞ'ನಲ್ಲಿ ಅಂತಃಸ್ಫುಟವಾಗಿದ್ದ ವಿದ್ವತ್ತು ಪ್ರಕಾಶಗೊಳ್ಳುಲು ನೆರವಾಗುತ್ತಾರೆ. ಪೂರ್ಣಪ್ರಜ್ಞಯತಿಯಾದರೋ ಅಷ್ಟೇ. ಒಮ್ಮೆ ಕೇಳಿದ ವಿಷಯವನ್ನು ಮರೆಯುವವರೆ ಅಲ್ಲ.ಸರಸ್ವತಿಯ ಅನುಗ್ರಹದಿಂದ ಭಾರತ-ಭಾಗವತಗಳು ಅವರ ನಾಲಗೆಯಲ್ಲಿ ವಿಜೃಂಭಿಸುತ್ತವೆ. ಯಾವ ವಿಷಯದ ಬಗ್ಗೆಯಾಗಲಿ ನಿರ್ದಿಷ್ಟ ನಿಲುವು ಆ ಯತಿಯದು. ಹಿಂದಿನ ವ್ಯಾಖ್ಯಾನ ಕಾರರ ಟೀಕೆ-ಟಿಪ್ಪಣೆಗಳನ್ನು ಅಂಧಾನುಕರಣೆ ಮಾಡುವ ಪರಿಪಾಠವಿಲ್ಲದವರು. ಅಂದಿನ ಧಾರ್ಮಿಕ ಬಿರುಗಾಳಿಯಲ್ಲಿ ದಿಕ್ಕು ಕಾಣದೆ ವಿಸ್ತರಿಸ ಹೊರಟ ವೈದಿಕರು 'ಅಹಂ ಬ್ರಹ್ಮಾಸ್ಮಿ 'ಯನ್ನು 'ನಾನೇ ಪರಬ್ರಹ್ಮ. ನನ್ನ ಆರಾಧನೆಯೆ ನಿಮ್ಮ ಗುರಿ' ಎಂದು ತಮ್ಮನ್ನು ತಾವೇ ದೇವರೆಂದು ಕರೆದು ಅಮಾಯಕ ಭಕ್ತರನ್ನು ಶೋಷಿಸುತ್ತಿದ್ದರು. ಸಗುಣ ಬ್ರಹ್ಮನೆಂದರೆ ಕಾವಿ ಧರಿಸಿದ ಸಂನ್ಯಾಸಿ ಎಂಬ ಭಾವ ಬೇರೂರಿ ಆ ಸಂನ್ಯಾಸಿಯ ಸೇವೆಯೆ ಭಗವಂತನ ಸೇವೆ ಎಂಬವಾದ ಮುಂಚೂಣಿಯಲ್ಲಿತ್ತು. ಜಗತ್ತು ಮಿಥ್ಯೆ ಅರ್ಥಾತ್ ಕ್ಷಣಿಕ ಎಂಬ ಶ್ರೀ ಶಂಕರರ ಮಾತನ್ನು ಭೂಮಿಯೆಂಬುದೇ ಇಲ್ಲ. ಅದು ಕೇವಲ ಭ್ರಮೆ ಎನ್ನುವಂತಹ ಮಾಯವಾದವೂ ತಲೆ ಎತ್ತಿ ಮೆರೆಯುತ್ತಿತ್ತು. ಶ್ರೀ ರಾಮ


## ಶ್ರೀ ವೆಂಕಟೇಶ್ವರ ವೇದ ಪರಿರಕ್ಷಣ ಟ್ರಸ್ಟ್

ಹಿಂದೂ ಸಂಸ್ಕೃತಿಯನ್ನು, ಸನಾತನ ಧರ್ಮಕ್ಕೆ ಮೂಲ ಸೋತ್ರವಾದ ವೈದಿಕ ಸಂಪ್ರದಾಯ ಪರಿರಕ್ಷಣೆಯಿಂದ ಅದರ ಪರಿವ್ಯಾಪ್ತಿಯನ್ನು ಹಿಗ್ಗಿಸುವ ಮಹೋನ್ನತ ಲಕ್ಷ್ಯದಿಂದ 2007 ರಲ್ಲಿ ತಿ.ತಿ.ದೇ ವೇದ ಪರಿರಕ್ಷಣ ಟ್ರಸ್ಟ್ ಆರಂಭವಾಗಿದೆ. ಉನ್ನತಧ್ಯೇಯ ಹೊಂದಿದ ಈ ಟ್ರಸ್ಟ್ ಗೆ ಸದ್ಭಾವನೆಯಿಂದ ವಂತಿಗೆ ನೀಡಬೇಕೆಂದು ಲೋಕೋಪಕಾರಿಗಳನ್ನು ಆಹ್ವಾನಿಸುತ್ತಿದ್ದೇವೆ.8೦(ಜಿ) ಅಧಿಕರಣ ದನ್ವಯ ಆದಾಯಕರ ವಿನಾಯಿತಿ ದೊರೆಯುತ್ತವೆ.

**ಡಿಮಾಂಡ್ ಡ್ರಾಫ್ಟ್ /ಚೆಕ್‌ಗಳನ್ನು ಕಳುಹಿಸಬೇಕಾದ ವಿಳಾಸ:**

ಮುಖ್ಯ ಗಣಾಂಕಾಧಿಕಾರಿ . ತಿ.ತಿ.ದೇ. ಆಡಳಿತ ಭವನ,

ಕೆ.ಟಿ.ರಸ್ತೆ ,ತಿರುಪತಿ - 517501

***ಹೆಚ್ಚಿನ ವಿವರಗಳಿಗಾಗಿ ಕರೆ ಮಾಡಬೇಕಾದ***

☎- *0877-2277777,2264258*





ನುಜರ ವಿಶಿಷ್ಟಾದ್ವೈತ ಸೀಮಿತ ವೈದಿಕ ಪ್ರಜ್ಞೆ ಎಂಬ ಅನಿಸಿಕೆ ಕೆಲವರದಾದರೆ, ಅದು ತ್ರಿಶಂಕು ವೇದಾಂತ ಎಂದು ಮತ್ತೆ ಹಲವರ ಟೀಕೆ-ಟಿಪ್ಪಣಿ. ಹೀಗಾಗಿ ನಿಜವಾದ ಜಿಜ್ಞಾಸುಗಳಿಗೆ ಯಾವುದು ಸರಿ, ಯಾವುದು ತಪ್ಪು ಎಂದು ಹೇಳುವವರೆ ಇಲ್ಲವಾಗಿ ನಾಸ್ತಿಕತೆ ಮೆರೆಯಲಾರಂಭಿಸಿತು. ಈ ಎಲ್ಲ ಸಂದೇಹಗಳಿಗೆ ಸಮಾಧಾನಕರವಾದ ಉತ್ತರ ನೀಡಬೇಕೆಂಬ ಆಸಡ್ಡೆ ಬಲವತ್ತರವಾಗಿ ಪೂರ್ಣಪ್ರಜ್ಞರು ತಾವು ಅಚ್ಯುತಪ್ರಜ್ಞರ ಉತ್ತರಾಧಿಕಾರಿಯಾಗಲು ಸಮ್ಮತಿಸಿದರು. ಹೀಗೆ ಕೇವಲ ಸಂನ್ಯಾಸ ದೀಕ್ಷೆ ಮಾತ್ರ ಪಡೆದಿದ್ದ ಪೂರ್ಣಪ್ರಜ್ಞ ಗುರುಗಳ ಪೀಠವನ್ನೇರಿದಾಗ, ಅವನನ್ನು ಆಶೀರ್ವದಿಸಿ ಗುರು ಗಳು ನೀಡಿದ ನಾಮಧೇಯ 'ಆನಂದತೀರ್ಥ. 'ಆನಂದ ತೀರ್ಥ' ಎಂಬುದು 'ಮಧ್ವ' ಎಂಬ ವೈದಿಕ ನಾಮದ ವಿವ ರಣೆ. ಆನಂದತೀರ್ಥ ಯತಿಗೆ ಈ ವೈದಿಕ ನಾಮವೇ ನಾಮದ ವಿವರಣೆ. ಆನಂದತೀರ್ಥಯತಿಗೆ ಈ ವೈದಿಕ ನಾಮವೇ ಪ್ರಿಯವಾಗಿ ಅದೇ ಅವರ ಕಾವ್ಯಾ ನಾಮವಾಯಿತು. ಪೂರ್ಣ ಬೋಧ ಭಕ್ತರು ಪ್ರೀತಿಯಿಂದ ಕರೆದ ಹೆಸರು. ದಶ ಪ್ರಮತಿ, ಸರ್ವಜ್ಞ, ದ್ವೈತಾಚಾರ್ಯ ಇನ್ನಿತರ ನಾಮಧೇಯಗಳು.

ಬಾಲ್ಯದಲ್ಲಿಯೆ ಯತಿಪಟ್ಟ ಕಟ್ಟಿಕೊಂಡ ಆನಂದ ತೀರ್ಥರಿಗೆ ಜಗತ್ತಿನ ಸೃಷ್ಟಿಯ ಬಗೆಗೆ, ಅದರಲ್ಲಿ ಕಾಣುವ ವಿಭಿನ್ನತೆಯ ಬಗೆಗೆ ಕುತೂಹಲ. ಅದ್ವೈತ ಅಭೇದದ ತತ್ತ್ವವನ್ನು ಪ್ರತಿಪಾದಿಸಿದರೆ ದ್ವೈತ ಜಗತ್ತಿನ ಸಕಲ ಚರಾಚರ ವಸ್ತುಗಳ ಭೇದವನ್ನು ಗುರುತಿಸುತ್ತದೆ.ವೈದಿಕ ಸಂಪ್ರದಾಯ ಯಾವುದನ್ನು ಗುರುತಿಸುತ್ತದೆ, ಶ್ರೀ ಕೃಷ್ಣ ಭಗವದ್ಗೀತೆಯಲ್ಲಿ ಹೇಳಿರುವುದು ಭೇದವೋ ಅಥವಾ ಅಭೇದವೋ ಎಂಬ ಹುಡುಕಾಟ. ಈ ಹುಡುಕಾಟಕ್ಕಾಗಿ ಹದಿ ವಯಸ್ಸಿನಲ್ಲಿ ಕ್ಷೇತ್ರ ದರ್ಶನ. ಶ್ರೀರಂಗಂ, ಅನಂತಶಯನ, ಕನ್ಯಾಕುಮಾರಿ, ರಾಮೇಶ್ವರಗಳ ಯಾತ್ರೆ, ಆ ಯಾತ್ರೆಯ ಸಮಯದಲ್ಲಿ ದೇವ-ದೇವಿಯರಲ್ಲಿನ ಭೇದತ್ವ, ಮನುಷ್ಯ-ಮನುಷ್ಯರದಲ್ಲಿನ ಭೇದ, ಜಡವಸ್ತುಗಳಲ್ಲಿನ ಭೇದ,ಪ್ರಕೃತಿಯಲ್ಲಿ ವೈವಿಧ್ಯ - ಇವೆಲ್ಲವನ್ನು ಗಮನಿಸಿದ ಪೂರ್ಣಪ್ರಜ್ಞರಿಗೆ ಜಗತ್ತು ಸತ್ಯ, ಅದು ಮಾಯೆಯಲ್ಲ, ಅದರ ನಿಯಂತ್ರಕ ಪರಮಸತ್ಯ. ಆ ನಿಯಂತ್ರಕ ಸ್ವತಂತ್ರ, ಅವನ ಇಚ್ಛೆಯಂತೆ ನಡೆಯುವ, ನಡೆಸುವ ಎಲ್ಲ ಘಟನೆಗಳು, ಕಾರಣ ಪುರುಷರು ಅಸ್ವತಂತ್ರ ಎಂಬ ಭಾವ ಅವರಿಗೆ ಸುಸ್ಪಷ್ಟವಾಗಿ ಮನದಟ್ಟಾಯಿತು. ಆ ಭೇದಗಳನ್ನು ಸ್ಥೂಲವಾಗಿ ಐದು ಭಾಗಗಳಾಗಿ ನೋಡಬಹುದೆಂದು ಮಧ್ವರು ವಿವರಿಸಿದ್ದು ಜೀವಕ್ಕೂ ಜೀವಕ್ಕೂ ಭೇದ ಜೀವಕ್ಕೂ ಜಡಕ್ಕೂ ಭೇದ. ಜೀವಕ್ಕೂ ಪರಮಾತ್ಮನಿಗೂ ಭೇದ ಹಾಗೂ ಜಡಕ್ಕೂ ಪರಮಾತ್ಮನಿಗೂ ಭೇದ. ಆ ಪರಮಾತ್ಮನನ್ನು ಯಾವ ಹೆಸರಿನಿಂದ ಕರೆದರೂ ಒಂದೆ. ಆ ಭೇದ ಪ್ರಕೃತಿ ನಿಯಮ.

ಈ ಸತ್ಯವನ್ನು ಮನಗಂಡ ಮಧ್ವರು ತಮ್ಮ ದಕ್ಷಿಣ ಭಾರತ ಯಾತ್ರೆಯ ಅನಂತರ ಮಾಡಿದ ಮೊದಲ ಕೆಲಸ ಭಗವದ್ಗೀತೆಗೆ ಭಾಷ್ಯ ಬರೆದದ್ದು.ಆ ಭಾಷ್ಯದ ಹಿನ್ನೆಲೆಯಲ್ಲಿಯೇ, ಭಾರತೀಯ ತತ್ತ್ವ ಶಾಸ್ತ್ರದಲ್ಲಿ ಹೊಸ ದೊಂದು ವಿಚಾರಧಾರೇ ಪ್ರವಹಿಸತೊಡಗಿತು. ತಮ್ಮ ತತ್ತ್ವ ವಾದವನ್ನು ಪ್ರವಚನಗಳ ಮೂಲಕ ಪ್ರಚುರಪಡಿಸಿದ ಮಧ್ವರು ಅದುವರೆವಿಗೆ ಪ್ರಚಲಿತವಾಗಿದ್ದ ಇಪ್ಪತ್ತೊಂದು ವೇದಾಂತ ಭಾಷ್ಯಗಳಲ್ಲಿನ ವಿಷಯಕ್ಕೆ ಹೊರತಾದ ನೂತನ ರೂಪವನ್ನು ಕೊಟ್ಟು ವೇದಾಂತ ಜ್ಞಾನಪ್ರಿಯರನ್ನು ಆಕರ್ಷಿಸಿದರು. ಅಂದಿನ ಭಕ್ತ ಸಮೂಹ

ಮಧ್ವರ ವಿಚಾರಧಾರೆಗೆ ಮನಸೋತು. ಅವರಿಗೆ ಆಚಾರ್ಯ ಪಟ್ಟ ಕಟ್ಟಿದರು. ಶ್ರೀ ಶಂಕರ, ಶ್ರೀ ರಾಮಾನುಜರಂತೆ ಆನಂದ ತೀರ್ಥ. ಪೂರ್ಣಪ್ರಜ್ಞನಾಮಾಂಕಿತ ಮಧ್ವರು ಹದಿಹರೆಯ ದಲ್ಲಿಯೇ ಆಚಾರ್ಯ ಶ್ರೀ ಮಧ್ವರೆನಿಸಿ ಲೋಕ ವಿಖ್ಯಾತ ರಾದರು.

ಹೀಗೆ ಆಚಾರ್ಯಪಟ್ಟವೇರಿದ ಶ್ರೀ ಮಧ್ವರಿಗೆ ಬದರಿಯ ಆಕರ್ಷಣೆ ಬಹಳ. ತಾವು ಬರೆದ ಗೀತಾಭಾಷ್ಯವನ್ನು ಶ್ರೀ ವೇದವ್ಯಾಸರಿಗೆ ಸಮರ್ಪಿಸಬೇಕು. ಅದು ಅವರಿಗೆ ಸಮ್ಮತಿಯಾಗಬೇಕು. ಆಗಷ್ಟೆ ತಮ್ಮ ಭಾಷ್ಯಕ್ಕೆ ಮೌಲ್ಯ ಎಂಬ ವಿನಯಶೀಲತೆ ಆಚಾರ್ಯರದು. ಹೀಗಾಗಿ ಅವರ ಬದರಿ ಯಾತ್ರೆ. ಅಂದಿನ ದಿಗನಳಲ್ಲಿ 'ಬದರಿಯಾತ್ರೆ' ಸಾಮಾನ್ಯ ಸಂಗತಿಯಲ್ಲ ಇಂದಿನ ಕಾಲದ ರಸ್ತೆಗಳಾಗಲಿ, ವಾಹನ ಸೌಕರ್ಯವಾಗಲಿ ಇಲ್ಲದ ಆ ಕಾಲದಲ್ಲಿ ಹರಿದ್ವಾರ, ಹೃಷಿ ಕೇಶಗಳ ಮಾರ್ಗವಾಗಿ ಆಚಾರ್ಯರ ಪಯಣ, ಕೊರೆಯುವ ಚಳಿಯಲ್ಲಿ ಗಂಗೆಯ ಸ್ನಾನ, ದುರ್ಗಮವಾದ ಬೆಟ್ಟ ಗುಡ್ಡಗಳು, ಕಾಡು - ಕಣಿವೆಗಳ ಮಾರ್ಗದಲ್ಲಿ ಆಚಾರ್ಯರು ಕೇವಲ ಬೆರಳೆಣಿಕೆಯ ಶಿಷ್ಯ ಸಮೂಹದೊಂದಿಗೆ ಬದರಿನಾರಾಯಣ ದರ್ಶನಕ್ಕೆ ಹೊರಟರು. ಕೇವಲ ಬದರಿನಾರಾಯಣನ ದರ್ಶನದಿಂದ ತೃಪ್ತರಾಗದ ಆಚಾರ್ಯರು, ಶಿಷ್ಯರನ್ನು ಅಲ್ಲಿಯೇ ಬಿಟ್ಟು ಮೂಲ ವ್ಯಾಸ ಬದರಿಯತ್ತ ಹೆಜ್ಜೆ ಹಾಕತೊಡಗಿದರು. ಮಾರ್ಗ ಮಧ್ಯದಲ್ಲಿ 'ಮಾನ' ಎಂಬ ಜಾಗದಲ್ಲಿ ಸರಸ್ವತಿ ನದಿಯ ಉಗಮ ಸ್ಥಾನಕ್ಕೆ ಭೇಟಿ. ಅಲ್ಲಿಯೇ ಶ್ರೀ ವೇದವ್ಯಾಸರು ಗುಹೆಯೊಂದರಲ್ಲಿ ಕುಳಿತು ಗಣಪತಿಗೆ ಉಕ್ತಲೇಖನ ನೀಡಿ ತಮ್ಮ ಭಾರತವನ್ನು ಬರೆಸಿದ್ದು. ಆ ಸ್ಥಳದಿಂದ ನರ - ನಾರಾ ಯಣ ಪರ್ವತಗಳನ್ನು ವೀಕ್ಷಿಸಿ ಮುಂದೆ ಉತ್ರ ಬದರಿ ಅಥವಾ ವ್ಯಾಸ ಶಿಷ್ಯರು ಅಪೂರ್ವ ಸ್ವಾಗತ ಬಯಸಿ ಗುರುಗಳೆಡೆಗೆ ಶ್ರೀ ಮಧ್ವರನ್ನು ಕರೆದೊಯ್ದರು. ಅಲ್ಲಿಗೆ ಬಂದ ಆಚಾರ್ಯರು ಶಿರ ಸಾಷ್ಟಾಂಗ ನಮಸ್ಕರಿಸಿ ತಮ್ಮ ಗೀತಾ ಭಾಷ್ಯವನ್ನು ಅವರಿಗೆ ಸಮರ್ಪಿಸಿದರು. ಆದರಿಂದ ಸಂತುಷ್ಟಗೊಂಡ ಶ್ರೀ ವೇದವ್ಯಾಸರು ಕಲಿಯುಗದ ಮಧ್ವರು ತ್ರೇತಾಯುಗದ ಹನುಮ, ದ್ವಾಪರದ ಭೀಮಸೇನರ ಅವತಾರ ವೆಂಬುದನ್ನು ಮನಗಂಡು ಅವರಿಗೆ ತಮ್ಮ ಬ್ರಹ್ಮ ಸೂತ್ರಾದಿ ಶಾಸ್ತ್ರಗಳ ಉಪ ದೇಶ ಮಾಡಿದರು. ತ್ರೇತಾಯುಗದಲ್ಲಿ ಶ್ರೀ ರಾಮ ಭಕ್ತರಾಗಿ ದಾಸ್ಯಭಾವನೆಯಿಂದ ನಾರಾಯಣನ ಸೇವೆ ಮಾಡಿದರೆ, ದ್ವಾಪರದಲ್ಲಿ ಭೀಮ ಸೇನನ ಅವತಾರದಲ್ಲಿ ಶ್ರೀ ಕೃಷ್ಣನ ಕೈಂಕರ್ಯ ಮಾಡಿ ಸುಯೋಧನನ ಸಂಹಾರಕ್ಕೆ ಸಹಾಯಕ ರಾಗಿ ಕ್ಷತ್ರಿಯ ಧರ್ಮಾನುಷ್ಠಾಪನೆ ಮಾಡುತ್ತಾರೆ. ಅವರ ಮೂರನೆಯ ಅವತಾರವೇ ಮಧ್ವಾಚಾರ್ಯ ನಾಮಾಂಕಿತ ಯತಿಪುರುಷನದು. ಈ ಅವತಾರದಲ್ಲಿ ಬ್ರಾಹ್ಮಣ್ಯ ಧರ್ಮ ಮೆರೆದ ಆಚಾರ್ಯರು ಶ್ರೀ ವೇದವ್ಯಾಸರ ಗ್ರಂಥಗಳಿಗೆ ಸುಭಾಷ್ಯವನು ಬರೆಯುತ್ತಾರೆ. ಆಚಾರ್ಯರು ಸ್ವತಃ ಶ್ರೀ ವೇದವ್ಯಾಸರ ಬಳಿ ಅಧ್ಯಯನ ಮಾಡಿದ ಕಾರಣ ಅವು ಪ್ರಮಾಣಬದ್ಧ. ಮೂಲತತ್ತ್ವಕ್ಕೆ ಅನುಗುಣ. ಆಚಾರ್ಯರ ಗೀತಾಭಾಷ್ಯವನ್ನು ಮೆಚ್ಚಿದ ವೇದವ್ಯಾಸ, ನಾರಾಯಣರ ಅನುಮತಿ ಆಚಾರ್ಯರಿಗೆ ಬ್ರಹ್ಮಸೂತ್ರಗಳಿಗೆ ಭಾಷ್ಯ ಬರೆಯಲು ಪ್ರೇರಣೆ. ಹೀಗಾಗಿ ಮೂಲ ಬದರಿಯಿಂದ ವಿಶಾಲ ಬದರಿಗೆ ಮರಳಿ ಬಂದ ಆಚಾರ್ಯರು, ಅಲ್ಲಿ ಮಾಡಿದ ಮೊದಲ ಕೆಲಸ ಬ್ರಹ್ಮಸೂತ್ರಗಳಿಗೆ ಭಾಷ್ಯ ರಚನೆ. ಅವರ ಕಾರ್ಯಕ್ಷೇತ್ರ ಬದರಿಯ ಅನಂತ ಮಠ; ಅಲ್ಲಿಗೆ ಬಂದಿದ್ದ ಶಿಷ್ಯರಲ್ಲಿ ಪ್ರಮುಖರು ಶ್ರೀ ಸತ್ಯತೀರ್ಥರೆಂಬ ಯತಿಗಳು. ಆಚಾರ್ಯರೊಂದಿಗೆ ಅಚ್ಯುತಪ್ರಜ್ಞರಲ್ಲಿ ಶಿಷ್ಯತ್ವ. ಶಿಷ್ಯರಲ್ಲಿ ಪ್ರಮುಖರು ಶ್ರೀ ಸತ್ಯ ತೀರ್ಥರೆಂಬ ಯತಿಗಳು. ಆಚಾರ್ಯರೊಂದಿಗೆ ಅಚ್ಯುತಪ್ರಜ್ಞ ರಲ್ಲಿ ಶಿಷ್ಯತ್ವ. ವಹಿಸಿ ವೇದಾಧ್ಯಯನ ಮಾಡಿದ ಸಹಪಾಠಿಗಳು. ಬದರಿವೃಕ್ಷದ ತಾಣದಲ್ಲಿ ಅನಂತನನ್ನು ನೋಡುತ್ತಾ ಅನಂತ ವನ್ನು ಚಿಂತಿಸುತ್ತಾ ಭಾಷ್ಯ ಬರೆದ ಶ್ರೇಯಸ್ಸು ಶ್ರೀ ಮಧ್ವಾ ಚಾರ್ಯರು.

ಬದರಿಯಿಂದಲೆ ಆರಂಭವಾಯಿತ್ತು. ಮಧ್ವಯತಿಗಳ ದಿಗ್ವಿಜಯ ಯಾತ್ರೆ. ತಾವು ಪ್ರತಿಪಾದಿಸಿದ ತತ್ತ್ವವಾದವನ್ನು ಪ್ರವಚನಗಳ ಮೂಲಕ ವಿಶದೀಕರಿಸುತ್ತ ಉಡುಪಿಗೆ ಹಿಂದಿರುಗಿ ಬರುತ್ತಿದ್ದಾಗ ಮಾರ್ಗ ಮಧ್ಯದಲ್ಲಿ ಅನೇಕ ವಿದ್ವಾಂಸರು ಅವರ ತರ್ಕಕ್ಕೆ ಮನಸೋತು ಅವರ ಶಿಷ್ಯರಾಗಿ ಹಿಂಬಾಲಿಸುತ್ತಾರೆ. ದಿನೇ ದಿನೇ ಆಚಾರ್ಯರ ಕೀರ್ತಿ ಉತ್ತರ - ಮಧ್ಯ ಭಾರತ ವನ್ನು ಮುಟ್ಟುತ್ತದೆ. ಗೋದಾವರಿ ತೀರದ ಕ್ಷೇತ್ರದಲ್ಲಿ ನಡೆಯು ತ್ತಿದ್ದ ವಿದ್ವತ್ಸಭೆಯ ಮುಖ್ಯಸ್ಥರಾದ ಶೋಭನಭಟ್ಟರೆಂಬ ವೇದ ವಿದ್ವಾಂಸರ ಆಹ್ವಾನದ ಮೇರೆಗೆ ಆಚಾರ್ಯರು ಅಲ್ಲಿ ಭಾಗ ವಹಿಸುತ್ತಾರೆ. ಶೋಭನಭಟ್ಟರೇ ಸ್ವತಃ ದಾರ್ಶನಿಕರು. ವೇದ ವಿದ್ವಾಂಸರು. ಆ ಸಭೆಯ ಇತರ ವಿದ್ವಾಂಸರೂ ಅಷ್ಟೆ. ಅದು ವರೆವಿಗೆ ರೂಢಿಯಲ್ಲಿದ್ದ ಸಮಸ್ತ ವೇದಾಂತ ತತ್ತ್ವಗಳ ಪಾರಂಗ ತರು. ಭಾರತಿ, ವಿಜಯರಿಂದ ಮೊದಲುಗೊಂಡು ಶಂಕರ, ರಾಮಾನುಜರ ತತ್ತ್ವಗಳಲ್ಲಿ ಅಚಲನಿಷ್ಠೆಯುಳ್ಳವರು. ಚಾರ್ವಾಕ, ಬೌದ್ಧ, ಕಣಾದ, ತಾರ್ಕಿಕ, ಕಪಿಲ ಇವರ ವಿಚಾರ ಧಾರೆಯನ್ನು ಅರಗಿಸಿಕೊಂಡವರು. ಸಭೆಯಲ್ಲಿ ಆಚಾರ್ಯರು ತಮ್ಮ ವಾದವನ್ನು ಮಂಡಿಸಿದಾಗ, ಆ ವಿದ್ವಾಂಸರುಗಳಿಂದ ಪ್ರಶ್ನೆಗಳ ಸುರಿಮಳೆ. ಆ ಪ್ರಶ್ನೆ ಮಾಲಿಕೆಗಳನ್ನು ತಮ್ಮ ತರ್ಕ ದಿಂದ, ವಾದದಿಂದ ಎದುರಿಸಿ, ದ್ವೈತ ವಾದದ ಶ್ರೇಷ್ಠತೆಯನ್ನು ಮೆರೆಸಿದ ಶ್ರೇಯಸ್ಸು ಆಚಾರ್ಯರದು. ಆ ಮತಗಳಲ್ಲಿನ ವಿರೋಧಾಭಾಸಗಳನ್ನು ಎತ್ತಿ ಹಿಡಿದು, ತಮ್ಮ ಮತ ಯಾವ ರೀತಿ ಪ್ರಕೃತಿ ನಿಯಮಕ್ಕೆ ಅನುಗುಣ ಎಂದು ಮನವರಿಕೆ ಮಾಡಿಕೊಟ್ಟರು. ವಾದದಲ್ಲಿ ನಿರುತ್ತರರಾದ ಶೋಭನಭಟ್ಟರು, ಆಚಾರ್ಯರ ಪಾಂಡಿತ್ಯವನ್ನು, ತರ್ಕವನ್ನು ಒಪ್ಪಿಕೊಂಡು ಮಧ್ವ ಮತದ ಪ್ರಪ್ರಥಮ ಹರಿಕಾರರಾಗುತ್ತಾರೆ ಆಚಾರ್ಯರು ಬಿಡುತ್ತದೆ. ಆಚಾರ್ಯರ ಹೇಳುವುದು, ಅವರ ವಿವರಣೆ ನೀಡುವುದು ಪ್ರವಚನಗಳ ಪದ್ಧತಿಯಾಗಿ ಟೀಕೆಗಳನ್ನು ತಾಳೆ ಗರಿಗಳ ಮೇಲೆ ಮೂಡಿಸಿದ ಸೌಭಾಗ್ಯ ಸತ್ಯತೀರ್ಥರ ದ್ದಾಗುತ್ತದೆ.

ಉಡುಪಿಗೆ ಬಂದ ಆಚಾರ್ಯರಿಗೆ ಪಡುವಣ ಕಡಲಿ ನಲ್ಲಿ ದೊರಕಿದ ಮೂರ್ತಿ ಬಾಲಕೃಷ್ಣ. ಚಂದನದ ಗಡ್ಡೆಯಲ್ಲಿ

ಹುದುಗಿದ್ದ ಈ ಮೂರ್ತಿ ದ್ವಾರಕೆಯಿಂದ ಬಂದಿದೆಯೆಂಬ ನಂಬಿಕೆ ಭಕ್ತರದು. ಈ ಬಾಲಕೃಷ್ಣನನ್ನು ಆಚಾರ್ಯರು ಉಡುಪಿಯ ಅನಂತೇಶ್ವರ ದೇಗುಲದ ಪಕ್ಕದಲ್ಲಿ ಪ್ರತಿಷ್ಠಾಪಿಸುತ್ತಾರೆ. ಪಶ್ಚಿಮಾಭಿಮುಖವಾಗಿರುವ ಈ ಮೂರ್ತಿಯೇ ಇಂದಿಗೂ ಉಡುಪಿಯಲ್ಲಿ ಪೂಜೆಗೊಳ್ಳುತ್ತಿದೆ. ಈ ಮಂದಿರದ ನಿರ್ಮಾಣವಾದ ದಿನದಿಂದ ಹಿಡಿದು ಇಂದಿಗೂ ಅದು ಮಧ್ವ ಮತದ ಕೇಂದ್ರಸ್ಥಾನವಾಗಿದೆ. ಈ ಪರಿಸರದಲ್ಲಿಯೇ ಆಚಾರ್ಯರು ಸುಮಾರು ಮೂವತ್ತೇಳು ಗ್ರಂಥಗಳನ್ನು ರಚಿಸಿದ್ದು ಅವುಗಳಲ್ಲಿ ದ್ವಾದಶ ಸ್ತೋತ್ರ, ಮಹಾಭಾರತ ತಾತ್ಪಯವ ನಿರ್ಣಯ, ಭಾಗವತ ತಾತ್ಪರ್ಯ ನಿರ್ಣಯ, ಗೀತೆ ಮತ್ತು ಬ್ರಹ್ಮಸೂತ್ರಗಳ ಮೇಲಿನ ಭಾಷ್ಯ. ಉಪನಿಷತ್ತು ಸ್ಥಾನ ಗ್ರಂಥಗಳು ಪ್ರಮುಖವೆನಿಸಿವೆ. ಆಚಾರ್ಯರ ಗ್ರಂಥ ಗಳನ್ನು 'ಸರ್ವಮೂಲ ಗ್ರಂಥ' ಗಳೆಂದು ಗೌರವದಿಂದ ಸಂಬೋಧಿಸಲಾಗುತ್ತದೆ. ಈ ಒಂದೊಂದು ಗ್ರಂಥ ರಚನೆಗೂ ವಿಶೇಷ ಹಿನ್ನೆಲೆಯಿದ್ದು ಅವು ಮಧ್ವಮತದ ಪರಮ ಪವಿತ್ರ ಆಕರ ಗ್ರಂಥಗಳಾಗಿವೆ. ಅವರ ಪ್ರತಿಯೊಂದು ಮೆರಗು ಮಿಂಚಿದ್ದು, ಗೇಯತೆಯಲ್ಲಿ ಅಸಾಧಾರಣವಾಗಿದ್ದು ಅನೇಕ ವಿದ್ವಾಂಸರು, ಮಠಾಧಿಪತಿಗಳು ಅವುಗಳಿಗೆ ವ್ಯಾಖ್ಯಾನಗಳನ್ನು ಬರೆದಿದ್ದಾರೆ. ವ್ಯಾಖ್ಯಾನಗಳ ಸಹಾಯವಿಲ್ಲದೆ ಅವುಗಳನ್ನು ಅರ್ಥೈಸುವುದು ಬಹಳ ಕಠಿಣ. ಶಾಸ್ತ್ರಗ್ರಂಥಗಳೆನಿಸಿದ ಅವುಗಳನ್ನು ಗುರುಮುಖೇನವೇ ಅಧ್ಯಯನ ಮಾಡಬೇಕು. ಆಚಾರ್ಯರು ಬದರಿಯ ಸೆಳೆತದಿಂದ ಮತ್ತೊಮ್ಮೆ ಉತ್ತರ ಭಾರತದ ಯಾತ್ರೆಯನ್ನು ಕೈಗೊಂಡು, ಮಧ್ವಮತದ ದುಂದುಭಿಯನ್ನು ಮೊಳಗುತ್ತಾರೆ. ಈ ಬಾರಿಯ ಯಾತ್ರೆಯಲ್ಲಿ ಅವರು ಮುಸಲ್ಮಾನರ, ಚೋರರ ಸಂಪರ್ಕಕ್ಕೆ ಬಂದು, ಆ ಜನವೂ ಸಹ ಅವರ ವಿದ್ವತ್ತಿಗೆ, ಮಾನವೀಯತೆಗೆ ಮರುಳಾಗಿ, ತಮ್ಮ ಗೌರವವನ್ನು ಸೂಚಿಸಿ ಆಚಾರ್ಯರ ಪಯಣ ಸುಗಮವಾಗಲು ಸಹಕರಿಸುತ್ತಾರೆ. ವ್ಯಾಸ-ನಾರಾಯಣನ ದರ್ಶನದ ಅನಂತರ ಹಿಂದಿರುಗಿದ ಆಚಾರ್ಯರು ಶ್ರೀಕೃಷ್ಣನ ಅನವರತ ಪೂಜೆಗಾಗಿ ಅಷ್ಟಮಠಗಳನ್ನು ಸ್ಥಾಪಿಸಿ ಅದಕ್ಕೆ ಯೋಗ್ಯ. ಯತಿಗಳನ್ನು ನೇಮಿಸುತ್ತಾರೆ. ಆ ಅಷ್ಟ ಮಠಗಳ ಪೂಜಾ ಸಂಪ್ರದಾಯ ಇಂದಿಗೂ ಮುಂದುವರಿದಿದೆ. ಅವುಗಳ ಕ್ಷೇಂದ್ರ ಸ್ಥಾನಗಳು ಫಲಿಮಾರು, ಅದಮಾರು, ಕೃಷ್ಣಾಪುರ, ಪುತ್ತಿಗೆ, ಶೀರೂರು, ಸೋದೆ ಕಾಣಿಯೂರು ಮತ್ತು ಪೇಜಾವರ.

ಅವರ ಶಿಷ್ಯರಲ್ಲಿ ಪ್ರಮುಖರು ಪದ್ಮನಾಭತೀರ್ಥ, ನರಹರಿ ತೀರ್ಥ, ಮಾಧವತೀರ್ಥ ಮತ್ತು ಅಕ್ಷೋಭತೀರ್ಥರು ಇವರುಗಳೆ ಇಂದಿನ ಮಾಧ್ವ ಮಠಗಳಾದ ಉತ್ತರಾದಿ ಮಠ, ವ್ಯಾಸರಾಯ ಮಠ, ರಾಘವೇಂದ್ರ ಮಠ ಮತ್ತು ಮುಳುಬಾಗಿಲು ಶ್ರೀಪಾದರಾಜ ಮಠಗಳ ಮೂಲ ಪುರುಷರು. ಉತ್ತರೋತ್ತರ ಈ ಮಠಗಳು ಕವಲೊಡೆದು ಅನೇಕ ವಿಭಜನೆಗಳಾಗಿವೆ.

ಆಚಾರ್ಯರಿಂದ ಪ್ರಭಾವಿತರಾದವರಲ್ಲಿ ಗೌಡ ಸಾರಸ್ವತರು ಹಾಗೂ ಅಂತರಾಷ್ಟ್ರೀಯ ಹರೇ ಕೃಷ್ಣ ಪಂಥದ ಮೂಲ ಪುರುಷ ಪ್ರಭುಪಾದರೂ ಸೇರಿದ್ದಾರೆ. ಅವರೂ ಮಧ್ವ ಸಿದ್ಧಾಂತಗಳನ್ನು ಒಪ್ಪುತ್ತಾ ಶ್ರೀಕೃಷ್ಣ ಸರ್ವೋತ್ತಮ ತತ್ತ್ವವನ್ನು ಪರಿಪಾಲಿಸುತ್ತಾರೆ.

ಮಧ್ವರ ಪರಂಪರೆಯಲ್ಲಿ ವಿಶೇಷ ಸ್ಥಾನ ಪಡೆದವರಲ್ಲಿ ಶ್ರೀ ಶ್ರೀ ಪಾದರಾಜರು, ಶ್ರೀ ವ್ಯಾಸರಾಜರು, ಶ್ರೀ ವಾದಿರಾಜ ತೀರ್ಥರು. ಶ್ರೀ ಜಯತೀರ್ಥರು, ಶ್ರೀರಾಘವೇಂದ್ರ ತೀರ್ಥರು ಪ್ರಮುಖರು. ಈ ಯತಿಗಳು ಕೇವಲ ವ್ಯಾಸ ಕೂಟಸ್ಥರಲ್ಲ. ಗೃಹಸ್ಥರನ್ನು ದಾಸರಾಗಲು ಪ್ರೇರಣೆ ನೀಡಿದವರು. ಕರ್ನಾಟಕ ಸಂಗೀತ ಪಿತಾಮಹ ಶ್ರೀ ಪುರಂದರದಾಸರು, ಶ್ರೀ ಕನಕ ದಾಸರು, ಶ್ರೀವಿಜಯದಾಸರು, ಶ್ರೀಜಗನ್ನಾಥದಾಸರು ಆಚಾರ್ಯ ಶ್ರೀಮಧ್ವರ ತತ್ತ್ವಗಳನ್ನು ಜನಸಾಮಾನ್ಯರ ಹತ್ತಿರ ತಂದವರು.

ಶ್ರೀ ಮಧ್ವಾಚಾರ್ಯರ ಜೀವನ ಚರಿತ್ರೆಯನ್ನು, ಅವರ ಸಾಕ್ಷಾತ್ ಶಿಷ್ಯರಾಗಿದ್ದ ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರ ಪುತ್ರ ಶ್ರೀ ನಾರಾಯಣ ಪಂಡಿತಾಚಾರ್ಯರು ಸಂಸ್ಕೃತ ಕಾವ್ಯ ರೂಪದಲ್ಲಿ ಬರೆದಿದ್ದು 'ಸುಮಧ್ವವಿಜಯ' ಎಂದು ಹೆಸರಿಸಿದ್ದಾರೆ. ಅದೊಂದು ಅಧಿಕೃತ ಚಾರಿತ್ರಿಕ ಕೃತಿಯಾಗಿದ್ದು ಆ ಗುರು ಚರಿತ್ರೆಯ ಪಠನ ಮಂಗಳಕರವಾಗಿದೆ. ವಾಯುದೇವರ ಅವತಾರವೆಂದೇ ಪರಿಗಣಿಸಲಾಗಿರುವ ಶ್ರೀ ಮಧ್ವಾಚಾರ್ಯರು ತಾವು ಹನುಮ-ಭೀಮರು ಅನಂತರ ಬಂದವರೆಂದು ತಮ್ಮ ಅಸಾಧಾರಣ ಭೀಮ ಬಲದ ಕಾರ್ಯಗಳಿಂದ ನಿರೂಪಿಸಿದ್ದಾರೆ. ಅವರು ಈ ಜಗತ್ತಿನ ಜಂಜಾಟದಿಂದ ದೂರ ಸರಿಯಲು ಸೂಕ್ಷ್ಮ ರೂಪಧರಿಸಿ ಉಡುಪಿಯಿಂದ ಬದರಿಗೆ ತೆರಳಿದ ಘಟನೆ ಇದನ್ನು ಸಮರ್ಥಿಸುತ್ತದೆ.

ಆಚಾರ್ಯರ ಉತ್ತುಂಗ ವ್ಯಕ್ತಿತ್ವಕ್ಕೆ ದರ್ಪಣವೆಂಬಂತೆ 23 ಅಡಿ ಎತ್ತರದ ಅವರ ಶಿಲಾಮೂರ್ತಿಯನ್ನು 8 ಪಾಣಿ ಪೀಠದ ಮೇಲೆ 40 ಅಡಿ ಎತ್ತರದ ಕಾಂಕ್ರೀಟಿನ ಹದರದ ಮೇಲೆ ಕುಂಜಾರುಗಿರಿಯಲ್ಲಿ ಪ್ರತಿಷ್ಠಾಪಿಸಲಾಗಿದೆ. ಭವ್ಯ ಮೂರ್ತಿಗೆ ದಿವ್ಯ ಸ್ಮಾರಕ ರೂಪಿಸಿದ ಕೀರ್ತಿ ಉಡುಪಿಯ ಶ್ರೀ ಫಲಿಮಾರು ಮಠದ ಶ್ರೀ ವಿದ್ಯಾಧೀಶತೀರ್ಥರದಾಗಿದೆ.

ಆಚಾರ್ಯರು ಉಡುಪಿಯ ಅನಂತೇಶ್ವರ ದೇಗುಲದಿಂದ ತಮ್ಮ ಎಂಬತ್ತನೆಯ ವಯಸ್ಸಿನಲ್ಲಿ - ಅಂದರೆ ಮಾಘ ಶುದ್ಧ ನವಮಿ, ಕ್ರಿ.ಶ. 1280 ಬದರಿಯೆಡೆಗೆ ಸೂಕ್ಷ್ಮರೂಪಿ ನಿಂದ ತೆರಳುತ್ತಾರೆ. ಆ ದಿನವನ್ನು 'ಮಧ್ವನವಮಿ'ಯಂದು ಆಚರಿಸಲಾಗುತ್ತಿದೆ. ಸೂಕ್ಷ್ಮ ರೂಪದಲ್ಲಿ ಅದೃಶ್ಯರಾದ ಕಾರಣ, ಅವರ ಹೆಸರಿನಲ್ಲಿ ಯಾವುದೇ ಬೃಂದಾವನ ಇರುವುದಿಲ್ಲ. ಅವರು ಅದೃಶ್ಯರಾದ ಸ್ಥಳವನ್ನು ಅನಂತೇಶ್ವರ ದೇಗುಲದಲ್ಲಿ ಗುರುತು ಮಾಡಿರುತ್ತಾರೆ.

ಆಚಾರ್ಯ ಶ್ರೀ ಮಧ್ವರನ್ನು ಶ್ರೀ ಶ್ರೀ ಪಾದರಾಜ ಯತಿಗಳು ತಮ್ಮ 'ಮಧ್ವಸ್ತುತಿ' ಯಲ್ಲಿ ಹೀಗೆ ವರ್ಣಿಸುತ್ತಾರೆ.

**ಜಯ ಜಯ ಜಗತ್ರಾಣ, ಜಗದೊಳಗೆ ಸುತ್ರಾಣ**

**ನಿಖಿಳ ಗುಣ ಸದ್ಧಾಮ, ಮಧ್ವನಾಮ**





(ತಿರುಮಲೆ ತಿರುಪತಿ ದೇವಸ್ಥಾನವು ಪ್ರಚುರಿಸಿದ "ನಿತ್ಯಕಲ್ಯಾಣಪುರಂ ಶ್ರೀನಿವಾಸ ಮಂಗಾಪುರಂ" 2013 (ಜೂಲಕಂಟಿ ಬಾಲಸುಬ್ರಹ್ಮಣ್ಯಂ) ಗ್ರಂಥದ ಆಧಾರವಾಗಿ ಈ ವ್ಯಾಸವನ್ನು ಪ್ರಚುರಿಸಲಾಗಿದೆ. )

# ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿ ಶ್ರೀನಿವಾಸ ಮಂಗಾಪುರಂ

**- ಅನುವಾದ : ಶ್ರೀಮತಿ. ಭಾರತಿ ರಘುನಾಥ್**

ತಿರುಪತಿಯಿಂದ ಪಶ್ಚಿಮಕ್ಕೆ 10 ಕಿ.ಮೀ. ದೂರ ದಲ್ಲಿರುವ ಮದನಪಲ್ಲಿ ರಾಷ್ಟ್ರೀಯ ಹೆದ್ದಾರಿಗೆ ಆತುಕೊಂಡಿರುವ ಈ ಕುಗ್ರಾಮ ಒಂದು ಕಾಲದಲ್ಲಿ ತುಂಬ ಪ್ರಕಾಶಮಾನ ವಾಗಿತ್ತು.'ಸಿದ್ಧಕುಟಿ'ಎನ್ನುವ ಶ್ರೀನಿವಾಸಪುರ ಗ್ರಾಮ, ಅಲ ಮೇಲುಮಂಗಾಪುರ ಎನ್ನುವ ಪ್ರತ್ಯೇಕ ಹೆಸರಿಂದ ಕರೆಯಲ್ಪಟ್ಟಿದೆ.ಇದು 'ಕೊಟ್ಟಾಲಸ್ಥಳ' ವೆಂಬ ಮಂಡಲಕ್ಕೆ ಸೇರಿ ದುದು.ವೈಕುಂಠ ವಲನಾಡು (ಚಂದ್ರಗಿರಿ) ತಾಲೂಕು, ತಿರುವೇಲಕುಟ್ಟಂ (ತಿರುಮಲ ತಿರುಪತಿ) ಜಿಲ್ಲೆ ಕ್ರಿ.ಶ. 19 ನೇ ಶತಮಾನಕ್ಕೆ ಹೊಂದಿದ ತರಿಗೊಂಡ ವೆಂಗಮಾಂಬರ ದಾನ ಶಾಸನದಲ್ಲಿ ಸಸ್ಯ ಶಾಮಲವಾದ ಅಡವಿಗೆ ಆತುಕೊಂಡಿರುವ 'ನಾಗಪಟ್ಲ' ಇದಕ್ಕೆ ಕೇಂದ್ರ ಬಿಂದುವಾಗಿತ್ತು. ಸ್ವರ್ಣಮುಖರಿ. ನದಿಗೆ ಉಪನದಿಯಾದ ಕಲ್ಯಾಣಿ (ವಿಕಲ್ಯ) ತೀರದಲ್ಲಿ ಈ ಗ್ರಾಮವಿದೆ.

## ಸ್ಥಳ ಪುರಾಣ

ಶ್ರೀನಿವಾಸಮಂಗಾಪುರದ ಪರಿಸರ ಪ್ರಾಂತ್ಯದಲ್ಲಿ ಸುವರ್ಣಮುಖರಿ ನದಿ ತಟದಲ್ಲಿ ಒಂದು ಚೊಕ್ಕವಾದ ಆಶ್ರಮ ವನ್ನು ನಿರ್ಮಿಸಿಕೊಂಡಿದ್ದಾರೆ ಅಗಸ್ತ್ಯ ಮಹರ್ಷಿ. ಈ ಸಮಯ ದಲ್ಲಿ ನೂತನ ವಧುವರರಾದ ಶ್ರೀ ಪದ್ಮಾವತಿ ಶ್ರೀನಿವಾಸರು ವಿವಾಹ ವಸ್ತ್ರವನ್ನುಟ್ಟುಕೊಂಡೇ ಆದಿವರಾಹ ಕ್ಷೇತ್ರಾಕ್ಕೆ ಹೋಗುತ್ತಾ ದಾರಿಯಲ್ಲಿ ಅಗಸ್ತ್ಯರ ಆಶ್ರಮಕ್ಕೆ ಬಂದಿದ್ದಾರೆ. ಅಲ್ಲಿದ್ದ ಅಗಸ್ತ್ಯ ಮುನಿ ಅರಿಶಿನ ಬಟ್ಟೆಗಳನ್ನುಟ್ಟುಕೊಂಡ ಆ ವಧುವರರನ್ನು ಆಶೀರ್ವಾದಿಸಿ ಅವರು ಈ ವಸ್ತ್ರಗಳೊಂದಿಗೆ ಬೆಟ್ಟವೇರುವುದು ನಿಷೇಧವೆಂದೂ, ಆರು ತಿಂಗಳು ಗಳವರೆಗೆ ಇಲ್ಲಿಯೇ ಇರಬೇಕೆಂದು ಆತ್ಮೀಯವಾಗಿ ಹೇಳಿದ್ದಾನೆ. ಅದಕ್ಕೆ ಶ್ರೀನಿವಾಸನು ಅಂಗೀಕರಿಸಿದ್ದಾನೆ.

ಮನೋಜ್ಞವಾದ ಈ ವಾತಾವರಣಕ್ಕೆ ಶ್ರೀನಿವಾಸ ಮಂಗಾಪುರ ಎನ್ನುವುದು ಇಟ್ಟ ಹೆಸರು.ಇಲ್ಲಿಂದ ಶ್ರೀವಾರಿಮೆಟ್ಟು ಮಾರ್ಗವಾಗಿ ತಿರುಮಲೆಯನ್ನು ಸೇರುವುದಕ್ಕೆ ತುಂಬ ಹತ್ತಿರವಾದ ದಾರಿ. ಶೇಷಾಚಲ ಬೆಟ್ಟದ ಅಂದ ಚಂದಗಳನ್ನು ಸವಿಯುತ್ತಾ ಆರು ತಿಂಗಳುಗಳು ಕಳೆದ ಸ್ವಾಮಿ ಅಗಸ್ತ್ಯ ಮಹಾಮುನಿಯ ಅನುಮತಿ ಪಡೆದು ಮಡದಿ ಸಮೇತ ಶ್ರೀವಾರಿ ಮೆಟ್ಟ ಮಾರ್ಗವಾಗಿ ಪಯಣಿಸಿ ತಿರುಮಲೆಯನ್ನು ತಲುಪಿ ದ್ದಾನೆ. ಹೀಗೆ ಸ್ವಾಮಿ ಮತ್ತು ಅಮ್ಮನ ಪಾದ ಸೋಕಿದ ಈ ಶ್ರೀವಾರಿಮೆಟ್ಟ ಎಷ್ಟೋ ಪವಿತ್ರವಾದುದು. ನಂತರದ ಕಾಲ ದಲ್ಲಿ ಚಂದ್ರಗಿರಿ ರಾಜ್ಯವನ್ನು ಆಳಿದ ಎಷ್ಟೋ ರಾಜರುಗಳು ಚಂದ್ರಗಿರಿ ಕೋಟೆಯಿಂದ ಶ್ರೀನಿವಾಸನ ದೇವಾಲಯದವರೆಗೂ ಉಂಟಾದ ಸರಳಮಾರ್ಗವನ್ನನುಸರಿಸಿ ಸ್ವಾಮಿಯ ದರ್ಶನ ಪಡೆದು ಪುನೀತರಾಗಿದ್ದಾರೆ.

ಶ್ರೀನಿವಾಸಮಂಗಾಪುರದ ಆಲಯದಿಂದ ಉತ್ತರದಿಕ್ಕಿಗೆ 6 ಕಿ.ಮೀ. ದೂರದಲ್ಲಿರುವ ಮೆಟ್ಟಿಲಿನಿಂದ ಮೊದಲುಗೊಂಡು ತಿರುಮಲೆ ಪರ್ವತದ ಮೊದಲ ಮೆಟ್ಟಿಲವರೆಗೆ ಇರುವ ಮಾರ್ಗವನ್ನು 'ಶ್ರೀವಾರಿ ಮೆಟ್ಟು' ಅಥವಾ "ಶ್ರೀಪತಿಮೆಟ್ಟು" ಎನ್ನುತ್ತಾರೆ. ಆಧ್ಯಾತ್ಮಿಕ ಉನ್ನತಿಗೆ ಮೊದಲ ಹೆಜ್ಜೆಯೇ ಈ 'ಶ್ರೀವಾರಿಮೆಟ್ಟು',ಚಂದ್ರಗಿರಿಯೆಡೆಗೆ ಇರುವ ಸೋಪಾನ ಮಾರ್ಗ ಇದಾಗಿರುವುದರಿಂದ ಇದನ್ನು 'ಚಂದ್ರಗಿರಿ ಸೋಪಾನ ಮಾರ್ಗ' ವೆಂದೂ ಸಹ ಕರೆಯುತ್ತಾರೆ.

ಸಾಕ್ಷಾತ್ ಪದ್ಮಾವತಿ - ಶ್ರೀನಿವಾಸರ ದಿವ್ಯ ಪಾದಾರವಿಂದಗಳು ಸೋಕಿದ ದಿವ್ಯ ಮಾರ್ಗವೇ, ನಡೆದು ಹೋದ ಪವಿತ್ರಮಾರ್ಗವೇ ಈ 'ಶ್ರೀವಾರಿಮೆಟ್ಟು'. ವರಾಹ ಸ್ವಾಮಿ ಸನ್ನಿಧಿಯಲ್ಲಿ ತೋಂಡಮಾನ ಚಕ್ರ ವರ್ತಿ ನಿರ್ಮಿಸಿದ ಆನಂದನಿಲಯ ವಿಮಾನ ಭವನದಲ್ಲಿ ಪದ್ಮಾವತಿ ಶ್ರೀನಿವಾಸರು ಪ್ರವೇಶಿಸಿ ನಿತ್ಯಕಲ್ಯಾಣದಂಪತಿಗಳಾಗಿ ಪ್ರಸಿದ್ಧಿ ಪಡೆದಿದ್ದಾರೆ. ಪದ್ಮಾವತಿ ಶ್ರೀನಿವಾಸರು ನಡೆದು ಬಂದ 'ಶ್ರೀವಾರಿ ಮೆಟ್ಟು' ಮಾರ್ಗವು ನಂತರದ ದಿನಗಳಲ್ಲಿ ಅದೆಷ್ಟೋ ರಾಜರುಗಳಿಗೆ, ಯಾತ್ರಿಕರಿಗೆ ವೇಂಕಟಾಚಲ ಯಾತ್ರೆಗೆ ಹೋಗುವ ಪ್ರಧಾನರಾಜ ಮಾರ್ಗವಾಗಿ ಪರಿಣಮಿಸಿದೆ. ನಾರಾಯಣವನ ಪ್ರಭುಗಳು, ಆಕಾಶ ರಾಜ, ತೋಂಡಮಾನ ಮೊದಲಾದ ವಿಜಯನಗರ ಪ್ರಭುಗಳೆಲ್ಲ 'ಶ್ರೀವಾರಿಮೆಟ್ಟು' ಮಾರ್ಗವನ್ನು ತಮ್ಮ ಯಾತ್ರಾ ಮಾರ್ಗವನ್ನಾಗಿ ಮಾಡಿಕೊಂಡಿದ್ದಾರೆ. ವಿಜಯನಗರ ಪ್ರಭುಗಳು ಚಂದ್ರಗಿರಿ ಕೋಟೆ ಯಲ್ಲಿ ಬಿಡಾರ ಹೂಡಿದ ವೇಳೆಯಲ್ಲಿ ತಿರುಮಲೆಯಲ್ಲಿ ನೈವೇದ್ಯ ವಾಗುವಾಗ ಹೊರ ಹೊಮ್ಮುವ ಘಂಟಾನಾದವನ್ನು ಅಲೆಅಲೆಯಾಗಿ ಕೇಳಿಸಿಕೊಂಡ ನಂತರವೇ ಊಟ ಮಾಡುತ್ತಿದ್ದರು.

ಕ್ರಿ.ಶ. 1433 ರ ಹೊತ್ತಿಗೆ ಈ ಗ್ರಾಮ, ಈ ಗುಡಿ ಎಷ್ಟೋ ಉನ್ನತ ಸ್ಥಿತಿಯಲ್ಲಿತ್ತೆಂದು 22-11-1433 ರ ಶಾಸನದಲ್ಲಿದೆ. ಆಗಿನ ಕಾಲದಲ್ಲಿ ಸಿದ್ದಕುಟ್ಟೆ,ಸಿದ್ಧಕೂಟ, ಶ್ರೀನಿವಾಸಪುರ, ಶ್ರೀನಿವಾಸಮಂಗಾ ಪುರವೆಂದು ಕರೆಯಲ್ಪಟ್ಟ ಈ ಗ್ರಾಮ ನಂತರದ ವರ್ಷಗಳಲ್ಲಿ ನಶಿಸಿ ಹೋಗಿದೆ. ಸುಮಾರು ನೂರು ವರ್ಷಗಳ ನಂತರ ಮರಳಿ, ದಿನೇದಿನೇ ಅಭಿವೃದ್ಧಿ ಗೊಂಡು ಈ ಗ್ರಾಮವನ್ನು ಕ್ರಿ.ಶ. 1540 ರಲ್ಲಿ ವಿಜಯನಗರ ಸಾಮ್ರಾಜ್ಯ ಚಕ್ರವರ್ತಿ ಅಚ್ಯುತರಾಯ ಈ ಶ್ರೀನಿವಾಸಪುರವನ್ನು "ಸರ್ವಮಾನ್ಯ ಅಗ್ರಹಾರವಾಗಿ" ತಾಳ್ಳಪಾಕ ವಂಶಜರಿಗೆ ಕೊಟ್ಟಿದ್ದಾರೆ. ಆ ಸಮಯದಲ್ಲಿ ತಾಳ್ಳಪಾಕ ಅನ್ನಮಾಚಾರ್ಯರ ಮೊಮ್ಮಗ ಚಿನ್ನ ತಿರುವೇಂಗಳನಾಥನು ಶ್ರೀನಿವಾಸ ಮಂಗಾಪುರವನ್ನು ಸರ್ವೇ ಶೋಭಾನ ಮಾಯವಾಗಿ ಜೀರ್ಣೋದ್ಧಾರ ಮಾಡಿದ್ದಾನೆ.ಶಿಥಿಲಗೊಂಡ ವಿಗ್ರಹಗಳನ್ನು ತೆಗೆದು ನೂತನ ವಿಗ್ರಹಗಳನ್ನು ಪ್ರತಿಷ್ಠಾಪಿಸಿ ಶಾಸ್ತ್ರೋಕ್ತವಾಗಿ ಅರ್ಚನಾದಿಗಳನ್ನು ಉತ್ಸವಾದಿಗಳನ್ನು ನೆರವೇರಿಸು ವಂತೆ ಏರ್ಪಾಟುಗಳನ್ನು ಮಾಡಿದ್ದಾರೆ. ತಮ್ಮ ಶಿಷ್ಯರಾದ ಪದ್ಮಸಾಲಿ ಭಕ್ತರು ಗುರುದಕ್ಷಿಣೆಯಾಗಿ ಹತ್ತುಸಾವಿರ ವರಹಗಳನ್ನು ಕಾಣಿಕೆ ಯಾಗಿ, ಗುರುದಕ್ಷಿಣೆಯಾಗಿ ನೀಡಿದ್ದಾರೆ. ಚಿನ್ನನ್ನ ನೀಡಿದ ಹತ್ತುಸಾವಿರ ವರಾಹಗಳ ಜೊತೆ ತಮ್ಮ ಹತ್ತುಸಾವಿರ ವರಹ ಗಳನ್ನು ಸೇರಿಸಿ ಮೊತ್ತ ಇಪ್ಪತ್ತುಸಾವಿರ ವರಹಗಳಿಂದ ಶ್ರೀನಿವಾಸಮಂಗಾಪುರ ದೇವಾಲಯ ವನ್ನು ಸಮೃದ್ಧಿ ಪಡಿಸಿದ್ದಾರೆ. ಇದಕ್ಕಾಗಿ "ಆಳ್ಳಗಟ್ಟು" ಎನ್ನುವ ಶಿಲಾಗಣಿ ಯನ್ನು ಖರೀದಿಸಿದ್ದಾರೆ.

ಸರ್ವ ಹಕ್ಕುಗಳಿಂದಲೂ ತಾಳ್ಳಪಾಕರವರ ಆಧೀನ ದಲ್ಲಿದ್ದ ಶ್ರೀ ಕಲ್ಯಾಣ ವೇಂಕಟೇಶ್ವರನ ಆಲಯವು ಮೊದಲಿದ್ದ ಗತ ವೈಭವವನ್ನು ಮರಳಿ ಪಡೆದುಕೊಂಡಿದೆ. ಮತ್ತೆ ನೂರುವರ್ಷದವರೆಗೆ ಶ್ರೀ ಕಲ್ಯಾಣ ವೇಂಕಟೇಶ್ವರನ ಉತ್ಸವಗಳು ವೈಭವದಿಂದ ತಿರುಮಲೆ ಸ್ವಾಮಿಗೆ ಪೋಟಿಯಾಗಿ ಆಧ್ಯಾತ್ಮಿಕ ಕೇಂದ್ರವಾಗಿ ಪ್ರಕಾಶಗೊಂಡಿದೆ. ಇನ್ನೊಂದು ಬಾರಿ ಕಲ್ಯಾಣ ವೇಂಕಟೇಶ್ವರನ ಆಲಯವು ಕಲ್ಯಾಣಿ ನದಿಯ ವಿಕೃತ ವಾದ ಹರಿತಕ್ಕುಳಗಾಗಿ ವಿಕಲಗೊಂಡು, ಶಿಥಿಲಗೊಂಡಿದೆ. ಅದೊಂದೇ ಅಲ್ಲದೇ ತುರುಕ ದಂಡನಾಯಕರ ದಾಳಿಗೊಳಗಾಗಿ ಹಲವು ವಿಗ್ರಹಗಳು ಛಿದ್ರಗೊಂಡಿವೆ.ಆದರೆ ಗರ್ಭಾಲಯದಲ್ಲಿರುವ ಸುಮಾರು 10 ಅಡಿ ಎತ್ತರವಿರುವ ಶ್ರೀ ಕಲ್ಯಾಣವೇಂಕಟೇಶ್ವರನ ಮೂಲಮೂರ್ತಿ ಮಾತ್ರ ನೂರು ವರ್ಷಗಳು ಕಳೆದರೂ ಅಂದಿನಂತೆಯೇ ವಿನೂತನವಾಗಿ ಬಹಳ ನೈಜವಾಗಿ ಗಿಡ-ಮಲ-ಬಳ್ಳಿಗಳಿಂದ ಇರುವೆಯ ಗೂಡುಗಳಿಂದ ಮುಚ್ಚಿಹೋಗಿದೆ.

ಹಾಗೂ ಹೀಗೂ 1906 ರ ಆಸುಪಾಸು ಈ ಪ್ರಾಂತ್ಯದಲ್ಲಿರುವ ಸ್ವಾಮಿ ವಿಗ್ರಹಕ್ಕೊಂದು ಚೈತನ್ಯ ಬಂದಿದೆ. ಅದಕ್ಕೆ ಕಾರಣ ತಿಳಿದು ಕೊಳ್ಳೋಣ.

ಶ್ರೀನಿವಾಸಮಂಗಾಪುರದಲ್ಲೊಂದು ದಿನ ಇದ್ದಕ್ಕಿದ್ದಂತೇ ಒಬ್ಬ ಚೋಗಮ್ಮ ಪ್ರತ್ಯಕ್ಷಳಾಗಿದ್ದಾಳೆ. ಆಕೆ ಯಾವ ಊರಿನಿಂದ ಬಂದಿದ್ದಾಳೆ. ಎಲ್ಲಿಂದ ಬಂದಿದ್ದಾಳೆಂದು ಯಾರಿಗೂ ತಿಳಿಯದು. ಯಾರ ಬಳಿಯೂ ಹೆಚ್ಚಾಗಿ ಮಾತನಾಡುವುದಿಲ್ಲ. ಒಂದು ಉನ್ಮಾದ ಸ್ಥಿತಿಯಲ್ಲಿ ಅವಧೂತ ರಂತೆ ಯೋಗಿನಿಯಂತೆ ಇರುವವಳು. ಆಕೆಯನ್ನು 'ತಾಯಮ್ಮ' ಎಂದು ಹೆಸರನ್ನು ಕೂಡ ಇಟ್ಟಿದ್ದಾರೆ. ಹುತ್ತ-ಗಿಡಮರಗಳಿಂದ ಸುತ್ತುವರೆದ ಶ್ರೀನಿವಾಸನ ಆಲಯವೇ ಆಕೆಯ ನಿವಾಸ. ಆಕೆ ಮನೆಮನೆಗೆ ಹೋಗಿ ಅಲ್ಪ-ಸ್ವಲ್ಪ ಭಿಕ್ಷೆ ತರುವವಳು. ಅಕ್ಕಿ - ಬೇಳೆಗಳನ್ನು ತರುವಳು. ಹೀಗೆ ಎಲ್ಲವನ್ನು ಶೇಖರಿಸಿ, ಗುಡಿಗೆ ತಂದು, ಮೂರುಕಲ್ಲುಗಳ ಮೇಲೆ ಒಲೆಮಾಡಿ ಮಣ್ಣಿನ ಪಾತ್ರೆಯಲ್ಲಿ ಎಲ್ಲವನ್ನು ಕಲಿಸಿ ಬೇಯಿಸುವವಳು. ಆ ನಂತರ ಮಣ್ಣಿನ ಹರವಿಯಲ್ಲಿ ಎಣ್ಣೆ ಹಾಕಿ ಬತ್ತಿ ಹಚ್ಚಿ ಗುಡಿಯಲ್ಲಿ ದೀಪ ಬೆಳಗಿಸುವವಳು. ಕಗ್ಗತ್ತಲೆಯ ಗಾಡಾಂಧಕಾರದಲ್ಲಿ ಪ್ರಣತಿಗಳನ್ನು ಬೆಳಗಿಸಿ ಆದರೆ ಬೆಳಕಿನಲ್ಲಿ ಗುಡಿಯಲ್ಲೆಲ್ಲಾ ಓಡಾಡುವಳು. ಕಾಲಿ - ಕಾಲಿಗೆ ಹಾವುಗಳು ಸುತ್ತುಮುತ್ತುವುವು. ಆದರೆ ಆಕೆ ಅವುಗಳಿಗೆ ಭಯ ಪಡಲಿಲ್ಲ. ಮೇಲಾಗಿ ಓ ನಾಗಾ! ಶೇಷ ಎಂದು ಕರೆಯುವವಳು. ಅಲ್ಲದೇ ಗುಡಿಯೊಳಗೆ ಹೋಗಿ ಸ್ವಾಮಿಯ ಪಾದಗಳ ಮೇಲೆ ಹೂಚೆಲ್ಲಿ ಮಣ್ಣ ಹಣತೆಗಳಿಂದ ದೀಪಾರಾಧನೆಯನ್ನು ಮಾಡಿ, ಬೇಯಿಸಿದ ಅನ್ನವನ್ನು ನೈವೇದ್ಯವಾಗಿ ಇಡುವವಳು. ನಂತರ ಸ್ವಲ್ಪ ತಂದು ಎಲ್ಲರಿಗೂ ಪ್ರಸಾದ ವೆಂದು ಹಂಚುವವಳು ಉಳಿದುದುದನ್ನು ತಾನೂ ತಿನ್ನುವಳು. ಹಾವುಗಳಿಗೆಲ್ಲಾ ಹಾಲನ್ನು ಎರೆದು ಲಾಲಿಸುವವಳು.ಇದೇ ಆಕೆಯ ಪ್ರತಿನಿತ್ಯದ ಕೈಂಕರ್ಯ ಹೀಗೊಂದು ದಿನ ತಾನು ಮರು ದಿನದಿಂದ ಇರುವುದಿಲ್ಲ ವೆಂದೂ, ಒಬ್ಬ ಸ್ವಾಮಿಗಳು ಶೀಘ್ರದಲ್ಲಿ ಬರಲಿರುವರೆಂದೂ ಹೇಳಿದ್ದಾಳೆ. ಆಕೆಯ ಮಾತಿನಂತೆ ಸ್ವಾಮಿಗಳು ಬಂದಿದ್ದಾರೆ.

ಕಾಂಚಿಪುರದಿಂದ ಸುಂದರರಾಜಸ್ವಾಮಿ ಬಂದಿದ್ದಾರೆ. ಅವರಿಗೆ ಪ್ರತಿನಿತ್ಯ ಸ್ವಾಮಿಯು ಕನಸಿನಲ್ಲಿ ಕಂಡು "ನನ್ನಲ್ಲಿಗೆ ಬಾ...ನಾನು ಕತ್ತಲೆಯಲ್ಲಿದ್ದೇನೆ,ಹುತ್ತದಲ್ಲಿದ್ದೇನೆ. ನೀನು ಬಂದ ನನಗೆ ಪೂಜೆ - ಸೇವೆಗಳನ್ನು ಮಾಡು" ಎನ್ನುವವನು. ಇದಕ್ಕೆ ಆತನು "ನೀನು ಯಾವ ಊರಿನಲ್ಲಿದ್ದೀಯೆಂದು ನನಗೆ ಹೇಗೆ ತಿಳಿಯುತ್ತದೆ." ಎಂದೆನಲು "ನೀನು ತಕ್ಷಣವೇ ವೇಂಕಟಾಚಲ ಯಾತ್ರೆಗೆ ಹೊರಡು. ದಾರಿಯಲ್ಲಿ ನಿನಗೆ ಸಿಗುತ್ತೇನೆ" ಎಂದಿದ್ದಾನೆ. ಮುಂಬರುವ ಆಷಾಡ ಶುದ್ಧ ಸಪ್ತಮಿಯಂದು ನನಗೆ ಪೂಜೆ ಮಾಡಲೇ ಬೇಕು ಎಂದಿದ್ದಾನೆ. ಈ ಮಾತಿಗೆ ಕಟ್ಟು ಬಿದ್ದು ಸುಂದರಯ್ಯ ಸ್ವಾಮಿಯನ್ನು ಹುಡುಕುತ್ತಾ ಹೊರಟೇ ಬಿಟ್ಟಿದ್ದಾರೆ. ಹಾಗೆ ಪ್ರಯಾಣ ಮಾಡುತ್ತಾ 15 ದಿನಕ್ಕೆ ಶ್ರೀನಿವಾಸಮಂಗಾಪುರ ಸೇರಿದ್ದಾರೆ. ಅಲ್ಲಿ ವಿಚಾರಿಸಲು ಅಲ್ಲಿದ್ದವರು 'ತಾಯಮ್ಮ'ನನ್ನು ಕುರಿತು, ಆಕೆಯ ಪೂಜಾ ವಿಧಾನವನ್ನು ಕುರಿತು ಹೇಳಿದ್ದಾರೆ. ಆತನು ಸಹಾ ತನ್ನ ಕನಸ್ಸಿನ

ಕುರಿತು ಅರುಹಲು ಎಲ್ಲರೂ ಸೇರಿಕೊಂಡು ಆಲಯವನ್ನು ಶುಭ್ರಗೊಳಿಸಿದ್ದಾರೆ.

ಅಂದು ವಿಕ್ರಮನಾಮ ಸಂವತ್ಸರ, ಆಷಾಢ ಶುದ್ಧ ಸಪ್ತಮಿ ಉತ್ತರಫಲ್ಗುಣಿ ನಕ್ಷತ್ರದಿಂದ ಕೂಡಿದ ಮಹೋನ್ನತ ಶುಭದಿನ. ಅಂದರೆ 11-7-1940 ದಿನಾಂಕದ ದಿನ. ಮರಳಿ ಒಂದು ನೂರು ವರ್ಷಗಳ ನಂತರ ಸುಂದರರಾಜ ಸ್ವಾಮಿಯವರಿಗೆ ತಮ್ಮ ಕೈಯಿಂದ ಪುನಃ ಪ್ರತಿಷ್ಠಾಪಿಸಿ ಮೊಟ್ಟಮೊದಲ ಪೂಜೆ ನಡೆಸಿದ್ದಾರೆ. 11-7-1940 ರಂದಿನಿಂದ ಪ್ರತಿವರ್ಷ ಅದೇ ತಿಥಿಯಲ್ಲಿ "ಸಾಕ್ಷಾತ್ಕಾರವೈಭವ" ಹೆಸರಿನಿಂದ ಸಡಗರದಿಂದ ಶ್ರೀನಿವಾಸಮಂಗಾಪುರದ ಶ್ರೀ ಕಲ್ಯಾಣ ವೇಂಕಟೇಶ್ವರನಿಗೆ ಒಂದು ದಿನದ ಮಟ್ಟಿಗೆ ಉತ್ಸವಗಳನ್ನು ನೆರವೇರಿಸಲಾಗುತಿತ್ತು. ತದನಂತರ ತಿ.ತಿ.ದೇವಸ್ಥಾನವು 1980 ರ ಸಂವತ್ಸರ ದಿಂದ ಪ್ರತಿವರ್ಷ ''ಸಾಕ್ಷಾತ್ಕಾರ ವೈಭವೋತ್ಸವ'' ಎಂಬ ಹೆಸರಿನಿಂದ 3 ದಿನಗಳವರೆಗೆ ವಾರ್ಷಿಕ ಉತ್ಸವಗಳನ್ನು ಜರುಗಿಸುತ್ತಾರೆ. ಬಳಿಕ ಸುಂದರರಾಜಸ್ವಾಮಿ ಅರ್ಚಕತ್ವದಲ್ಲಿ ದಿನೇದಿನೇ ಅಭಿವೃದ್ಧಿ ಹೊಂದುತ್ತಾ ದಿನಕ್ಕೊಂದು ವೈಭವದಂತೆ ವೈಭವದ ಹೊಳೆಯೇ ಹರಿದಿದೆ. ಆಮೇಲೆ ತಿ.ತಿ. ದೇವಸ್ಥಾನ 1967 ನೇ ವರ್ಷ ಏಪ್ರಿಲ್ 26 ನೇ ದಿನಾಂಕದಂದು ಸ್ವೀಕರಿಸಿದೆ.

**ಆಲಯದ ನಿರ್ಮಾಣ ಶೈಲಿ :**

ಹತ್ತು ವರ್ಷದ ನಂತರ 1980 ನೇ ವರ್ಷದಲ್ಲಿ ಮಹಾರಾಜಗೋಪುರ, ಪ್ರವೇಶದ್ವಾರ, ಸುಮಾರು 10 ಅಡಿ ಎತ್ತರದ, 5 ಅಂತಸ್ತುಗಳಿಂದ, ಅನೇಕ ಶಿಲ್ಪಗಳಿಂದ ನಿರ್ಮಿಸಲ್ಪಟ್ಟಿದೆ. ಪ್ರವೇಶದ್ವಾರವನ್ನು ದಾಟಿ ಒಳಗೆ ಹೋಗುತ್ತಲೇ ಎದುರಲ್ಲಿ ಬಲಿಪೀಠ ಧ್ವಜಸ್ತಂಭಗಳಿವೆ. ಚತುರ್ಪಾಕರಗಳಲ್ಲಿಯೇ ಎತ್ತರವಾದ ಪ್ರಾಕಾರದ ಮಧ್ಯದಲ್ಲಿರುವ ವಿಶಾಲವಾದ ಪ್ರದೇಶದಲ್ಲಿ ಸುಮಾರು ಹತ್ತು ಅಡಿ ಎತ್ತರವಾದ ಕಟ್ಟೆಯ ಅಧಿಷ್ಠಾನದ ಮೇಲೆ ಶ್ರೀ ಕಲ್ಯಾಣ ವೇಂಕಟೇಶ್ವರ ಸ್ವಾಮಿ ಪ್ರಧಾನಾಲಯವು ನಿರ್ಮಿತಗೊಂಡಿದೆ. ಆ ಆಲಯದ ಮುಖಮಂಟಪ (ಘಂಟಾಮಂಟ) ಅರ್ಧಮಂಟಪ, ಶಯನಮಂಟಪ, ಅಂತರಾಳ, ಗರ್ಭಗೃಹವೆಂಬ ಐದು ವಿಭಾಗಗಳನ್ನಾಗಿ ಇತರೆ ಮಂಟಪಗಳೊಂದಿಗೆ ನಿರ್ಮಿಸಲಾಗಿದೆ. ಆಲಯ ಪ್ರಾಂಗಣದಲ್ಲಿ ನೈರುತ್ಯಮೂಲೆಯಲ್ಲಿ ಸ್ವಾಮಿಯ ಕಲ್ಯಾಣ ಮಂಟಪದ ವಿದೆ. ಘಂಟಾಮಂಟಪದಲ್ಲಿ ಸ್ವಾಮಿಯ ಮೂಲಮೂರ್ತಿಯ ಎದುರಾಗಿ ಪಶ್ಚಿಮಾಭಿಮುಖವಾಗಿ ಗುರುಡಾಳ್ವರ್ ಸನ್ನಿಧಿಯಿದೆ. ಮುಖಮಂಟಪದ ವಾಯುವ್ಯ ಮೂಲೆಯಲ್ಲಿ ಎರಡು ದೊಡ್ಡ ಘಂಟೆಗಳನ್ನು ನೇತು ಹಾಕಲಾಗಿದೆ. ಈ ಮಂಟಪದಲ್ಲೇ ಜಯ-ವಿಜಯರ ವಿಗ್ರಹಗಳಿವೆ. ಜಯವಿಜಯರ ದ್ವಾರಗಳನ್ನು ದಾಟಿ ಒಳಗೆ ಹೋದರೆ ಅರ್ಧಮಂಟಪವಿದೆ. ಇದನ್ನು ಸ್ನಪನಮಂಡಪವೆಂದು ಕರೆಯುತ್ತಾರೆ.ಇದರಲ್ಲಿ ಸ್ವಾಮಿಯ ಆಭರಣಗಳನ್ನು ಭದ್ರಪಡಿಸಿ ಇರಿಸಲಾಗಿರುತ್ತದೆ.ಇದನ್ನು ದಾಟಿಕೊಂಡು ಮುಂದೆ ಹೋದರೆ ಶಯನ ಮಂಟಪವಿದೆ. ಇದನ್ನು ದಾಟಿದರೆ ಬರುವುದು ಅಂತರಾಳ. ಅಂತರಾಳದಲ್ಲಿ ದಕ್ಷಿಣ ಗೋಡೆಗೆ ಉತ್ತರಾಭಿಮುಖವಾಗಿ ಆಸೀನ ಭಂಗಿಯಲ್ಲಿ ಶ್ರೀ ಲಕ್ಷ್ಮಿನಾರಾಯಣರ ಶಿಲಾವಿಗ್ರಹ ವಿದೆ. ತೊಡೆಯ ಮೇಲೆ ಲಕ್ಷ್ಮಿ ಕುಳಿತಂತಿರುತ್ತದೆ. ಉತ್ತರಗೋಡೆಯ ಪಶ್ಚಿಮಕ್ಕೆ ತಲೆಯನಿಟ್ಟು, ದಕ್ಷಿಣಾಭಿಮುಖವಾಗಿ ಐದು ಹೆಡೆಯ ಆದಿಶೇಷನ ಮೇಲೆ ಪವಡಿಸಿರುವ ಶ್ರೀ ರಂಗನಾಥನ ಶಿಲಾಮೂರ್ತಿಯಿದೆ. ಈ ರೀತಿಯಾಗಿರುವ ಸ್ವಾಮಿಗೆ 1980 ಫೆಬ್ರವರಿಯಲ್ಲಿ ಬ್ರಹ್ಮೋತ್ಸವವನ್ನು, 1981 ಫೆಬ್ರವರಿ 19 ನೇ ದಿನಾಂಕದಂದು ಮೊಟ್ಟಮೊದಲ ಬಾರಿಗೆ ಕಲ್ಯಾಣೋತ್ಸವವನ್ನು ಅದ್ದೂರಿಯಾಗಿ ಜರುಗಿಸಲಾಯ್ತು ಅಂತರಾಳದಿಂದ ಕುಲಶೇಖರ ಹೊಸಿಲು ದಾಟಿ ಒಳಗಡಿಯಿಟ್ಟರೆ ಸಿಗುವುದೇ ಸ್ವಾಮಿಯ ಗರ್ಭಗೃಹ. ಇಲ್ಲಿ ಪೂರ್ವಕ್ಕೆ ಮುಖಮಾಡಿ ಮೂಲಮೂರ್ತಿ ಪ್ರತಿಷ್ಠಾಪಿಸಲ್ಪಟ್ಟಿದೆ. ಗರ್ಭಾಲಯದ ವಿಮಾನದ ಮೇಲೆ ಏಕಕಲಶ, ತ್ರಿಕಲಾಗೋಪುರ ನಿರ್ಮಿಸಲಾಗಿದೆ. ಸ್ವಾಮಿ ಚತುರ್ಭುಜನಾಗಿ ಮೇಲೆರಡು ಕೈಗಳಲ್ಲಿ ಶಂಖಚಕ್ರಗಳನ್ನು ಧರಿಸಿದ್ದಾನೆ. ಕೆಳಗಿನೆರಡು ಕೈಗಳಲ್ಲಿ ವರದಕಟಿ ಹಸ್ತದವನಾಗಿ ವಿರಾಜಿಸುತ್ತಾನೆ.

ಮುಖ್ಯವಾಗಿ ಶ್ರೀ ಸುಂದರರಾಜಸ್ವಾಮಿ ಮಧ್ವಾಚಾರ್ಯ ಸಂಪ್ರದಾಯದಲ್ಲಿಯ ತಂತ್ರಸಾರಾಗಮದ ಪ್ರಕಾರ ಪೂಜೆಗಳನ್ನು ನೆರವೇರಿಸಿದ್ದಾರೆ. ಅವರ ನಂತರ ಅಂದರೆ 2004 ರಿಂದ ಈ ಆಲಯವು ಸಂಪೂರ್ಣವಾಗಿ ವೈಖಾನಸ ಆಗಮ ಶಾಸ್ತ್ರಾನುಸಾರವಾಗಿ ಪೂಜೆಗಳನ್ನು ಜರುಗಿಸಲಾಗುತ್ತಿದೆ.


**ಉತ್ಸವ - ಸೇವೆಗಳು**

ನಿತ್ಯೋತ್ಸವದಲ್ಲಿ ಸುಪ್ರಭಾತ, ತೋಮಾಲೆ ಸೇವೆ, ಸಹಸ್ರನಾಮಾರ್ಚನೆ, ನಿತ್ಯಕಲ್ಯಾಣೋತ್ಸವ, ಆರ್ಜಿತ ಬ್ರಹ್ಮೋತ್ಸವ ಜರುಗುತ್ತದೆ. ಈ ಬ್ರಹ್ಮೋತ್ಸವದಲ್ಲಿ ಅಶ್ವವಾಹನ, ಹನುಮಂತವಾಹನ, ಗರುಡಸೇವೆ ಮಾತ್ರವೇ ಜರುಗಿಸ ಲಾಗುತ್ತದೆ. ಏಕಾಂತ ಸೇವೆಯನ್ನು ಜರುಗಿಸಲಾಗುತ್ತದೆ. ವಾರೋತ್ಸವದಲ್ಲಿ ಸ್ವರ್ಣಪುಷ್ಪಾರ್ಚನೆ, ಶತಕಲಶಾಭಿಷೇಕ, ತಿರುಪ್ಪಾವಡಸೇವ, ನೇತ್ರದರ್ಶನ, ಪೂಲಂಗಿಸೇವೆ, ಅಭಿಷೇಕ, ವಸ್ತ್ರಾಲಂಕಾರ ಸೇವೆ, ಗ್ರಾಮೋತ್ಸವ ಜರಗಿಸಲಾಗುತ್ತದೆ. ಮಾಸೋತ್ಸವದಲ್ಲಿ ಶ್ರವಣನಕ್ಷತ್ರದ ದಿನ, ಉಂಜಲ ಸೇವೆ ನೆರವೇರುತ್ತದೆ. ವಾರ್ಷಿಕೋತ್ಸವದಲ್ಲಿ ಉಗಾದಿ ಆಸ್ಥಾನ, ಶ್ರೀರಾಮನವಮಿ, ಧನುರ್ಮಾಸ ಪೂಜೆ, ಮಾಘಮಾಸದಲ್ಲಿ ಅಂದರೆ ಸೌರ ಮಾನದ ಪ್ರಕಾರ ಕುಂಭಮಾಸದಲ್ಲಿ ಶ್ರವಣಾನಕ್ಷತ್ರದಲ್ಲಿ ಕೊನೆಗೊಳ್ಳುವಂತೆ 9 ದಿನಗಳ ಮುಂಚಿತವಾಗಿ ಬ್ರಹ್ಮೋತ್ಸವಗಳು ಜರಗುತ್ತವೆ. ಪ್ರತಿವರ್ಷ ಫಾಲ್ಗುಣ ಮಾಸದಲ್ಲಿ ಶ್ರವಣನಕ್ಷತ್ರ ದಿನದಲ್ಲಿ ಪುಷ್ಪಯಾಗ ಜರಗುತ್ತದೆ. ವೈಶಾಖಮಾಸದಲ್ಲಿ ಶ್ರವಣನಕ್ಷತ್ರದಲ್ಲಿ ಕೊನೆಗೊಳ್ಳುವಂತೆ ಮೂರುದಿನ ಮುಂಚೆಯಿಂದ ವಸಂತೋತ್ಸವಗಳು ಜರಗುತ್ತವೆ. ಪ್ರತಿವರ್ಷ ಆಷಾಢ ಶುದ್ಧ ಸಪ್ತಮಿ ಇಲ್ಲ ಉತ್ತರಫಲ್ಗುನಿ ದಿನದಂದು ಒಂದು ದಿನ ಹಿಂದೆ, ಒಂದು ದಿನ ಮುಂದೆ ಹೀಗೆ ಮೂರುದಿನ 'ಸಾಕ್ಷಾತ್ಕಾರ ವೈಭವೋತ್ಸವ'ಗಳು ಜರಗುತ್ತವೆ. ಪ್ರತಿಸಂವತ್ಸರ ಜುಲೈ 16 ಅಥವಾ 17 ನೇ ತಾರೀಖಿನಂದು ದಕ್ಷಿಣಾಯನ ಪುಣ್ಯಕಾಲದಲ್ಲಿ ಆಣಿವರ ಆಸ್ಥಾನ ಜರಗುತ್ತದೆ. ಪ್ರತಿಸಂವತ್ಸರ ಅಶ್ವಯುಜ ಬಹುಳ ದ್ವಾದಶಿ ಪೂರ್ತಿಯಾಗುವಂತೆ ಮೂರು ದಿನಗಳವರೆಗೆ ಪವಿತ್ರೋತ್ಸವಗಳು ಜರಗುತ್ತವೆ.

ಇಷ್ಟು ಪ್ರಸಿದ್ಧಿ - ಪ್ರಾಶಸ್ತ್ಯಯಿರುವ ಶ್ರೀ ಕಲ್ಯಾಣ ವೇಂಕಟೇಶ್ವರ ಸ್ವಾಮಿಯನ್ನು ದರ್ಶಿಸಿ ಪುನೀತರಾಗೋಣ.

# ಸಂಸ್ಕೃತ ಕಲಿಯೋಣ...!!

- ನಿರ್ವಹಣೆ - ಡಾ॥ ಸಮುದ್ರಾಲ ಲಕ್ಷ್ಮಣಯ್ಯ & ಕಿರಣ್‌ಭಟ್



## ಪಾಠ - 1

### स्वरवर्णा : (ಸ್ವರವರ್ಣಾಃ)

अ आ इ ई उ ऊ ऋ ॠ ऌ ए ऐ ओ औ अं अः

ಅ ಆ ಇ ಈ ಉ ಊ ಋ ೠ ಌ ಎ ಏ ಓ ಔ ಅಂ ಅಃ

### व्यंजनवर्णा : (ವ್ಯಂಜನ ವರ್ಣಾಃ)

क ख ग घ ङ

ಕ ಖ ಗ ಘ ಙ

च छ ज झ ञ

ಚ ಛ ಜ ಝ ಞ

ट ठ ड ढ ण

ಟ ಠ ಡ ಢ ಣ

त थ द ध न

ತ ಥ ದ ಧ ನ

प फ ब भ म

ಪ ಫ ಬ ಭ ಮ

य र ल व श

ಯ ರ ಲ ವ ಶ

ष स ह क्ष ज्ञ

ಷ ಸ ಹ ಕ್ಷ ಜ್ಞ

# ಶಿವ ಚಿಂತನೆ!

**– ಎಸ್. ವೆಂಕಟರಾಘವನ್**



ಏನೆಂದು ಬೇಡಲಿ ನಿನ್ನ ಶಿವ, ಎಲ್ಲೆಂದು ಹುಡುಕಲಿ ಪರಮ ಶಿವ।
ಅಂತರಾಳದಲ್ಲಿ ಅಂತರಂಗದಲ್ಲಿ ಜಗತ್ತಿನ ಈಶ್ವರ ನೀ ಅಂತರ್ಯಾಮಿ ಪರಮ ಶಿವ ॥
ಪಂಚಭೂತಗಳಲ್ಲಿ ನೀ ಶಿವಪಂಚಾಕ್ಷರಿ ಮಂತ್ರವೂ ನೀನೇ ಪರಮ ಶಿವ।
ಲಯಕಾರನು ನೀ ಭೂತನಾಥನು ಶಿವ ಪ್ರಕೃತಿ ನಿನ್ನಲ್ಲೇ ಪರಮ ಶಿವ॥
ಜೋಗಿನೀನಾದೆ ಶಿವ ಭೋಗವು ನನಗ್ಯಾಕೆ ಪರಮಶಿವ।
ಭಸ್ಮವ ಲೇಪಿಸಿದೆ ನೀ ಶಿವ ನನಗೇಕೆ ಅಲಂಕಾರ ಪರಮ ಶಿವ॥
ಭಕ್ತ ಪ್ರೋಷಣೆಗೆ ಗಜ ಚರ್ಮ ಧರಿಸಿದೆ ಶಿವ ನನಗೇಕೆ ಪೀತಾಂಬರ ಪರಮ ಶಿವ ।
ಭಿಕ್ಷೆಯ ಪಡೆದೆ ಅನ್ನಪೂರ್ಣೇಶ್ವರಿಯಿಂದ ನನಗ್ಯಾಕೆ ಪಂಚ ಭಕ್ಷ್ಯ ಪರಮ ಶಿವ ॥
ಜಗತಿನ ಒಡೆಯ ನೀ ಪರಮ ಜೋಗಿಯಾಗಿ ಶಿವ ನನಗೇಕೆ ಭೋಗವು ಪರಮ ಶಿವ।
ದ್ವಾದಶ ಲಿಂಗ ರೂಪ ನೀನೇ ಶಿವ ರೋದಸೀ ಬ್ರಹ್ಮಾಂಡ ನೀನೇ ಪರಮ ಶಿವ॥
ನಿರಾಕಾರ ಮಣ್ಣಿಂದ ಆಕಾರ ಪಡೆದ ಮಡಿಕೆ ಮನುಜದೇಹ ಶಿವ ಒಡೆದು ಮತ್ತೆ ಮಣ್ಣಾಗುವುದು ಪರಮ ಶಿವ॥
ಸಂಸಾರದ ನಿಯಮ ಜನನ ಮರಣ ಚಕ್ರ ಶಿವ ಮರೆತೆ ನಾ ನಿನ್ನ ಪರಮ ಶಿವ ॥
ಮಂದಬುದ್ಧಿ ಎನ್ನದು ಮುಂದಿರಲು ನಾ ನಿನ್ನ ಕಾಣೆ ಜ್ಞಾನದಿಂದ ಎನಗೆ ದರ್ಶನ ನೀಡೋ ಪರಮ ಶಿವ।
ಎನ್ನ ಎದೆ ಬಡಿತ ಲಯದಲ್ಲಿ ಇರಲಯ್ಯಾ ಶಿವನಾಮ ಕಾಯವಿರುವತನಕ ಶಿವ,
ಅಂತ್ಯದಲ್ಲಿ ಆತ್ಮ ನಿನ್ನ ಶರಣು ಪರಮಶಿವ ॥
ಶರಣು ನಾ ನಿನ್ನ ಪಾದಕೆ ಪರಮ ಶಿವ, ಪರಮ ಶಿವ ಪರಮ ಶಿವ॥

ಪಂಚಭೂತಗಳಿಂದ ಏರ್ಪಟ್ಟ ಜಗತ್ತಿನಲ್ಲಿ ಪರಮೇಶ್ವರ ಸರ್ವಾಂತರ್ಯಾಮಿ, ಭೂತನಾಥರು. ತ್ರಿಮೂರ್ತಿಗಳಲ್ಲಿ ಒಬ್ಬರಾದ ಲಯಕಾರಕ ಪರಮೇಶ್ವರ. ಪರಮದಯಾಳು, ಕರುಣಾಕರ, ಲೋಕ ಕಲ್ಯಾಣಕಾರಿ ಪರಮೇಶ್ವರ. ಪರಮೇಶ್ವರ ಸರ್ವಶಕ್ತಿ ಸಂಪನ್ನರಾಗಿ ಲಿಂಗಾಕಾರದಲ್ಲಿ ಆವಿರ್ಭವಿಸಿದ ದಿನ ಶಿವರಾತ್ರಿ ಪರ್ವದಿನ. ಶಿವನ ಆಜ್ಞೆ ಇಲ್ಲದೆ ಒಂದು ಹುಲ್ಲು ಕಡ್ಡಿಯೂ ಅಲ್ಲಾಡುವುದಿಲ್ಲ. ಶಿವ ವಿಭೂತಿಪ್ರಿಯ, ಅಭಿಷೇಕ ಪ್ರಿಯ. ಶಿವ ಶಿವ! ಎಂದು ಭಕ್ತಿಯಿಂದ ನೀರಿನ ಅಭಿಷೇಕ, ವಿಭೂತಿ ಅಭಿಷೇಕ ಮಾಡಿದರೆ ಸಾಕು ಪರಮ ಸಂತೃಪ್ತರಾಗಿ ಸರ್ವ ಅಕ್ಷಯಗಳನ್ನೂ ಕೊಡುವ ಮಹಾದೇವರು.

“ಯೋ ರುದ್ರೋ ವಿಶ್ವಾಭುವನಾನಿ ವಿವೇಶ ತಸ್ಮೈ ರುದ್ರಾಯ ನಮೋಸ್ತು”

ಅಗ್ನಿ, ನೀರು ಮುಂತಾದ ಭೂತಗಳಿಂದ ಕೂಡಿ ವಿಶ್ವವನ್ನು ಮತ್ತು ಇತರ ಲೋಕಗಳನ್ನು ಪ್ರವೇಶಿಸಿದ್ದಾರೆ! ಅಂತಹ ರುದ್ರ ದೇವರಿಗೆ ನಮಸ್ಕಾರ.

“ವಿಶ್ವಭೂತಂ ಭುವನಂ ಚಿತ್ರಂ ಬಹುಧಾ ಜಾತಂ ಜಾಯಮಾನಂ ಚ ಯಾತ್ ಸರ್ವೋರ್ವೈರುದ್ರಸ್ತಸ್ಮೈ ರುದ್ರಾಯ ನಮೋಸ್ತು”.

ಭೌತಿಕ ಪ್ರಪಂಚ ಸೃಷ್ಟಿಯಾದ ಜೀವಿಗಳು, ಅನೇಕ ರೀತಿಯ ಬಣ್ಣ,ಆಕಾರ, ಸಕಲ ರೂಪಗಳು ಅನಂತವಾಗಿ ರುದ್ರರೇ ಆಗಿದ್ದಾರೆ. ಅಂತಹ ರುದ್ರ ದೇವರಿಗೆ ನಮಸ್ಕಾರ! ಪರಮೇಶ್ವರ ಸರ್ವಾಂತರ್ಯಾಮಿ, ಭೂತನಾಥರು, ಭೂತಗಳಿಗೆಲ್ಲ ಅಧಿಪತಿ! ದೇವಾದಿದೇವ ಮಹಾದೇವರು.

ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿ ಪತ್ತಯೇ।
ಜಗತಃ ಪಿತರೌ ವಂದೇ ಪಾರ್ವತೀ ಪರಮೇಶ್ವರೌ॥

ಆದಿ ದಂಪತಿಗಳು ಪಾರ್ವತಿ ಪರಮೇಶ್ವರರು, ಶಬ್ದ ಮತ್ತು ಅರ್ಥ ಇದ್ದೆ ಹಾಗೆ ಬಿಡಿಸಲಾಗದ ನಿತ್ಯ ಸಂಬಂಧವುಳ್ಳ ಜಗತ್ತಿನ ತಂದೆ ತಾಯಿ ಆದ ಪಾರ್ವತಿ ಪರಮೇಶ್ವರರಿಗೆ ನಮಸ್ಕರಿಸುತ್ತಿದ್ದೇನೆ. ಶಿವ ತತ್ವ ಎನ್ನುವ ಪದದಲ್ಲಿ ಪರಮೇಶ್ವರರ ತತ್ವವಲ್ಲದೆ ಶಿವ ಚರಿತೆ, ಭಕ್ತ ರಕ್ಷಣೆಗಾಗಿ ಮಾಡಿದ ಅಸುರ ಸಂಹಾರ, ನಿರಾಕಾರ, ನಿರಾಡಂಬರ, ಕಲ್ಯಾಣಕಾರಿಯಾಗಿರುವ ತತ್ವವನ್ನು ಗ್ರಹಿಸಬಹುದು. ವ್ಯಾಸರು ಶಿವಪುರಾಣವನ್ನು ೨೪ ಸಾವಿರ ಶ್ಲೋಕಗಳಿಂದ ಶಿವ ತತ್ವವನ್ನು, ಪರಮೇಶ್ವರ ಮಹಿಮೆಯನ್ನು ವರ್ಣಿಸಿದ್ದಾರೆ.

## ಲೋಕಕಲ್ಯಾಣ, ವೈರಾಗ್ಯ, ದಯಾತತ್ವ

ಕ್ಷೀರಸಾಗರ ಮಥನದಲ್ಲಿ ಉದ್ಭವಿಸಿದ ಹಾಲಾಹಲ ವಿಷ ಸಮಸ್ತ ಜೀವಕೋಟಿಯನ್ನು ದಹಿಸುವ ವೇಳೆ ಪರಮೇಶ್ವರ ವಿಷ ಸೇವಿಸಿದಾಗ ದೇವಿ ಪಾರ್ವತಿ, ಸರ್ವ

ಮಂಗಳ ವಿಷವನ್ನು ಕಂಠದಲ್ಲಿ ನಿಲ್ಲಿಸಲು ತಡೆದರು. ಪರಮೇಶ್ವರ ವಿಷವನ್ನು ಕಂಠದಲ್ಲಿ ಬಂಧಿಸಿದಾಗ ಕುತ್ತಿಗೆ ನೀಲವರ್ಣವಾಗಿ ಬದಲಾಯಿತು. ಅಂದಿನಿಂದ ಪರಮೇಶ್ವರ ನೀಲಕಂಠ, ಗರಳಕಂಠ ಎಂಬುವ ನಾಮ ಪಡೆದರು. ಜಗತ್ಕಲ್ಯಾಣಕ್ಕಾಗಿ ಹಾಲಾಹಲವನ್ನು ಸೇವಿಸಿದ ಲೋಕ ಕಲ್ಯಾಣಕಾರಿ ಪರಮೇಶ್ವರ.ದೇಹದ ಅರ್ಧಭಾಗವನ್ನು ದೇವಿ ಪಾರ್ವತಿಗೆ ಕೊಟ್ಟು ಅರ್ಧನಾರೀಶ್ವರ ತತ್ವವನ್ನು ಚಾಟಿದರು. ಶಂಕರಾಚಾರ್ಯರು ಅರ್ಧನಾರೀಶ್ವರ ಸ್ತೋತ್ರದಲ್ಲಿ ಪಾರ್ವತಿ ಪರಮೇಶ್ವರರನ್ನು ಅರ್ಧನಾರೀಶ್ವರ ರೂಪದಲ್ಲಿ ಕೀರ್ತಿಸಿದರು.

ಚಾಂಪೇಯ ಗೌರಾರ್ಧಶರೀರಕಾಯೈ।ಕರ್ಪೂರ ಗೌರಾರ್ಧಶರೀರಕಾಯ। ಧಮ್ಮಿಲ್ಲಕಾಯೈ ಚ ಜಟಾಧರಾಯ। ನಮಃ ಶಿವಾಯೈ ಚ ನಮಃ ಶಿವಾಯ॥

ಯಾರ ಅರ್ಧ ಶರೀರವು ಬಂಗಾರದಂತೆ ಹೊಳೆಯುತ್ತಿದೆಯೋ,ಯಾರ ಉಳಿದರ್ಧ ಶರೀರವು ಉರಿಯುತ್ತಿದ್ದ ಕರ್ಪೂರದಂತೆ ಕಾಂತಿಯುತವಾಗಿದೆಯೋ ಯಾರ ಅರ್ಧ ಶರೀರದ ತಲೆಗೂದಲನ್ನು ಸುಂದರವಾಗಿ ಅಲಂಕರಿಸಲ್ಪಟ್ಟಿದೆಯೋ ಹಾಗೂ ಉಳಿದರ್ಧ ಭಾಗದ ಕೂದಲು ಝಟೆಯಾಗಿ ಇದೆಯೋ, ಆ ಅರ್ಧನಾರೀಶ್ವರ ಶಿವನಿಗೆ ನನ್ನ ನಮಸ್ಕಾರಗಳು. ಮಾತೆ ಅನ್ನಪೂರ್ಣಾದೇವಿಯಿಂದ ಭಿಕ್ಷೆ ಪಡೆದು




ಯೋಗಿ, ದಿಗಂಬರ ತತ್ವವನ್ನು ತೋರಿದರು. ಸ್ಮಶಾನದಲ್ಲಿ ಇದ್ದು, ಭಸ್ಮವ ಲೇಪಿಸಿ ವೈರಾಗ್ಯ ತತ್ವನನ್ನು ತೋರಿದರು. ಏನೇ ಇದ್ದರೂ ಕೊನೆಗೆ ಎಲ್ಲಾ ಮಣ್ಣೇ ಅಥವಾ ಬೂದಿಯೇ ಎನ್ನುವುದು ಸ್ಮಶಾನ ವೈರಾಗ್ಯ. ಭಕ್ತ ಮಾರ್ಕಂಡೇಯರನ್ನು ಯಮಪಾಶದಿಂದ ರಕ್ಷಿಸಿ ಚಿರಂಜೀವಿಯಾಗಿರಲು ವರವ ಕೊಟ್ಟ ಭಕ್ತ ಜನ ಅಪತ್ಬಾಂಧವ ಈಶ್ವರ. ಆಯುಷ್ಪ್ರದಾತ ಪರಮೇಶ್ವರ ಶುಭವನ್ನು ಕಲ್ಪಿಸುವ ಶಂಕರರು! ಶಿವ ಶಿವ ಎಂದರೆ ಭಯವಿಲ್ಲ! ಶಿವ ನಾಮಕೆಸಾಟಿ ಬೇರಿಲ್ಲ!

ವಿಶ್ವಸೃಷ್ಟಿ ವಿಧಾಯಕಂ ಪುನರೇವಪಾಲನ ತತ್ವರಂ ಸಂಹರಂ ತಮಪಿ ಪ್ರಪಂಚ ಮಶೇಷಲೋಕ ನಿವಾಸಿನಮ್।

ಕ್ರೀಡೆಯಂತೆ ಮಹರ್ನಿಶಂ ಗಣನಾಥ ಯೂಥ ಸಮನ್ವಿತಂ ಚಂದ್ರಶೇಖರಮಾಶ್ರಯೇ ಮಮ ಕಿಂ ಕರಿಷ್ಯತಿ ವೈಯಮಃ॥

ಶ್ರೀ ಶಂಕರಾಚಾರ್ಯರು ಚಂದ್ರಶೇಖರ ಅಷ್ಟಕದಲ್ಲಿ ಸರ್ವಾಂತರ್ಯಾಮಿ, ವಿಶ್ವಸೃಷ್ಟಿ ಕಾರಕ, ಪ್ರಪಂಚದ ಅಶೇಷ ಲೋಕದಲ್ಲಿ ಇರುವ, ಗಣನಾಥರ ಸಮನ್ವಿತರಾದ ಈಶ್ವರನನ್ನು ನಂಬಿ ಆಶ್ರಯಿಸಿದಾಗ ಯಮಪಾಶ ಏನು ಮಾಡುವುದು? ಈಶ್ವರ ಅನುಗ್ರಹ ಇದ್ದರೆ ಎಲ್ಲಾ ಪ್ರಾಪ್ತಿ ಆಗುವುದು, ಭಯವಿಲ್ಲ ಎಂದು ವರ್ಣಿಸಿದ್ದಾರೆ. ನಿರಾಡಂಬರ ನಿತ್ಯ ಭಕ್ತ ಪೋಷಕ ಈಶ್ವರ.ಸರ್ಪಗಳು ಜೀವ ಉಳಿಸಲು ಬೇಡಿಕೊಂಡಾಗ ಹಾವನ್ನು ಆಭರಣವಾಗಿ ಧರಿಸಿ ನಾಗಭೂಷಣ ಎಂಬುವ ನಾಮವ ಪಡೆದರು. ಗಜಾಸುರನ ಸಂಹಾರ ಮಾಡುವಾಗ ಭಕ್ತನ ಬೇಡಿಕೆಯಂತೆ ಗಜಚರ್ಮವನ್ನು ಧರಿಸಿದರು. ಶಶಿಯನ್ನು ಧರಿಸಿ ಚಂದ್ರಶೇಖರ. ಗಂಗೆಯನ್ನು ಶಿರವ ಹೊತ್ತು ಗಂಗಾಧರ ಎಂಬುವ ನಾಮ ಪಡೆದರು.

### ಶಿವ ಪಂಚಾಕ್ಷರಿ ಮಂತ್ರ

ವಿಶ್ವನಾಥವಿಲ್ಲದೆ ಜಗತ್ತು ಅಂಧಕಾರಮಯ! ಪ್ರಕೃತಿ ಜಡವಾಗಿದೆ. ಹಾಗೂ ಜೀವಾತ್ಮನು ಅಜ್ಞಾನಿ. ಪ್ರಕಾಶಕೊಡುವರು ಪರಮೇಶ್ವರ. **"ಓಂ ನಮಃ ಶಿವಾಯ"**ಎನ್ನುವ ಮಂತ್ರ ಶಿವ ಪಂಚಾಕ್ಷರಿ ಮಂತ್ರ. ಮಹಾನ್ ಅರ್ಥದಿಂದ ವೇದಗಳ ಸಾರಸತ್ವವೇ ಆಗಿದೆ. ಈ ಮಂತ್ರ ಶಿವ ಆಜ್ಞೆಯಿಂದ ಮೂಡಿದೆ ಮತ್ತು ಸಾಕ್ಷಾತ್ ಶಿವಸ್ವರೂಪಿ. ಈ ಮಂತ್ರ ಮೋಕ್ಷವನ್ನು ಕೊಡುವುದು. **"ಓಂ"** ಎನ್ನುವ ಮಂತ್ರದಲ್ಲಿ ತ್ರಿಗುಣಾತೀತ. ಸರ್ವಜ್ಞ ಸರ್ವಕರ್ತ ಸರ್ವ ವ್ಯಾಪ್ತಿ ಪರಮ ಶಿವ ಪ್ರತಿಷ್ಠಿತನಾಗಿರುವರು. ಈಶಾನ ಆದಿ ಸೂಕ್ಷ್ಮ ಪಂಚ ಬ್ರಹ್ಮರು "ನಮಃ ಶಿವಾಯ" ಮಂತ್ರದಲ್ಲಿ ಕ್ರಮವಾಗಿ ಸ್ಥಿತರಾಗಿದ್ದಾರೆ.

ಸರ್ವಜ್ಞನೂ ಪರಿಪೂರ್ಣನೂ, ವೈಭಾವತಃ ನಿರ್ಮಲನೂ ಆದ ಶಿವನ ಸ್ವರೂಪವೇ ಆಗಿದೆ.

### ಶಿವರಾತ್ರಿ ಆಚರಣೆ

ಮಾಘ ಮಾಸದ ಬಹುಳ ಚತುರ್ಥಿಯನ್ನು ಶಿವರಾತ್ರಿ ಪರ್ವದಿನವೆಂದು ಆಚರಿಸಲಾಗುವುದು. ಎಲ್ಲ ದೇವತೆಗಳನ್ನು ಅವರ ರೂಪದಲ್ಲಿ ಪೂಜಿಸಲಾಗುವುದು, ಪರಮೇಶ್ವರರನ್ನು ಲಿಂಗರೂಪದಲ್ಲಿ ಪೂಜೆ, ಅಭಿಷೇಕ ಮಾಡುವರು. ಶಿವ ಎನ್ನುವ ನಾಮಕೆ ಮಂಗಳಕರ, ಶುಭಪ್ರದ ಎಂದು ಅರ್ಥ. ಪುರಾಣಗಳ ಪ್ರಕಾರ ಈಶ್ವರ ಲಿಂಗರೂಪದಲ್ಲಿ ಆವಿರ್ಭವಿಸಿದ ದಿನವೇ ಮಹಾಶಿವರಾತ್ರಿ ಪರ್ವದಿನ. ಪರಮೇಶ್ವರಿಗೆ ಪ್ರೀತಿಕರವಾದ ದಿನ. ಶಿವರಾತ್ರಿಯ ದಿನ ಪ್ರಾತಃ ಕಾಲದಲ್ಲ ಕಾಲಕೃತ್ಯ ಮುಗಿಸಿ ಅಭಿಷೇಕ, ರುದ್ರಂ, ನಮಕಂ ಚಮಕಂ. ಲಿಂಗಾಷ್ಟಕಂ, ದ್ವಾದಶ ಜ್ಯೋತಿರ್ಲಿಂಗ ಮಹಿಮೆ ಪಠನೆ, ಉಪವಾಸ ಮತ್ತು ರಾತ್ರಿ ವೇಳೆಯಲ್ಲಿ ಜಾಗರಣೆ ತುಂಬಾ ಮುಖ್ಯ."ಓಂ ನಮಃ ಶಿವಾಯ" ಶಿವ ಪಂಚಾಕ್ಷರಿ ಮಂತ್ರ ಜಪ ತುಂಬಾ ಫಲದಾಯಕ ಜಾಗರಣೆ ಮಾಡುತ್ತ ಮಧ್ಯ ರಾತ್ರಿಯಲ್ಲಿ ಅಭಿಷೇಕ ಮಾಡುವ ಆಚಾರ ಒಂದು ಮಹಾ ಶಿವರಾತ್ರಿಯಾದಿನ ಮಾತ್ರ ಇದೆ. ಭಕ್ತಿಯಿಂದ ಈಶ್ವರಾ! ಎಂದು ನೀರಿನಿಂದ ಅಭಿಷೇಕ. ಬಿಲ್ವಪತ್ರಿ ಸಮರ್ಪಿಸಿದರೂ ಅತ್ಯಂತ ಪ್ರಸನ್ನವಾಗುವ ದೇವರು ಮಹಾ ದೇವರು. ಅಭಯ, ಆಯುಷ್, ವಿದ್ಯೆ, ಮೋಕ್ಷ ಕೊಡುವ ಶಿವರಾತ್ರಿಯನ್ನು ಭಕ್ತಿಯಿಂದ ಆಚರಿಸಿ ಪಾರ್ವತೀ ಪರಮೇಶ್ವರರ ಕೃಪೆಗೆ ಪಾತ್ರರಾಗೋಣ.

ಸದಾಶಿವ ಸ್ವರೂಪಾಯ ಸಮಯ ಸ್ತತ್ಪುರುಷಾಯ ಚ । ಅಘೋರಾಯ ಚ ಘೋರಾಯ ಮಹಾದೇವಾಯ ಮಂಗಳಂ॥

**.....ಸರ್ವೇ ಜನಾಃ ಸುಖಿನೋ ಭವಂತು!....**

**ಎಡದಿಂದ ಬಲಕ್ಕೆ**

1. ಶ್ರೀಮನ್ನಾರಾಯಣ
2. ಘುಷ್ಯತೇ
3. ಕಣ್ಣಿನುಣ್ ಶಿರುತ್ತಾಂಬು

**ಬಲದಿಂದ ಎಡಕ್ಕೆ**

4. ನನು
5. ಮುನಿವಾಹನಭೋಗಂ
6. ವಾರಣಮಾಯಿರಂ

**ಮೇಲಿಂದ ಕೆಳಕ್ಕೆ**

7. ಶ್ರೀ ಭಾಷ್ಯ
8. ಮಣಾಳನ್
9. ರಾಮಾನುಜಾಂಘ್ರಿ
10. ಕಮಲ


**ಕೆಳಗಿನಿಂದ ಮೇಲಕ್ಕೆ**

11. ಶ್ರೀ ಸ್ತುತಿ
12. ಮಧುರೈ
13. ರಮಣ
14. ರಾಮರ್ ಸೀತೈ
15. ಪೊಯ್ಗೈ ಆಳ್ವಾರ್

| ಕ್ರ.ಸಂ | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|
| 1 | 1 7 ಶ್ರೀ | 8 ಮ | ನ್ನಾ | ರಾ | ಯ | ಣ | ತ್ತೈ | ರ್ |
| 2 | ಭಾ | ಣಾ | ತಿ | ಮಾ | ರೈ | ಮ | ಸೀ | ಳ್ವಾ |
| 3 | ಷ್ಯಂ | ಳ | ಸ್ತು | ನು | ಧು | 13 ರ | ರ್ | ಆ |
| 4 | | ನ್ | 11 ಶ್ರೀ | ಜಾಂ | 12 ಮ | | ಮ | ಯ್ಗೈ |
| 5 | 2 ಘ | ಷ್ಯ | ತೇ | ಘ್ರಿ | ನು | 4 ನ | 14 ರಾ | 15 ಪೊ |
| 6 | 3 10 ಕ | ಣ್ಣಿ | ನು | ಣ್ | ಶಿ | ರು | ತ್ತಾಂ | ಬು |
| 7 | ಮ | ಗಂ | ಭೋ | ನ | ಹ | ವಾ | ನಿ | 5 ಮು |
| 8 | ಲ | | ರಂ | ಯಿ | ಮಾ | ಣ | ರ | 6 ವಾ |



# ಮಾಘ ಮಾಸದ ಮಹಿಮೆ



- ಶ್ರೀಮತಿ. ಸುಮನ ಬದರೀನಾಥ್

ಚೈತ್ರಾದಿ ದ್ವಾದಶ ಮಾಸಗಳಲ್ಲಿ ಪ್ರತಿಯೊಂದು ಮಾಸಕ್ಕೆ ತನ್ನದೇ ಆದ ಮಹಾತ್ಮ್ಯವೂ, ಪ್ರಾಶಸ್ತ್ಯವೂ ಉಂಟು. ಅದರಲ್ಲಿ ಮಕರ ಮುಕ್ತವಾದ ಮಾಘಮಾಸವು ಬಹು ಪವಿತ್ರವಾದುದು. ಶ್ರೀ ಹರಿಗೆ ಅತ್ಯಂತ ಪ್ರಿಯಕರವಾದುದು. ಮಾಘಮಾಸದ ಮಹಿಮೆಯು ಅನೇಕ ಶಾಸ್ತ್ರ ಗ್ರಂಥಗಳಲ್ಲಿಯೂ, ಪುರಾಣಗಳಲ್ಲಿಯೂ ವಿಪುಲವಾಗಿ ಬಣ್ಣಿಸಲ್ಪಟ್ಟಿದೆ. ಈ ಮಾಸಕ್ಕೆ ಭಗವಂತನ ಚತುರ್ವಿಂಶತಿ ರೂಪಗಳಲ್ಲಿ ಕಮಲಾ ಮಾಧವರು ಮಾಸನಿಯಾಮಕರು. ಅದರಲ್ಲಿ ತಮ್ಮ ವಿಭೂತಿ ರೂಪದಿಂದ ಸನ್ನಿಹಿತರು. ವಾಯುಪುರಾಣದಲ್ಲಿ ಮಾಘ ಮಾಸದ ಮಹಿಮೆಯು ಬಹುವಾಗಿ ವರ್ಣಿಸಲ್ಪಟ್ಟಿದೆ. ಪೂರ್ವ ದಲ್ಲಿ ಸಿಂಧೂನದಿ ತೀರದಲ್ಲಿ ಶ್ರೀ ಮನ್ನಾರಾಯಣನಿಂದ ಮಹಾ ಲಕ್ಷ್ಮಿಗೆ ಮಾಘಮಾಸದ ಮಹಿಮೆಯು ಮೊದಲು ಹೇಳಲ್ಪಟ್ಟಿತು. ರಮಾದೇವಿಯರಿಂದ ಬ್ರಹ್ಮ ದೇವರಿಗೂ, ಅವನಿಂದ ನಾರದ ನಿಗೂ ಉಪದೇಶವಾಯಿತೆಂದು ವಾಯುಪುರಾಣದಲ್ಲಿ ಹೇಳಿದೆ. ನಾರದನಿಂದ ಭೂಲೋಕದಲ್ಲಿ ಪ್ರಚುರಪಡಿಸಲ್ಪಟ್ಟಿತು. ಸುಮಾರು 30 ಅಧ್ಯಾಯಗಳಲ್ಲಿ ಸವಿಸ್ತಾರವಾಗಿ, ಅನೇಕ ದೃಷ್ಟಾಂತಗಳೊಡನೆ , ತತ್ವ ಪ್ರತಿಪಾದನೆಯೊಂದಿಗೆ, ಪ್ರಮೇಯ ಗರ್ಭಿತವಾಗಿ, ಮಾಘಮಾಸದ ಮಹಿಮೆಯು ವಾಯುಪುರಾಣ ದಲ್ಲಿ ಉಕ್ತವಾಗಿದೆ. ಸಾಮಾನ್ಯ ಜನತೆಗೂ ಸುಲಭಗ್ರಾಹ್ಯವಾಗು ವಂತೆ ವ್ರತಾಚರಣೆಗೆ ಸುಲಭವಾಗಿರುವಂತೆ ಅವುಗಳನ್ನು ಹೀಗೆ ಸಂಗ್ರಹಿಸಬಹುದು.

ಮಾಘಮಾಸದ ವ್ರತಗಳು ಆಚರಣೆಗೆ ಸುಲಭವಾದ, ಮಂಗಳಕರವಾದ, ಸಕಲಶುಭ ಪ್ರದವಾದ, ಇಷ್ಟಾರ್ಥಗಳನ್ನು ನೀಡುವ ರಹಸ್ಯವಾದ ಧರ್ಮ ಈ ಮಾಸದಲ್ಲಿ ಪ್ರಾತಃ ಸ್ನಾನ ನಂತರ ಶ್ರೀ ಹರಿ ಪೂಜೆ, ವಿವಿಧ ವ್ರತಾಚರಣೆಗಳು, ವಿವಿಧ ದಾನಗಳು ಮತ್ತು ಮಾಘಮಾಸ ಮಹಾತ್ಮೆಯ ಶ್ರವಣ ಬಹು ಶ್ರೇಷ್ಠವೆಂದು ಪರಿಗಣಿತವಾಗಿವೆ. ಕಿಂಚಿದಾಚರಣೆಯೂ ಮಹತ್‌ಫಲವನ್ನು ನೀಡುವುದು 'ತಾದೃಕ್ ಪಾಪಂ ನಚೈವಾಸಿ ಯಚ್ಚ ಮಾಘಾನ್ನಗಚ್ಛತಿ' ಮಾಘ ವ್ರತಾಚರಣೆಯಿಂದ ಹೋಗ ಲಾಗದ ಪಾಪವೇ ಇಲ್ಲ. ಮಾಘಮಾಸದಲ್ಲಿ ಮಾಡಿದ ಪುಣ್ಯ ಕಾರ್ಯಗಳು ಕೋಟಿಗುಣಗಳಿಂದ ಅಧಿಕಗೊಂಡು ಫಲ

ನೀಡುತ್ತವೆ. 'ಮಾಘೇ ಕೋಟಿಗುಣಂ ಭವೇತ್' ' ಅಂತಹ ಪವಿತ್ರವಾದ ಪುಣ್ಯಪ್ರದವಾದ ಮಾಘಮಾಸವನ್ನು ವ್ರತ ನಿಯಮಾಚರಣೆ ಮಾಡದೆ ವ್ಯರ್ಥವಾಗಿ ಕಳೆಯಬಾರದು.

ಮಾಘಮಾಸದ ವ್ರತಗಳನ್ನು ಮೂರು ರೀತಿಯಾಗಿ ಆಚರಿಸಬಹುದು. ಪುಷ್ಯಶುದ್ಧ ದಶಮಿಯಿಂದ ಮಾಘಶುದ್ಧ ದಶಮಿಯವರೆಗೆ , ಪುಷ್ಯ ಶುದ್ಧ ಹುಣ್ಣಿಮೆಯಿಂದ ಮಾಘಶುದ್ಧ ಹುಣ್ಣಿಮೆಯವರೆಗೆ ಮತ್ತು ಮಕರ ಸಂಕ್ರಮಣದಿಂದ ಕುಂಭ ಸಂಕ್ರಮಣದವರೆಗೆ. ಮಾಘಶುದ್ಧ ಪಾಡ್ಯದಿಂದ ಮಾಘ ಬಹುಳ ಅಮಾವಾಸ್ಯೆಯ ಕಾಲವನ್ನೂ ಕೆಲವರು ಆಚರಿಸುತ್ತಾರೆ. ಸಾಮಾನ್ಯವಾಗಿ ಪುಷ್ಯಶುದ್ಧ ಹುಣ್ಣಿಮೆಯಿಂದ ಮಾಘಶುದ್ಧ ಹುಣ್ಣಿಮೆಯವರೆನ ಕಾಲವು ಮಾಘ ಸ್ನಾನಕ್ಕೂ ವ್ರತಾಚರಣೆಗಳಿಗೂ ಪ್ರಶಸ್ತವೆನಿಸಿದೆ.

ಮಾಘಸ್ನಾನಕ್ಕೆ ನಾಲ್ಕು ಯುಗಗಳಲ್ಲಿಯೂ ಆಚರಿಸಲ್ಪಟ್ಟ ವಿಶೇಷವ್ರತ ವಾಗಿದೆ. ಮಾಘಸ್ನಾನ ಒಂದು ಆಧ್ಯಾತ್ಮಿಕ ಸಾಧನೆ. ಪರಮಪವಿತ್ರವಾದ ಸುಲಭ ವ್ರತ. ಮುಕ್ತಿಗೆ ಮೊದಲ ಮೆಟ್ಟಿಲು ಎಂದೆಲ್ಲಾ ವರ್ಣಿತವಾಗಿದೆ.


ಸರ್ವದಾನೇಷು ಯತ್ಪುಣ್ಯಂ ಸರ್ವ ತೀರ್ಥೇಷು ಯತ್ಫಲಂ
ತತ್ಫಲಂ ಸಮವಾಪ್ನೋತಿ ಮಾಘಸ್ನಾನೇನ ನಾರದ॥

(ವಾಯುಪುರಾಣ)

ಮೇಷ, ತುಲಾ ಮತ್ತು ಮಕರರಾಶಿಗಳಲ್ಲಿ ಅರುಣೋದಯ ಕಾಲದಲ್ಲಿ ಸೂರ್ಯನಿರುವ ಮಾಸಗಳಲ್ಲಿ ಅಂದರೆ ವೈಶಾಖ,ಕಾರ್ತೀಕ ಮತ್ತು ಮಾಘಮಾಸಗಳಲ್ಲಿ ಆಲಸ್ಯವನ್ನು ಬಿಟ್ಟು ಪ್ರಾತಃ ಸ್ನಾನವನ್ನು ಮಾಡಬೇಕು ಎಂದು ಶಾಸ್ತ್ರಗ್ರಂಥಗಳಲ್ಲಿ ಹೇಳಿದೆ. ಮಾಘಸ್ನಾನ ವ್ರತವನ್ನು ಸಂಕಲ್ಪ ಪೂರ್ವಕವಾಗಿ ಪ್ರಾರಂಭಿಸಬೇಕು.

ಮಾಘಸ್ನಾನಂ ಕರಿಷ್ಯಾಮಿ ಮಕರಸ್ಥೇದಿವಾಕರೇ
ಆಸಮಾಪ್ತಿಂ ಮಹಾದೇವ ನಿರ್ವಿಘ್ನಂ ಕುರು ಮಾಧವ॥

ಎಂದು ಮಾಸ ನಿಯಾಮಕನಾದ ಮಾಧವನನ್ನು ಪ್ರಾರ್ಥಿಸ ಬೇಕು.ಮಾಘಸ್ನಾನಕ್ಕೆ ನಕ್ಷತ್ರಗಳು ಕಾಣುವ ಸಮಯ ಉತ್ತಮ.ಅವು ಮರೆ ಯಾದರೆ ಮಧ್ಯಮ ಸೂರ್ಯೋದಯದ ನಂತರದ ಕಾಲ ಅಧಮವೆಂದು ಹೇಳಲ್ಪಟ್ಟಿದೆ. ಅರುಣೋದಯ ಕಾಲದಲ್ಲಿ ಬಹಿರ್ಜಲದಲ್ಲಿ ಅಂದರೆ ನದಿ, ಪುಷ್ಕರಣಿ ಮುಂತಾದ ಜಲಾಶಯಗಳಲ್ಲಿ ಮೂರು ಲೋಕಗಳಲ್ಲಿರುವ ಮೂರುವರೆ ಕೋಟಿ ಪವಿತ್ರ ತೀರ್ಥಗಳೂ, ಗಂಗಾದಿ ಸಕಲ ಪುಣ್ಯ ನದಿ ಗಳೂ ಸನ್ನಿಧಾನ ಹೊಂದಿರುತ್ತವೆ. ಗಂಗಾ ಗೋದಾವರಿ,ಯಮುನಾ ಸರಸ್ವತೀ ಕಾವೇರಿ, ನರ್ಮದಾ, ಕೃಷ್ಣವೇಣಿ ನದಿಗಳು ಸಪ್ತಗಂಗಾ ನದಿಗಳೆಂದೂ ಪ್ರಖ್ಯಾತವಾಗಿವೆ.ಯಾವ ಜಲಾಶಯಲ್ಲಿ ಸ್ನಾನ ಮಾಡಿದರೂ ಈ ಸಪ್ತ ಗಂಗಾ ನದಿಗಳ ಸ್ಮರಣೆಯನ್ನು ಮಾಡಿ. ಸಕಲ ತೀರ್ಥಾಭಿಮಾನಿ



ದೇವತೆಗಳೂ ಅಲ್ಲಿ ಸನ್ನಿ ಹಿತರಾಗಿರುವರೆಂದು ತಿಳಿದು ಮಾಡಬೇಕು. ಹೀಗಾಗಿ ಮಾಘಮಾಸದಲ್ಲಿ ತೀರ್ಥಯಾತ್ರೆಯನ್ನು ಕೈಗೊಂಡರೆ ತೀರ್ಥಸ್ನಾನವು ಆಗುತ್ತದೆ. ದೇವರ ದರ್ಶನವೂ ಆಗುತ್ತದೆ. ಸ್ನಾನಾನಂತರ ಮಾಸ ನಿಯಾಮಕ ಮಾಧವನಿಗೆ, ಸೂರ್ಯನಿಗೆ ನದಿ ಗಳಿಗೆ ಅರ್ಘ್ಯ ಪ್ರದಾನ ಮಾಡಬೇಕು.ನದೀ ದೇವತೆಯನ್ನು ಅರಿಶಿನ, ಕುಂಕುಮ,ಅಕ್ಷತೆ, ಗೆಜ್ಜೆವಸ್ತ್ರ, ಹೂ ಮುಂತಾದ ಮಂಗಳ ದ್ರವ್ಯಗಳಿಂದ ಪೂಜಿಸಬೇಕು. ಮೊರದ ಬಾಗಿನಗಳನ್ನು ಅರ್ಪಿ ಸುವುದೂ ಉಂಟು.ದೀಪಗಳನ್ನು ಹಚ್ಚಿ ನದಿ ಯಲ್ಲಿ ತೇಲಿ ಬಿಡುತ್ತಾರೆ.ವಸ್ತ್ರದಾನ, ಫಲದಾನ, ಮೊರದ ಬಾಗಿನ,ಮಂಗಳ ದ್ರವ್ಯಗಳನ್ನು ಸುಮಂಗಲಿಯರಿಗೆ ದಾನ ಕೊಡುವುದುಂಟು. ನದೀ ದೇವತೆಗಳನ್ನು ಕುರಿತಾದ ಸ್ತೋತ್ರಗಳನ್ನು ಪಠಣ ಮಾಡುವರು. ಸಂಸ್ಕೃತ ಸ್ತೋತ್ರಗಳನ್ನು ಹೇಳಲಾಗದವರು ಹರಿದಾಸರು ರಚಿಸಿದ ನದಿ ಸ್ತೋತ್ರಗಳನ್ನು ಅನುಸಂಧಾನ ಮಾಡಬಹುದು.

ಋಷಿಗಳು, ದೇವತೆಗಳು, ಪತಿವ್ರತಾ ಸ್ತ್ರೀಯರು ಎಲ್ಲರೂ ಮಾಘಸ್ನಾನ ವ್ರತವನ್ನು ಆಚ ರಿಸಿ ನಮಗೆ ಮೇಲ್ಪಂಕ್ತಿ ಹಾಕಿ ಕೊಟ್ಟಿದ್ದಾರೆ. ದೇವ ಮಾತೆಯಾದ ಅದಿತಿಯು 12 ವರ್ಷಗಳ ಪರ್ಯಂತ ಮಾಘಸ್ನಾನ ಮಾಡಿ ದ್ವಾದರಾದಿತ್ಯ ರನ್ನು ಪುತ್ರರನ್ನಾಗಿ ಪಡೆದಳು. ಪುರಾಣ ಗ್ರಂಥ ಗಳಲ್ಲಿ ಇಂತಹ ನೂರಾರು ದೃಷ್ಟಾಂತಗಳಿವೆ. ಮಾಘಮಾಸದಲ್ಲಿ ಪ್ರಯಾಗದಲ್ಲಿ ಗಂಗಾಸ್ನಾನ, ವೇಣಿದಾನ, ವೇಣಿ ಮಾಧವನ ದರ್ಶನಕ್ಕೆ ವಿಶೇಷ

ಫಲ ವುಂಟೆಂದು ಉಕ್ತವಾಗಿದೆ. ಜಲಾಶಯಗಳಿಗೆ ಹೋಗಲು ಸಾಧ್ಯ ವಿಲ್ಲದವರು ಮನೆಯಲ್ಲೇ ಬ್ರಾಹ್ಮೀ ಮೂಹೂರ್ತದಲ್ಲಿ ಸಂಕಲ್ಪ ಪೂರ್ವಕವಾಗಿ ಸ್ನಾನ ವ್ರತವನ್ನು ಆಚರಿಸಬಹುದು. ನಿತ್ಯ ದಲ್ಲಿಯೂ ಸ್ನಾನವ್ರತವನ್ನು ಮಾಡಲು ಅಶಕ್ತರಾದವರು ಕುಂದ ಚತುರ್ಥಿ, ಶ್ರೀ ಪಂಚಮಿ, ರಥಸಪ್ತಮಿ, ದಶಮಿ, ದ್ವಾದಶಿ ಹುಣ್ಣಿಮೆ ದಿನಗಳಲ್ಲಾದರೂ ಅಥವಾ ಅಂತ್ಯ ಪುಷ್ಕರಣಿ ಎಂದು ಹೆಸರಾದ ತ್ರಯೋದಶಿ, ಚತುರ್ದಶಿ, ಪೂರ್ಣಿಮೆಗಳಲ್ಲಾದರೂ ಸ್ನಾನವನ್ನು ಮಾಡಬಹುದು. ಮಾಘಸ್ನಾನ ಮಾಡುವವರಿಗೆ ಸಹಾಯ ಮಾಡುವವರೂ ಮಾಘಸ್ನಾನದ ಫಲವನ್ನು ಪಡೆಯುವರೆಂದು ಹೇಳಲಾಗಿದೆ.

ಮಾಘಸ್ನಾನದಿಂದ ಆಯುರ್‌ವೃದ್ಧಿ, ಭಾಗ್ಯಸಿದ್ಧಿ, ಸತ್ ಸಂತಾನ ಪ್ರಾಪ್ತಿ, ಮಾಘಸ್ನಾನವು ಮಾನವರಿಗೆ ಆರೋಗ್ಯ ಪ್ರದವೂ, ಎಲ್ಲ ಕೋರಿಕೆಗಳನ್ನು ಈಡೇರಿಸಿಕೊಡುವುದೂ, ಸಮಸ್ತ ಶುಭ ಫಲಗಳನ್ನು ನೀಡುವುದೂ, ಸಕಲ ಪಾಪ ಪರಿಹಾರಕವೂ, ಇಹದಲ್ಲಿ ಸೌಖ್ಯವನ್ನೂ,ಪರದಲ್ಲಿ ಮುಕ್ತಿ ಯನ್ನು, ವಿಷ್ಣು ಸಾಯುಜ್ಯವನ್ನೂ ಗಳಿಸಿಕೊಡುವ ಪರಮ ಪವಿತ್ರವೂ ಶ್ರೇಷ್ಠವೂ ಆದ ಸುಲಭವ್ರತ.

ದೇವತೆಗಳು, ಋಷಿಗಳು,ಸತ್ಪುರುಷರು ಶ್ರೇಷ್ಠವಾದ ಮಾಘಮಾಸದ ವ್ರತಗಳನ್ನು ಯುಗಾಂತರಗಳಿಂದಲೂ ಆಚರಿಸಿಕೊಂಡು ಬಂದಿದ್ದಾರೆ. ದುರ್ಲಭವಾದ ಮಾನವಜನ್ಮ ಬಂದಾಗ, ಅವಯವಗಳು ಸಮರ್ಥ ವಾಗಿ ಇರುವಾಗ ವ್ಯರ್ಥವಾಗಿ ಕಾಲ ಹರಣ ಮಾಡದೆ, ಸತ್ಕರ್ಮಾನುಷ್ಠಾನ ಗಳನ್ನೂ ವ್ರತ ನಿಯಮಾಚರಣೆಗಳನ್ನು ಶ್ರದ್ಧಾ ಭಕ್ತಿಗಳಿಂದ ಮಾಡಬೇಕು. ತಿಂಗಳ ವ್ರತವನ್ನು ಆಚರಿಸಿ ಶ್ರೀ ಹರಿಗೆ ಸಮರ್ಪಿಸಬೇಕು. ಮಾಘ ಸ್ನಾನ ನಂತರ ಶ್ರೀ ಹರಿಗೆ ಪಂಚಾಮೃತಾ ಭಿಷೇಕ, ಸಾಲಿಗ್ರಾಮ ಪೂಜೆ, ಗಂಧ ಪುಷ್ಪ, ಧೂಪದೀಪ, ನೈವೇದ್ಯಾದಿ ಪಂಚೋಪಚಾರ ಪೂಜೆಸಲ್ಲಿಸ ಬೇಕು. ಮಲ್ಲಿಗೆ, ಜಾಜಿ, ಕಮಲ, ಆತಸಿ,ಸೇವಂತಿಗೆ,ಗುಲಾಬಿ ಮುಂತಾದ ಸುಗಂಧಭರಿತ ಪುಷ್ಪಗಳಿಂದಲೂ, ತುಳಸಿ, ಬಿಲ್ವಪತ್ರೆ, ದವನ ಮುಂತಾದ ಸುವಾ ಸಿತ ಪತ್ರೆಗಳಿಂದಲೂ, ಪೂಜಿಸಬೇಕು. ಸಾಧ್ಯವಿದ್ದವರು ಲಕ್ಷ ಪುಷ್ಪಾರ್ಚನೆ, ಲಕ್ಷ ತುಳಸೀ ಅರ್ಚನೆ ಮಾಡಬಹುದು. ವಿಷ್ಣು ದೇವಾಲಯಗಳಲ್ಲಿ, ಮನೆಯಲ್ಲಿ ದೇವರ ಸನ್ನಿಧಾನದಲ್ಲಿ, ತುಳಸಿ ಬೃಂದಾವನದ ಬಳಿ ಎಳ್ಳೆಣ್ಣೆ ಅಥವಾ ತುಪ್ಪದ ದೀಪಗಳನ್ನು ಬೆಳಗಿಸಿ ಭಗವಂತನಿಗೆ ಅರ್ಪಿಸಬಹುದು. ಸ್ತ್ರೀಯರು ದೇವರ ಪೂಜಾ ಸ್ಥಾನವನ್ನು ಬಣ್ಣ ಬಣ್ಣದ ರಂಗವಲ್ಲಿಗಳಿಂದ ಅಲಂಕರಿ ಸುವುದು, ದೇವರ ಮನೆಯಲ್ಲಿ ಅಥವಾ ತುಳಸಿ ಬೃಂದಾವನದ ಬಳಿ ಸ್ವಲ್ಪ ಭಾಗ ನೆಲವನ್ನು ಶುದ್ಧಿ ಮಾಡಿ ಶಂಖ, ಚಕ್ರ,ಗದಾ, ಪದ್ಮ, ಸ್ವಸ್ತಿಕ ಮುಂತಾದ ಶುಭ ಚಿಹ್ನೆಗಳನ್ನು ಬರೆದು, ಅದರಲ್ಲೂ ಪದ್ಮಗಳನ್ನು ಬರೆದು ಪೂಜಿಸಬಹುದು. ಲಕ್ಷ, ಸಹಸ್ರ, ನೂರೆಂಟು, ಸಂಖ್ಯೆಗಳಲ್ಲಿ ಬರೆದು ಪೂಜಿಸ ಬಹುದು.

ಮಾಘಮಾಸದ ವಿಶೇಷ ವ್ರತಗಳಲ್ಲಿ ಲಕ್ಷ ಬತ್ತಿ ವ್ರತವೂ ಒಂದು. ಲಕ್ಷ ಬತ್ತಿ ವ್ರತವನ್ನು ಮಾಡಲು ಕಾರ್ತೀಕ, ಮಾಘ, ವೈಶಾಖಗಳು ಬಹು ಪ್ರಶಸ್ತ. ಮಾಘಮಾಸದಲ್ಲಿ ವ್ರತ ಸಮಾಪ್ತಿ ಮಾಡಬೇಕೆಂದಿರುವರು ಎರಡು ತಿಂಗಳ ಮೊದಲೇ ವ್ರತವನ್ನು ಸಂಕಲ್ಪ ಪೂರ್ವಕವಾಗಿ ಪ್ರಾರಂಭಿಸಬೇಕು. ಪರಿಶುದ್ಧವಾಗಿ ಕುಳಿತು ಬತ್ತಿಗಳನ್ನು ಮಾಡಬೇಕು. ಬತ್ತಿಗಳನ್ನು ಬಿಳ್ಳಯತುಪ್ಪ ಅಥವಾ ಎಳ್ಳೆಣ್ಣೆಯಲ್ಲಿ ನೆನಸಿರಬೇಕು. ದಿನವೂ ಸಹಸ್ರ ಬತ್ತಿ ಗಳಿಂದ ಶ್ರೀ ಹರಿಗೆ ನೀರಾಜನ ಮಾಡಬೇಕು.ಮಾಘಸುದ್ಧ ಹುಣ್ಣಿಮೆಯಂದು ವ್ರತ ಸಮಾಪ್ತಿ ಮಾಡಿ ವ್ರತದ ಪೂರ್ಣ ಫಲ ಶುದ್ಧಿ ಗಾಗಿ ಉದ್ಯಾಪನೆ ಮಾಡಿ ಕಂಚಿನ ಪಾತ್ರೆಯಲ್ಲಿ ತುಪ್ಪವನ್ನು ತುಂಬಿ ಬತ್ತಿ ಗಳೊಡನೆ ಸತ್ಪಾತ್ರರಿಗೆ ದಾನ ಮಾಡಬೇಕು.



ಮಾಘಮಾಸದಲ್ಲಿ ನಿತ್ಯವೂ 'ಮಾಧವಸ್ತವರಾಜ' ಸ್ತೋತ್ರ ಪಠಣೆ ಬಹು ಶ್ರೇಷ್ಠ, ವಿಷ್ಣು ಸಹಸ್ರನಾಮ, ಭಗವದ್ಗೀತೆ, ಭಾಗವತ ಮಾಘ ಮಾಸ ಮಹಾತ್ಮೆ ಮುತಾದ ಸದ್ಗ್ರಂಥ ಗಳನ್ನು ಪ್ರತಿ ನಿತ್ಯವೂ ಸಾಧ್ಯವಾದ ಮಟ್ಟಿಗೆ ಪಾರಾಯಣ ಮಾಡುವುದು. ಮಾಘಮಾಸ ಮಹಾತ್ಮೆಯ ಪಠಣ, ಶ್ರವಣ, ಪ್ರವಚನ ಮಾಡುವುದು ವಿಹಿತ. ಧಾತ್ರಿ ಎಂದು ಹೆಸರಾದ

ನೆಲ್ಲಿಕಾಯಿಗಳ ಹಾರವನ್ನು ದೇವರಿಗೆ ಹಾಕುವುದು, ದೇವರ ಮುಂದೆ ನೆಲ್ಲಿಕಾಯಿ (ಆಮಲಕಿ) ಯ ಮೇಲೆ ತುಪ್ಪ ಬತ್ತಿಗಳನ್ನಿಟ್ಟು ದೀಪ ಹಚ್ಚುವುದು ಮಂಗಳಾರತಿ ಮಾಡುವುದು ವಿಶೇಷ ಫಲ ನೀಡುತ್ತದೆ. ವಿಷ್ಣ ಭಕ್ತರಾದ ದಂಪತಿಗಳನ್ನು, ದಾನ, ಭೋಜನಾದಿ ಗಳಿಂದ ಸತ್ಕರಿಸುವುದು, ನಿತ್ಯ ದಾನ, ದಂಪತಿ ಪೂಜೆ ಇವುಗಳೂ ವಿಹಿತವಾದ ವ್ರತಗಳು.

ಮಾಘಮಾಸದಲ್ಲಿ ಹಲವಾರು ಬಗೆಯ ಆಹಾರ ನಿಯಮಗಳನ್ನು ಪಾಲಿಸುವ ವ್ರತಗಳೂ ಉಂಟು. ಏಕಭುಕ್ತ, ನಕ್ತಭೋಜನ ಅಯಾಚಿತ, ಮೌನ ಭೋಜನ, ಫಲಾಹರ, ದುಗ್ಧಾಹಾರ, ಮುತ್ತುಂಗ, ಹಲಸು, ಬಾಳೆ ಮುಂತಾದ ಪತ್ರಾವಳಿಗಳಲ್ಲಿ ಭೋಜನ, ಇಷ್ಟವಾದ ಪದಾರ್ಥಗಳನ್ನು ಒಂದು ತಿಂಗಳು ತ್ಯಾಗ ಮಾಡುವುದು, ನಿಷಿದ್ಧ ಪದಾರ್ಥ ಗಳನ್ನು ಭೋಜನ ತಿನ್ನದಿರುವುದು ಮುಂತಾಗಿ ಅನೇಕ ಬಗೆಯ ಆಹಾರ ನಿಯಮಗಳನ್ನು ಆಚರಿಸುತ್ತಾರೆ.ಕಡೆಯಲ್ಲಿ ಬ್ರಾಹ್ಮಣ ಸುವಾಸಿನೀ ಭೋಜನ ಯಥಾಶಕ್ತಿ ಮಾಡಿಸುತ್ತಾರೆ. ಲಕ್ಷ ಪ್ರದಕ್ಷಿಣಿ, ಲಕ್ಷ ನಮಸ್ಕಾರ, ಲಕ್ಷಪುಷ್ಪಾರ್ಚನೆ ಮುಂತಾಗಿ ಅನೇಕ ವಿಧವಾದ ಲಕ್ಷಸಂಖ್ಯಾಕ ವ್ರತಗಳನ್ನು ಕೈಗೊಳ್ಳ ಬಹುದು. ಈ ಎಲ್ಲ ವ್ರತಗಳಿಗೂ ವ್ರತ ಸಮಾಪ್ತಿಯ ನಂತರ ಸಂಪೂರ್ಣ ಫಲಪ್ರಾಪ್ತಿಗಾಗಿ ಉದ್ಯಾಪನೆ ಮಾಡಿ ಆಯಾ ವ್ರತಗಳಿಗೆ ತಕ್ಕಂತಹ ವಸ್ತುಗಳನ್ನು ದಾನ ಮಾಡಬೇಕು. ಹೀಗೆ ಮಾಘಮಾಸದ ವ್ರತಗಳು ಅನೇಕಾನೇಕವಾಗಿವೆ. ಒಂದೇ ಬಾರಿಗೆ ಎಲ್ಲಾ ವ್ರತಗಳ್ಳು ಕೈಗೊಳ್ಳುವುದು ದುಷ್ಕರ. ಸಾಧ್ಯವಾದಾಗ ಸಾಧ್ಯವಾದ ವ್ರತಗಳನ್ನು ಕೈಗೊಳ್ಳಬಹುದು.

ಮಾಘಮಾಸದಲ್ಲಿ ವಿವಿಧ ರೀತಿಯ ದಾನಗಳಿಗೆ ವಿಶೇಷ ಪ್ರಾಶಸ್ತ್ಯ ಹೇಳಲ್ಪಟ್ಟಿದೆ. ಮಾಘ ಶುದ್ಧ ತ್ರಯೋದಶಿ ಯಂದು ಬಂಗಾರದ ಮಂಗಳಸೂತ್ರ ಅರಿಶಿನ ಕುಂಕುಮ ಸಹಿತವಾದ ಬೆಳ್ಳಿಯ ಬಟ್ಟಲುಗಳು, ಸೀರೆ ಕುಪ್ಪುಸ, ಧಾನ್ಯ ಗಳು,ಫಲಗಳು ದಕ್ಷಿಣೆಗಳಿಂದ ತುಂಬಿದ ಮೊರದ ಬಾಗಿನ ವನ್ನು ಪುತ್ರವತಿಯರಾದ ಸುಮಂಗಲಿಯರಿಗಿತ್ತು ನಮಸ್ಕರಿಸಿ ಆಶೀರ್ವಾದ ಪಡೆಯುವುದರಿಂದ ದೀರ್ಘ ಸೌಮಂಗಲ್ಯ, ಸತ್ ಸಂತಾನ ಪ್ರಾಪ್ತಿಯೆಂದು ಹೇಳಲಾಗಿದೆ. ಮಾಘ ಶುದ್ಧ ಹುಣ್ಣಿಮೆಯಂದು ವಿಷ್ಣು ಭಕ್ತರಾದ ದಂಪತಿಗಳನ್ನು ಆಹ್ವಾನಿಸಿ, ಅವರೇ ಲಕ್ಷ್ಮೀನಾರಾಯಣ ಸ್ವರೂಪರೆಂದು ಭಾವಿಸಿ ಯೋಗ್ಯ ಆಸನಗಳಲ್ಲಿ ಕುಳ್ಳಿರಿಸಿ, ಅರ್ಘ್ಯ ಪಾದ್ಯಾದಿಗಳಿಂದ ಸತ್ಕರಿಸಿ, ವಸ್ತ್ರ ಆಭರಣ, ಗಂಧ, ಪುಷ್ಪ, ಮಂಗಳ ದ್ರವ್ಯಗಳನ್ನು, ಇನ್ನಿತರ ಭೋಗ ವಸ್ತುಗಳನ್ನು ಯಥಾ ಶಕ್ತಿ ದಕ್ಷಿಣೆಯೊಡನೆ ಕೊಟ್ಟು ಭೋಜನ ತಾಂಬೂಲಗಳಿಂದ ಪೂಜಿಸಬೇಕು. ಈ ವ್ರತವನ್ನು ಮಾಘ ಶುದ್ಧ ಹುಣ್ಣಿಮೆಯೆಂದು ಪ್ರಾರಂಭಿಸಿ ಒಂದು ವರ್ಷ ಪ್ರತಿ ಹುಣ್ಣಿಮೆಯೂ ಆಚರಿಸುವುದು ವಿಶೇಷ ಫಲಕಾರಿ. ಮಾಘ ಸ್ನಾನಾನಂತರ ವಸ್ತ್ರದಾನ, ನಾನಾ ವಿಧವಾದ ಭೋಗ ವಸ್ತುಗಳು, ಆಹಾರ ಪದಾರ್ಥಗಳು (ಅಕ್ಕಿ, ಬೇಳೆಗಳು, ಬೆಲ್ಲ, ತುಪ್ಪ, ಹಾಲು, ಇತ್ಯಾದಿ) ನೆಲ್ಲಿಕಾಯಿ, ಎಳ್ಳು ಕಂಬಳಿ , ತುಪ್ಪ ತುಂಬಿದ ಕಂಚಿನ ಪಾತ್ರೆ, ದೀಪದಾನ, ವಿವಿಧ ಬಗೆಯ ಹಣ್ಣು ಗಳು ಮುಂತಾದ ವಸ್ತುಗಳ ದಾನ ಹೇಳಲ್ಪಟ್ಟಿದೆ. ಗ್ರಂಥದಾನ ವಿಶೇಷವಾಗಿ ಭಾಗವತ, ಭಗವದ್ಗೀತೆ, ಮಾಘಮಾಸ ಮಹಾತ್ಮೆ ಮುಂತಾದ ಗ್ರಂಥಗಳ ದಾನ. ಮಾಘಮಾಸದ ವ್ರತಗಳ ಸಂಪೂರ್ಣ ಫಲ ಸಿದ್ಧಿಗಾಗಿ ಆದಿ, ಮಧ್ಯ, ಅಥವಾ ಅಂತ್ಯದಲ್ಲಿ ಮಾಧವನ ಪ್ರತಿಮೆಯ ದಾನ. ಯಾರಿಗೆ ಯಾವ ಪದಾರ್ಥವು ಉಪಯೋಗಕ್ಕೆ ಬರುವುದೋ ಆಯಾ ಪದಾರ್ಥಗಳನ್ನು ಅವರ ವರಿಗೆ ದಾನ ನೀಡಬೇಕು. ಸತ್‌ಪಾತ್ರರಿಗೆ ಸತ್ ಸಮಯದಲ್ಲಿ ನೀಡಿದ ದಾನವು ಇಡೀ ವಂಶವನ್ನು ಕಾಪಾಡುತ್ತೇವೆ.

ಮಾಘಮಾಸವು ಸೂರ್ಯಾರಾಧನೆಗೂ ಬಹು ಪ್ರಶಸ್ತ ವೆನಿಸಿದೆ. ಮಾಘದಲ್ಲಿ ಸೂರ್ಯನು ಉತ್ತರಾಭಿಮುಖವಾಗಿ ತಿರುಗುವುದರಿಂದ ಆಗ ಅವನ ಆರಾಧನೆ ಮಾಡುವ ವರಿಗೆ ಶೀಘ್ರವಾಗಿ ವರಪ್ರದಾನ ಮಾಡುವನೆಂದು ಪ್ರತೀತಿ. ಬ್ರಾಹ್ಮೀ ಮೂಹೂರ್ತದಲ್ಲಿ ಸ್ನಾನಾನಂತರ ಸೂರ್ಯೋದಯದ ವೇಳೆಗೆ ಆದಿತ್ಯ ಹೃದಯ ಸೂರ್ಯಾಷ್ಟಕ ಮುಂತಾದ ದಿವ್ಯ ಸ್ತೋತ್ರ ಗಳಿಂದಲೂ, ಸೂರ್ಯ ನಮಸ್ಕಾರಗಳಿಂದಲೂ, ರಕ್ತ ಚಂದನ, ಕೆಂಪುಬಣ್ಣದ ಅಕ್ಷತೆ ಮತ್ತು ಪುಷ್ಪಗಳಿಂದಲೂ ಪೂಜಿಸಿ ಕಾಮಿತ ವರಗಳನ್ನು ಪಡೆಯಬಹುದು. ಮಾಘಭಾನು ವಾರಗಳು ಸೂರ್ಯಾರಾಧನೆಗೆ ಬಹುಶ್ರೇಷ್ಠವೆಂದು ಪರಿಗಣಿತವಾಗಿದೆ. ಅಂದು ಮಾಘಸ್ನಾನ ಮಾಡಿ ರಾತ್ರಿ ಊಟವನ್ನು ತ್ಯಜಿಸುವ ವ್ರತವೂ ಇದೆ. ಸೂರ್ಯನಾರಾಯಣನ ದೇಗುಲಗಳಿಗೆ ತೆರಳಿ ದರ್ಶನ ಪಡೆಯುವ ಸೂರ್ಯ ಭಕ್ತರೂ ಇದ್ದಾರೆ. ರಥ ಸಪ್ತಮಿ ಆರೋಗ್ಯದ ಅಧಿದೇವತೆಯಾದ ಸೂರ್ಯನ ಜನ್ಮದಿನ ವೆಂದೂ, ಅವನು ರಥವನ್ನೇರಿ ಸಂಚಾರಕ್ಕೆ ಹೊರಟ ದಿನ ವೆಂದೂ ಹೇಳಲಾಗಿದೆ. ಅಂದು ಅವನನ್ನು ವಿಶೇಷವಾಗಿ ಪೂಜಿಸಬೇಕು.ಎಳ್ಳನ್ನೂ, ನೆಲ್ಲಿಕಾಯಿಯ ಪುಡಿಯನ್ನೂ ಮೈಗೆ ಹಚ್ಚಿ ಕೊಂಡು ಸ್ನಾನ ಮಾಡಬೇಕು. ಸೂರ್ಯನ ಗಿಡವೆಂದು

ಪ್ರಖ್ಯಾತವಾದ ಆರ್ಕಪಣಗಳನ್ನು (ಎಕ್ಕದ ಎಲೆಗಳನ್ನು) ಏಳು ಸಂಖ್ಯೆಯಲ್ಲಿ ಭುಜದ ಮೇಲೆ ಧರಿಸಿ ಸ್ನಾನ ಮಾಡಬೇಕು.

ಸಪ್ತ ಸಪ್ತ ಮಹಾಸಪ್ತ ಸಪ್ತಾಶ್ವರಥ ಭೂಷಣ
ಸಪ್ತಾರ್ಕ ಪರ್ಣ ಮಾದಾಯ ಸಪ್ತಮ್ಯಾಂ ಸ್ನಾನ ಮಾಚರೇತ್॥

ಸ್ತ್ರೀಯರು ತುಳಸಿ ಬೃಂದಾವನದ ಬಳಿ ಸೂರ್ಯನ ರಥವನ್ನು ರಂಗವಲ್ಲಿಯಿಂದ ಬರೆದು ನವಗ್ರಹ ಧಾನ್ಯಗಳಿನ್ನಿಟ್ಟು ರಥ ಮಧ್ಯದಲ್ಲಿ ಸೂರ್ಯ ಮಂಡಲವನ್ನು ಬರೆದು ಅದನ್ನು ಕೆಂಪುಹೂ, ಕೆಂಪು ಅಕ್ಷತೆಗಳಿಂದ ಪೂಜಿಸಿ ಪಾಯಸ ನಿವೇದಿಸುವರು. ಸೂರ್ಯಾರಾಧನೆ ಸರ್ವಸಂಪತ್ಪ್ರದಾಯಕವೆಂದೂ ಸರ್ವರೋಗ ಪರಿಹಾರಕವೆಂದೂ ಪುರಾಣಗ್ರಂಥಗಳು ಮುಕ್ತ ಕಂಠದಿಂದ ಪ್ರಶಂಸಿವೆ.

ಮಾಘ ಶುದ್ಧ ಪಾಡ್ಯ ಹಾಗೂ ತದಿಗೆಯಿಂದ ಫಾಲ್ಗುಣ ಶುದ್ಧ ತದಿಗೆಯವರೆಗೂ ಮಹಿಳೆಯರು ಮಾಘ ಗೌರಿವ್ರತವನ್ನು ಆಚರಿಸುವರು. ಅರಿಶಿನದಲ್ಲಿ ಹಾಗೂ ಮರಳಿನಲ್ಲಿ ಕೋನಾಕೃತಿಯ ಗೌರಿಬಿಂಬಗಳನ್ನು ಮಾಡಿಟ್ಟುಕೊಂಡು, ಜೊತೆಯಲ್ಲಿ ಕಲಶದಲ್ಲಿ ಗೌರಿಯನ್ನು ಆವಾಹಿಸಿ ನಿತ್ಯ ಗೌರಿಯೊಡನೆ ಪಂಚಗೌರಿಗಳನ್ನು ಸ್ಥಾಪಿಸುವರು. ಬ್ರಾಹ್ಮೀ ಮುಹೂರ್ತದಲ್ಲೇ ಎದ್ದು ಮಂಗಳ ಸ್ನಾನ ಮಾಡಿ ಮಡಿ ಬಟ್ಟೆಗಳನ್ನುಟ್ಟು, ಮಾಘದ ಗೌರಿಯನ್ನು ಅರಿಶಿನ ಕುಂಕುಮ ಗಂಧ, ಪುಷ್ಪ, ಧೂಪ, ದೀಪಾದಿಗಳಿಂದ ಪೂಜಿಸಿ ನೈವೇದ್ಯ ಆರತಿಸಲ್ಲಿಸುವರು. ವ್ರತಕತೆಯನ್ನು ಪಠಿಸುವರು. ನದಿಗಳಲ್ಲಿ ಸ್ನಾನಕ್ಕೆ ಹೋದಾಗ ನದಿಯ ಮರಳನ್ನು ತೆಗೆದುಕೊಂಡು ಪಂಚಗೌರಿಗಳನ್ನು ಮಾಡಿಟ್ಟುಕೊಂಡು ಪೂಜೆಸಲ್ಲಿಸುವರು.ಮಾಘಗೌರಿ ವ್ರತವನ್ನು ಮಾಡುವಾಗ ಸೂರ್ಯೋದಯಕ್ಕೆ ಮುನ್ನ ಪೂಜಿಸಬೇಕು. ಪೂಜಿಸುವಾಗ ಮೌನದಿಂದಿರಬೇಕು. ರಾತ್ರಿ ಸೂರ್ಯಾಸ್ತಕ್ಕೆ ಮುನ್ನವೇ ಊಟಮಾಡಬೇಕು ಮುಂತಾದ ನಿಯಮಗಳನ್ನು ಪಾಲಿಸುತ್ತಾರೆ.ಅವರವರ ಮನೆಗಳಲ್ಲಿ ಹಿರಿಯರು ಅನುಸರಿಸುತ್ತಿದ್ದ ಪದ್ಧತಿಗಳನ್ನು, ನಿಯಮಗಳನ್ನು ಪರಿಪಾಲಿಸಬಹುದು. ಮಾಸಪೂರ್ತಿ ಪೂಜಿಸಿ ಫಾಲ್ಗುಣ ತದಿಗೆಯ ನಂತರ ಸುಮಂಗಲಿಯರಿಗೆ ಮೃಷ್ಟಾನ್ನ ಭೋಜನ, ವಸ್ತ್ರಾಲಂಕಾರ ಸಹಿತ ಮೊರದ ಬಾಗಿನಗಳನ್ನಿತ್ತು ವ್ರತ ಸಮಾಪ್ತಿ ಮಾಡಿ ಗೌರಿಯನ್ನು ವಿಸರ್ಜಿಸುತ್ತಾರೆ. ಸ್ತ್ರೀಯರಿಗೆ ಬಹು ಪ್ರಿಯವಾದ ವ್ರತವಿದು.

ಮಾಘಮಾಸದಲ್ಲಿ ಅಶ್ವತ್ಥವೃಕ್ಷದ ಪೂಜೆಗೆ ವಿಶೇಷ ಮಹತ್ವವುಂಟು. ಸ್ತ್ರೀಯರು ನಿತ್ಯ ಪೂಜೆಯ ನಂತರ ಅಶ್ವತ್ಥ ಕಟ್ಟೆಗೆ ತೆರಳಿ ವೃಕ್ಷಕ್ಕೆ ನೀರೆರೆದು, ರಂಗವಲ್ಲಿಯನ್ನಿಟ್ಟು, ದೀಪಾರಾಧನೆ ಮಾಡಿ, ಅರಿಶಿನ ಕುಂಕುಮ, ಅಕ್ಷತೆ, ಪುಷ್ಪಾದಿ ಮಂಗಳ ದ್ರವ್ಯಗಳಿಂದ ಪೂಜಿಸಿ, ನೈವೇದ್ಯವನ್ನರ್ಪಿಸಿ ,ಹಾಗೆಯೇ ಬಳಿಯಲ್ಲಿರುವ ನಾಗರಕಲ್ಲುಗಳಿಗೂ ಪೂಜೆಸಲ್ಲಿಸಿ ಪ್ರದಕ್ಷಿಣೆ ನಮಸ್ಕಾರಗಳನ್ನರ್ಪಿಸುವುದು ಪ್ರಾಚೀನ ಕಾಲದಿಂದಲೂ ನಡೆದು ಬಂದ ಸಂಪ್ರದಾಯ.

ಹೀಗೆ ಮಾಘಮಾಸದ ಮಹಿಮೆ ಅಪಾರವಾದುದು. ಅವರ್ಣನೀಯವಾದುದು. ಹೇಳಿದಷ್ಟು, ಬರೆದಷ್ಟು ಮುಗಿಯುವಂತಿಲ್ಲ. ಶಾಸ್ತ್ರ ಗ್ರಂಥಗಳಲ್ಲಿ, ಪುರಾಣಗಳಲ್ಲಿ ಮಾಘಮಾಸದ ಮಹಿಮೆ ಮುಕ್ತಕಂಠದಿಂದ ಪ್ರಶಂಸಿಸ ಲ್ಪಟ್ಟಿದೆ. ಪವಿತ್ರವಾದ, ಪುಣ್ಯಪ್ರದವಾದ, ಮಾಘಮಾಸವನ್ನು ವ್ರತನಿಯಮಾಚರಣೆ ಮಾಡದೆ ವ್ಯರ್ಥವಾಗಿ ಕಳೆಯಬಾರದು ಮಾಘಮಾಸ ವ್ರತಗಳನ್ನು ಸರ್ವರೂ ಅವರವರ ಶಕ್ತ್ಯಾನುಸಾರ ಆಚರಿಸಿ ಪುಣ್ಯಭಾಗಿಗಳಾಗಬೇಕೆಂಬುದೇ ಸಜ್ಜನರಲ್ಲಿ ಸವಿನಯ ಪ್ರಾರ್ಥನೆ.


# ಹೆಲ್ಮೆಟ್ ತಪ್ಪದೇ ಧರಿಸಬೇಕು



**ತಿರುಪತಿಯಿಂದ ತಿರುಮಲೆಗೆ, ತಿರುಮಲೆಯಿಂದ ತಿರುಪತಿಗೆ ದ್ವಿಚಕ್ರವಾಹನದಲ್ಲಿ ಹೋಗಬಯಸುವ ಪ್ರಯಾಣಿಕರು, ಭಕ್ತರು ತಪ್ಪದೇ ಹೆಲ್ಮೆಟ್‌ನ್ನು ಧರಿಸಬೇಕು. ಇದರಿಂದ ಅಪಘಾತಗಳನ್ನು ತಡೆಯಬಹುದು.**

**ಹೆಲ್ಮೆಟ್ ಧರಿಸಿ ವಾಹನ ನಡೆಸಿ**

ಧಾರಾವಾಹಿಕ

### ನಿತ್ಯೋತ್ಸವಗಳು

ಪ್ರತೀ ದಿನ ಬೆಳಿಗ್ಗೆಯಿಂದ ರಾತ್ರಿಯವರೆಗೂ ನಡೆಯುವ ಉತ್ಸವಗಳೇ ನಿತ್ಯೋತ್ಸವಗಳು

### ಸುಪ್ರಭಾತ

ಪ್ರತೀದಿನ ಬೆಳಗಿನ ಝಾವ ನಡೆಯುವ ಸೇವೆಯೇ ಸುಪ್ರಭಾತ."ಕೌಸಲ್ಯಾ ಸುಪ್ರಜಾ ರಾಮಾ...." ಎಂದು ಸುಪ್ರಭಾತ ಶ್ಲೋಕಗಳನ್ನು ಅರ್ಚಕರು ಪಠಿಸುತ್ತಿರುವಾಗ ಬಂಗಾರದ ಬಾಗಿಲನ್ನು ತೆರೆದು ಶ್ರೀ ವೇಂಕಟೇಶ್ವರಸ್ವಾಮಿಯನ್ನು ಎಬ್ಬಿಸುತ್ತಾರೆ.

### ತೋಮಾಲಲೆಸೇವೆ

ಸುಪ್ರಭಾತ ಸೇವೆಯ ನಂತರ ಶ್ರೀ ವೇಂಕಟೇಶ್ವರ ಸ್ವಾಮಿಯವರ ಮೂಲಮೂರ್ತಿಗೆ,ಉತ್ಸವಮೂರ್ತಿಗಳಿಗೆ ನಡೆಯುವ ಪುಷ್ಪಾಲಂಕರಣವನ್ನು "ತೋಮಾಲೆಸೇವೆ" ಎನ್ನುತ್ತಾರೆ.ಸುವಾಸನೆಯಿಂದ ಕೂಡಿದ ಬಣ್ಣ ಬಣ್ಣದ ಹೂಗಳನ್ನು, ತುಲಸೀಮಾಲೆಯನ್ನು ಅಲಂಕರಿಸುತ್ತಾರೆ.

### ಕೊಲುವು (ಆಸ್ಥಾನ)

ಪ್ರತೀದಿನ ಬಂಗಾರದ ಸಿಂಹಾಸನದಲ್ಲಿ ನಡೆಯುವ "ಕೊಲುವು" (ಆಸ್ಥಾನ)ದಲ್ಲಿ ಸ್ವಾಮಿಯವರಿಗೆ ಆ ದಿನದ ಪಂಚಾಂಗ ಶ್ರವಣದೊಂದಿಗೆ ಹಿಂದಿನ ದಿನ ದೇವಾಲಯಕ್ಕೆ ಬಂದ ಆದಾಯವ್ಯಯಗಳನ್ನು ಒಪ್ಪಿಸುತ್ತಾರೆ.

### ಸಹಸ್ರನಾಮಾರ್ಚನೆ

ನಂತರ ಶ್ರೀನಿವಾಸನಿಗೆ ತುಳಸಿ ದಳಗಳೊಂದಿಗೆ ಸಹಸ್ರನಾಮಾ ರ್ಚನೆ ನಡೆಯುತ್ತದೆ. ನಂತರ ನೈವೇದ್ಯವನ್ನು ಮಾಡು ತ್ತಾರೆ.

### ನಿತ್ಯಕಲ್ಯಾಣೋತ್ಸವ

ಶ್ರೀದೇವಿ ಭೂ ದೇವಿ ಸಮೇತನಾಗಿ ಶ್ರೀ ಮಲೆಯಪ್ಪ ಸ್ವಾಮಿಯವರಿಗೆ ಮಧ್ಯಾಹ್ನ 12 ಗಂಟೆಗೆ ನಿತ್ಯ ಕಲ್ಯಾಣೋತ್ಸವನ್ನು ನಿರ್ವಹಿಸುತ್ತಾರೆ.

ಪ್ರತೀದಿನ ನಡೆಯುವ ಕಲ್ಯಾಣೋತ್ಸವ ದಿಂದಲೇ ತಿರುಮಲೆ ಕ್ಷೇತ್ರಕ್ಕೆ "ನಿತ್ಯಕಲ್ಯಾಣ ಹಸಿರುತೋರಣ" ಎಂಬ ಹೆಸರು ಬಂದಿದೆ.

### ಡೋಲೋತ್ಸವ

ಶ್ರೀನಿವಾಸನ ಆಲಯದಲ್ಲಿ ಇರುವ ಕನ್ನಡಿಯ ಮಂಟಪದಲ್ಲಿ ಮಧ್ಯಾಹ್ನ 2 ಗಂಟೆಗೆ ಸ್ವಾಮಿಯವರಿಗೆ ಡೋಲೋತ್ಸವ ನಡೆಯುತ್ತದೆ. ನಿರ್ಧಾರಿತ ಶುಲ್ಕವನ್ನು ನೀಡಿದ ಭಕ್ತರಿಗಾಗಿ ಮಾತ್ರಾ ಈ ಸೇವೆಯನ್ನು ನಿರ್ವಹಿಸುತ್ತಾರೆ.

### ಅರ್ಜಿತ ಬ್ರಹ್ಮೋತ್ಸವ

ವಸಂತೋತ್ಸವು ಆಲಯದ ಹೊರಗೆ ಇರುವ ವೈಭವ ಮಂಟಪದಲ್ಲಿ ನಿರ್ಧಾರಿತ ಶುಲ್ಕವನ್ನು ಸಲ್ಲಿಸಿದ ಭಕ್ತರಿಗಾಗಿ ಮಧ್ಯಾಹ್ನ 3 ಗಂಟೆಗೆ ಸ್ವಾಮಿಯವರಿಗೆ ಬ್ರಹ್ಮೋತ್ಸವ, ವಸಂತೋತ್ಸವವನ್ನು ನೆರವೇರಿಸುತ್ತಾರೆ.

### ಸಹಸ್ರದೀಪಾಲಂಕರಣ ಸೇವೆ

ಪ್ರತೀದಿನ ಸಂಜೆ 5 ಗಂಟೆಗೆ ದೇವಾಲಯದ ಹೊರಗೆ ಇರುವ ಮಂಟಪದಲ್ಲಿ ಶ್ರೀದೇವಿ ಭೂದೇವಿ ಸಮೇತ ಮಲೆಯಪ್ಪ ಸ್ವಾಮಿಗೆ ಸಹಸ್ರದೀಪಾಲಂಕರಣ ಸೇವೆ ನಡೆಯುತ್ತದೆ.ಈ ಸೇವೆಯ ನಂತರ ದೇವರನ್ನು ಆಲಯದ ಬೀದಿಗಳಲ್ಲಿ ಮೆರವಣಿಗೆ ಮಾಡಿಸುತ್ತಾರೆ.

### ಏಕಾಂತ ಸೇವೆ

ತಿರುಮಲೆಯ ಆಲಯದಲ್ಲಿ ಪ್ರತಿದಿನ ರಾತ್ರಿ ಕೊನೆಯದಾಗಿ ನಡೆಯುವ ಸೇವೆ "ಏಕಾಂತಸೇವೆ." ಈ ಸೇವೆ ನಡೆದ ನಂತರ ಸ್ವಾಮಿಯವರ ಆಲಯವನ್ನು ಮುಚ್ಚುತ್ತಾರೆ.

ಇವೇ ಪ್ರತೀದಿನವೂ ನಡೆಯುವ ನಿತ್ಯೋತ್ಸವಗಳು.




### ವಾರೋತ್ಸವಗಳು

**ಶ್ರೀನಿವಾಸನಿಗೆ ವಾರಕ್ಕೆ ಒಮ್ಮೆ ಮಾತ್ರವೇ ನಡೆಯುವ ಉತ್ಸವಗಳು:**

**ವಿಶೇಷ ಪೂಜೆ:**

ಪ್ರತೀ ಸೋಮವಾರ ಬೆಳಗ್ಗೆ 6 ಗಂಟೆಗೆ

ಮೂಲ: ಜೆ. ಬಾಲಸುಬ್ರಹ್ಮಣ್ಯಂ
ಅನುವಾದ : ಶ್ರೀಮತಿ ಬಿ.ಪದ್ಮಜ

ಶ್ರೀದೇವಿ ಭೂದೇವಿಯರೊಂದಿಗೆ ಮಲೆಯಪ್ಪ ಸ್ವಾಮಿಗೆ ಈ ವಿಶೇಷ ಪೂಜೆ ನಡೆಯುತ್ತದೆ.

**ಅಷ್ಟದಳಪಾದ ಪದ್ಮಾರಾಧನೆ**

ಪ್ರತೀ ಮಂಗಳವಾರ ಬೆಳಗ್ಗೆ 6 ಗಂಟೆಗೆ ಶ್ರೀನಿವಾಸನ ಮೂಲ ಮೂರ್ತಿಗೆ ಬಂಗಾರದ ಪದ್ಮಗಳಿಂದ ನಡೆಯುವ ಅರ್ಚನೆ ಸೇವೆಯೇ ಇದು.

**ಸಹಸ್ರ ಕಲಾಶಾಬಿಷೇಕ**

ಪ್ರತೀ ಬುಧವಾರ-ಬಂಗಾರದ ಬಾಗಿಲಿನ ಮುಂದೆ ಭೋಗ ಶ್ರೀನಿವಾಸನಿಗೆ ಶ್ರೀನಿವಾಸನಿಗೆ, ಶ್ರೀದೇವಿ ಭೂದೇವಿ ಸಮೇತನಾದ ಶ್ರೀ ಮಲೆಯಪ್ಪಸ್ವಾಮಿಗೆ, ಸೇನಾಧಿಪತಿ ವಿಷ್ವಕ್ಸೇನರಿಗೆ ನಡೆಯುವ ಸೇವೆಯೇ ಈ ಸಹಸ್ರಕಲಾಶಾಭಿಷೇಕ.

**ತಿರುಪ್ಪಾವಡ ಸೇವೆ**

ಪ್ರತೀ ಗುರುವಾರ ಬೆಳಗ್ಗೆ 6 ಗಂಟೆಗೆ ಶ್ರೀ ಸ್ವಾಮಿಯ ಮೂಲ ಮೂರ್ತಿಗೆ ನಡೆಯುವ ನೈವೇದ್ಯ ಸೇವೆ ಇದು . ಬಂಗಾರದ ಬಾಗಿಲಿನ ಮುಂದೆ ಶ್ರೀ ಸ್ವಾಮಿಯ ಎದಿರಾಗಿ ಪುಳಿಯೋಗರೆಯ ರಾಶಿಯನ್ನು ನೈವೇದ್ಯವಾಗಿ ಸಮರ್ಪಿಸುತ್ತಾರೆ. ಅದೇ ತಿರುಪ್ಪಾವಡ ಸೇವೆ.

**ಪೂಲಂಗೀ ಸೇವೆ**

ಪ್ರತೀ ಗುರುವಾರ ರಾತ್ರಿ 8 ಗಂಟೆಗೆ ಸ್ವಾಮಿಯವರ ಮೂಲ ಮೂರ್ತಿಗೆ ಸಂಪೂರ್ಣವಾಗಿ ಪುಷ್ಪಾಲಂಕರಣ ಸೇವೆ ನಡೆಯುತ್ತದೆ. ಇದೇ ಪೂಲಂಗಿ ಸೇವೆ.

**ಶುಕ್ರವಾರಾಭಿಷೇಕ**

ಶ್ರೀ ವೇಂಕಟೇಶ್ವರಸ್ವಾಮಿಯ ಮೂಲ ಮೂರ್ತಿಗೆ ಪ್ರತಿ ಶುಕ್ರವಾರ ಬೆಳಗಿನ ಝಾವ 5 ಗಂಟೆಗೆ ಹಸುವಿನ ಹಾಲು, ಆಕಾಶಗಂಗೆಯ ತೀರ್ಥ, ಪುನುಗು, ಮುಂತಾದ ಸುಗಂಧ ದ್ರವ್ಯಗಳೊಂದಿಗೆ ಅಭಿಷೇಕ ನಡೆಯುತ್ತದೆ.

**ನಿಜಪಾದ ದರ್ಶನ**

ಪ್ರತಿ ಶುಕ್ರವಾರ ಅಭಿಷೇಕದ ನಂತರ ಸ್ವಾಮಿಯವರ ಮೂಲ ಮೂರ್ತಿಯ ನಿಜಪಾದ ದರ್ಶನ ಮಾಡಿಕೊಳ್ಳುವಂತಹ ಸೇವೆ ಇದು.

ಇವೂ ವಾರಕ್ಕೆ ಒಮ್ಮೆ ತಿರುಮಲೆಯಲ್ಲಿ ನಡೆಯುವ ವಾರೋತ್ಸವಗಳು.

**ಮಾಸೋತ್ಸವಗಳು**

ತಿರುಮಲೆಯ ಶ್ರೀನಿವಾಸನಿಗೆ ತಿಂಗಳಿಗೆ ಒಮ್ಮೆ ಮಾತ್ರಾ ನಡೆಯುವ ಉತ್ಸವಗಳು ಇವು. ಪ್ರತಿ ತಿಂಗಳು ಆಯಾ ನಕ್ಷತ್ರಗಳ ದಿನಗಳಲ್ಲಿ ಬರುತ್ತವಾದ್ದರಿಂದ ಅವನ್ನು ನಕ್ಷತ್ರೋತ್ಸವಗಳೆನ್ನುತ್ತಾರೆ.

**ರೋಹಿಣೀ ನಕ್ಷತ್ರೋತ್ಸವ**

ಶ್ರೀ ಕೃಷ್ಣನ ಅವತಾರ ನಕ್ಷತ್ರ ರೋಹಿಣಿ. ಪ್ರತಿ ತಿಂಗಳು ರೋಹಿಣಿ ನಕ್ಷತ್ರದಂದು ಸಂಜೆ ಶ್ರೀನಿವಾಸನ ಆಲಯದಲ್ಲಿರುವ ರುಕ್ಮಿಣಿ ಶ್ರೀ ಕೃಷ್ಣನ ಉತ್ಸವ ಮೂರ್ತಿಗಳಿಗೆ, ಸಹಸ್ರದೀಪಾಲಂಕರಣ ಸೇವೆ, ಮೆರವಣಿಗೆ ನಡೆಯುತ್ತದೆ.

**ಆರ್ದ್ರ ನಕ್ಷತ್ರೋತ್ಸವ**

ಭಗವದ್ರಾಮಾನುಜರ ಜನ್ಮ ನಕ್ಷತ್ರ ಅರುದ್ರ. ಪ್ರತೀ ತಿಂಗಳು ಆರುದ್ರ ನಕ್ಷತ್ರದಂದು ಸಂಜೆ ಸಹಸ್ರದೀಪಾಲಂಕರಣ ಸೇವೆಯ ನಂತರ ಸ್ವಾಮಿಗೆ ಅಭಿಮುಖವಾಗಿ ಶ್ರೀರಾಮಾನುಜರ ಉತ್ಸವ ಮೂರ್ತಿಗೆ ಮೆರವಣಿಗೆ ನಡೆಯುತ್ತದೆ.

**ಪುನರ್ವಸು ನಕ್ಷತ್ರೋತ್ಸವ**

ಶ್ರೀರಾಮನ ಅವತಾರ ನಕ್ಷತ್ರ ಪುನರ್ವಸು. ಪ್ರತೀ ತಿಂಗಳು ಪುನರ್ವಸು ನಕ್ಷತ್ರದಂದು ಸಂಜೆ ಶ್ರೀ ಹರಿಯ ಆಲಯದಲ್ಲಿ ಶ್ರೀ ಸೀತಾರಾಮ ಲಕ್ಷ್ಮಣರೊಂದಿಗೆ, ಆಂಜನೇಯಸ್ವಾಮಿಗೆ ಸಹಸ್ರದೀಪಾಲಂಕರಣ ಸೇವೆಯ ನಂತರ ಮೆರವಣಿಗೆಯನ್ನು ನಡೆಸುತ್ತಾರೆ.

**ಶ್ರವಣ ನಕ್ಷತ್ರೋತ್ಸವ**

ಶ್ರೀ ವೆಂಕಟೇಶ್ವರಸ್ವಾಮಿಯು ಅವತರಿಸಿದ ನಕ್ಷತ್ರವೇ ಶ್ರವಣ. ಪ್ರತೀ ತಿಂಗಳೂ ಶ್ರವಣ ನಕ್ಷತ್ರದಂದು ಸಂಜೆ ಶ್ರೀದೇವಿ ಭೂದೇವಿ ಸಮೇತ ಶ್ರೀ ಮಲೆಯಪ್ಪಸ್ವಾಮಿಗೆ ಸಹಸ್ರದೀಪಾಲಂಕರಣ ಸೇವೆಯ ನಂತರ ಮೆರವಣಿಗೆಯನ್ನು ನಡೆಸುತ್ತಾರೆ.

ಆದರೆ ಕನ್ಯಾಮಾಸ (ಸೆಪ್ಟೆಂಬರ್-ಅಕ್ಟೋಬರ್)ನಲ್ಲಿ ಬರುವ ಶ್ರವಣ ನಕ್ಷತ್ರಕ್ಕೆ ಹತ್ತು ದಿನಗಳ ಮೊದಲಿನಿಂದಲೂ ಶ್ರೀ ಸ್ವಾಮಿಗೆ ಬ್ರಹ್ಮೋತ್ಸವಗಳು ನಡೆಯುತ್ತವೆ.

**ಹುಣ್ಣಿಮೆ ಗರುಡ ಸೇವೆ**

ಪ್ರತೀ ತಿಂಗಳೂ ಹುಣ್ಣಿಮೆಯ ರಾತ್ರಿ 7 ಗಂಟೆಗೆ ಶ್ರೀನಿವಾಸನೊಬ್ಬನಿಗೆ ಮಾತ್ರಾ ಬಪಗಾರದ ಗರುಡೋತ್ಸವ ನಡೆಯುತ್ತದೆ.

ಇವು ಪ್ರತಿ ತಿಂಗಳುನಡೆಯುವ ಮಾಸೋತ್ಸವಗಳು.



# ದೈವೀಗುಣಗಳಿಂದ ದುಃಖರಾಹಿತ್ಯ

**ಡಾ॥ ವೈಷ್ಣವಾಂಘ್ರಿಸೇವಕ್‌ದಾಸ್**
**ಅನುವಾದ : ಡಿ.ಎಸ್.ಭೂಮಿಕ**

ಮನುಷ್ಯ ತನ್ನ ಸಾಮಾಜಿಕ ಸ್ಥಿತಿ ದೃಷ್ಟ್ಯಾ ಅನಂತ ಭರಿತನು. ಪ್ರೇಮದಿಂದಿರುವುದೊಂದೇ ಅಲ್ಲದೆ ಪ್ರೇಮವನ್ನು ಹಂಚುವುದು ಆತನ ಸಾಮಾಜಿಕ ಸ್ವಭಾವ. ಇದು ಕೇವಲ ಆತನು ತನ್ನನ್ನು ತಾನೇ ಆತ್ಮ ಸ್ವರೂಪನೆಂದು ತಿಳಿದುಕೊಂಡಾಗ ಮಾತ್ರ ಸಾಧ್ಯವಾಗುತ್ತದೆ. ಆದರೆ ಸಾಮಾನ್ಯವಾಗಿ ನಾವು ಅವಲೋಕಿಸಿದರೆ ನೂರಕ್ಕೆ ತೊಂಭತ್ತರಷ್ಟು ಜನರು ದುಃಖದಲ್ಲಿ ಮುಳುಗಿದಂತೆ ಕಂಡು ಬರುತ್ತದೆ. ಈ ದುಃಖವು ಸ್ವತಃ ತಾನೇ ತಂದುಕೊಂಡದ್ದೂ ಇರಬಹುದೆಂದೂ ಮತ್ತು ತಾನೇ ಬಂದು ತಲೆ ಮೇಲೆ ಬಿದ್ದದ್ದೂ ಆಗಿರಬಹುದು. ಯಾವುದು ಏನೇ ಆದರೂ ಸರಾಸರಿ ಎಲ್ಲರೂ ದುಃಖದಲ್ಲಿ ಮುಳುಗಿದಂತೆ ಕಂಡು ಬರುತ್ತದೆ. ಕುರುಕ್ಷೇತ್ರದಲ್ಲಿ ಅರ್ಜುನನ ದುಃಖವು ಸಹ ತಾನೇ ತಂದು ಕೊಂಡದ್ದು. ಏಕೆಂದರೆ ಅದು ತಾನು ಯುದ್ಧ ಮಾಡುತ್ತಿರುವುದು ತನ್ನ ಬಂಧುಗಳೊಂದಿಗೇ ಎಂದು ಆತನಿಗೆ 14 ವರ್ಷಗಳ ಹಿಂದೆಯೇ ತಿಳಿದಿತ್ತು. ಹಾಗಿದ್ದಾಗ ಯುದ್ಧ ಭೂಮಿಯಲ್ಲಿ ಯುದ್ಧ ಮಾಡಲು ಬಂದಾಗ ದುಃಖಿತನಾಗುವುದರಲ್ಲಿ ಅರ್ಥವೇನಿದೆ?

ಆದ್ದರಿಂದಲೇ ಭಗವದ್ಗೀತೆ ದುಃಖರಾಹಿತ್ಯಕ್ಕಾಗಿ ಉತ್ತಮವಾದ ಹಲವು ಮಾರ್ಗಗಳನ್ನು ತಿಳಿಸಿದೆ ಅದರಲ್ಲೊಂದು ದೈವೀಗುಣಗಳನ್ನು ಮೈಗೂಡಿಸಿಕೊಳ್ಳುವುದು. ದೈವೀ ಗುಣಗಳನ್ನು ಅಳವಡಿಸಿಕೊಂಡವರಿಗೆ ಆತ್ಮಶಕ್ತಿ ಜಾಗೃತಗೊಳ್ಳುತ್ತದೆ. ಆತ್ಮಶಕ್ತಿ ಜಾಗೃತಗೊಂಡಾಗ ಮನುಷ್ಯನಿಗೆ ವಿರೋಧವೇ ಇರದು. ಆತನು ಸಮಸ್ತ ವಿಜಯಗಳೊಂದಿಗೆ ಮುಂದೆ ಸಾಗುತ್ತಾನೆ. ಹಾಗಾದರೆ ದೈವೀ ಗುಣಗಳೆಂದರಾವುವು? ''ಭಯ ಮುಕ್ತನಾಗಿರುವುದು.ತನ್ನ ಅಸ್ತಿತ್ವವನ್ನು ಪವಿತ್ರವಾಗಿಟ್ಟು ಕೊಳ್ಳುವುದು, ಆಧ್ಯಾತ್ಮಿಕ ಜ್ಞಾನವನ್ನು ಸಂಪಾದಿಸಿಕೊಳ್ಳುವುದು. ದಾನವನ್ನು ಮಾಡುವುದು, ಆತ್ಮನಿಗ್ರಹವನ್ನು ಹೊಂದಿರುವುದು, ಯಜ್ಞವನ್ನು ಮಾಡುವುದು. ವೇದಾಧ್ಯಯನ, ತಪಸ್ಸು ಸರಳವಾಗಿರುವುದು, ಅಹಿಂಸೆ, ಸತ್ಯವನ್ನೇ ನುಡಿಯುವುದು, ಕೋಪರಹಿತನಾಗಿರುವುದು, ತ್ಯಾಗ, ಶಾಂತಿ, ಇತರರ ದೋಷಗಳನ್ನು ಎಣಿಸದಿರುವುದು, ಜೀವಿಗಳ ಕುರಿತು ದಯೆ, ಲೋಭವಿಲ್ಲದಿರುವುದು, ಕೋಮಲತೆಯಿಂದ ವ್ಯವಹರಿಸುವುದು, ಸಂಕೋಚ, ದೃಢನಿಶ್ಚಯ, ತೇಜ, ಕ್ಷೇಮ, ಧೈರ್ಯ ಶುಚಿತ್ವ, ಅಸೂಯೆ ಇಲ್ಲದಿರುವುದು ಗೌರವದ ವಾಂಛೆಲ್ಲ ಇಲ್ಲದಿರುವುದು'' ಅನ್ನುವವೆಲ್ಲಾ ದೈವೀಗುಣಗಳು ಎಂದು ಭಗವದ್ಗೀತೆ (16.1 - 3) ಹೇಳುತ್ತದೆ. ಈ ದೈವೀಗುಣಗಳಲ್ಲಿ ಮೊಟ್ಟಮೊದಲನೇಯದು ಭಯರಹಿತನಾಗಿರುವುದು ಅಂದರೆ ನಿರ್ಭಯನಾಗಿರುವುದು. ಈ ಜಗತ್ತಿನಲ್ಲಿ ಎಲ್ಲರೂ ಭಯದಿಂದಲೇ ಬದಕುತ್ತಾರೆ. ಅಂದರೆ ಅಂತಹದೊಂದು ಮಾನಸಿಕ ಸ್ಥಿತಿಯಲ್ಲಿ ಬದುಕುತ್ತಾರೆ. ಆದರೆ ಯಾರು ಮಾನಸಿಕ ಸುಸ್ಥಿತಿಯಲ್ಲಿರುತ್ತಾರೋ ಅವರು ಪ್ರೇಮದಿಂದಿರುತ್ತಾರೆ. ಅನೇಕ ಅದ್ಭುತ ಸಾಧನೆಗಳನ್ನು ಮಾಡಿದವರ ಜೀವನದಲ್ಲಿ ನಿರ್ಭಯವು ತಾನಾಗಿ ಹೊಡೆದು ಕೊಂಡು ಬರುತ್ತದೆ. ಅಂದರೆ ಅವರಲ್ಲಿ ದೈವೀಣವು ಇದ್ದಂತೆಯೇ ಸರಿ. ದೈವೀಗುಣವು ಇರುವ ಕಾರಣಕ್ಕೆ ಅವರು ದುಃಖರಾಹಿತ್ಯವನ್ನು ಹೊಂದಿದ್ದಾರೆ. ಭಾರತದೇಶಕ್ಕೆ ಸ್ವಾತಂತ್ರ್ಯವನ್ನು ತಂದು ಕೊಟ್ಟ ಗಾಂಧೀಜಿಯೇ ಇರಬಹುದು, ಮೊಟ್ಟ ಮೊದಲ ಬಾರಿಗೆ ಚಂದ್ರನ ಮೇಲೆ ಕಾಲಿಟ್ಟ ನೀಲ್ ಆರ್ಮ್‌ಸ್ಟ್ರಾಂಗೇ ಇರಬಹುದು. ಮೊದಲಿಗೆ ಎವರೆಸ್ಟ್ ಏರಿದ ಎಡ್ಮಂಡ್ ಹಿಲೇರಿಯೇ ಇರಬಹುದು. ಇನ್ನಾರೋ ಅದ್ಭುತವೀರನೇ ಇರಬಹುದು. ಎಲ್ಲರಲ್ಲೂ ನಿರ್ಭಯತ್ವವು ಕಂಡು ಬರುತ್ತದೆ. ಆದ್ದರಿಂದ ಯುವಕರು ಮೊದಲು ಕಲಿಯಬೇಕಾದ ವಿಷಯವು ನಿರ್ಭಯತ್ವವು. ಸೋಲುತ್ತೇನೇನೋ, ನಗುತ್ತಾರೇನೋ, ನಷ್ಟವಾಗುವುದೇನೋ ಮತ್ತಾವುದೋ ಭಾವನೆಗಳನ್ನು ಹೊಂದಿರುವುದೇ ಭಯವು. ''ಮನುಷ್ಯ ಮೊದಲೂ ಗೆಲ್ಲಬೇಕಾಗಿರುವುದು ತನ್ನ ಮನಸನ್ನೇ ಹೊರತು ಮತ್ತಾವ ಹೊರವಸ್ತುವನಲ್ಲ'' ಎಂದು ಚಾಣಕ್ಯನೆಂಬ ಪಂಡಿತನು ಹೇಳುತ್ತಾನೆ. ಯುದ್ಧಕ್ಕೆ ತೆರಳುವ ಯೋಧನು, ಇಂಟರ್‌ವ್ಯೂಗೆ ಹೋಗುವ ಯುವಕನು, ಇಲ್ಲವೇ ಪರೀಕ್ಷೆಗೆ ಹೊರಡಲಿರುವ ವಿದ್ಯಾರ್ಥಿಯ ಸೋಲು-ಗೆಲುವುಗಳು ಮೊದಲೇ ನಿರ್ಣಯ ಗೊಳ್ಳುತ್ತವೆ. ಅದು ಆಯಾ ವ್ಯಕ್ತಿಗಳ ಮನಸ್ಸಿನಲ್ಲಿಯೇ ನಿರ್ಣಯಿತಗೊಳ್ಳುತ್ತವೆ. ಗೆದ್ದೇ ತೀರುತ್ತೇನೆಂದು ತೆರಳುವವರು ತಪ್ಪದೇ ಗೆಲ್ಲುತ್ತಾರೆ ಆತನು ''ಅಭಯ'' ವೆಂಬ ಭಯರಾಹಿತ್ಯದ ದೈವೀಗುಣದಲ್ಲಿರುತ್ತಾನಾದ್ದರಿಂದ ವಿಜಯವನ್ನು ಸಾಧಿಸಿಯೇ ತೀರುತ್ತಾನೆ. ''ನಾನು ಸಾಧಿಸಬಲ್ಲೆ'' ''ನಾನು ಸಾಧಿಸಲಾರೆ'' ಎಂಬ ಎರಡು ಭಾವಗಳು ನಿಜವೇ ಎಂದು ಪ್ರಪಂಚ ಪ್ರಖ್ಯಾತಿ ಹೊಂದಿರುವ ಮೋಟಾರುಕಾರುಗಳ ಯಜಮಾನ ಹೆನ್ರಿ ಫೋರ್ಡ್ ಎನ್ನುತ್ತಾನೆ. ಅಂದರೆ ಜಯಾಪಜಯಗಳನ್ನು ನೀನೇ ನಿರ್ಣಯಿಸಿಕೊಳ್ಳುತ್ತೀ ಗೀತೆಯ ಮೂಲಕ ದೈವೀ ಗುಣಗಳನ್ನು ಹೊಂದಿದರೆ ವಿಜಯವು ನಿನ್ನದಾಗುತ್ತದೆ. ಅದಲ್ಲದೆ ಮನಸ್ಸಿನಲ್ಲಿ ಭಯವನ್ನಿಟ್ಟು ಕೊಂಡವನು ಖಂಡಿತವಾಗಿ ಅಪಜಯವನ್ನಾಶ್ರಯಿಸುತ್ತಾನೆ.ಭಗವದ್ಗೀತೆಯ 16 ನೇ ಅಧ್ಯಾಯದಲ್ಲಿರುವ ಮೊದಲ ಮೂರು ಶ್ಲೋಕಗಳನ್ನು ಕಂಠಸ್ಥ ಮಾಡಿ ಪ್ರತಿದಿನ 2-3 ಸಾರಿ ಗಮನವಿಟ್ಟು ಓದಿದರೆ ಆ ಶ್ಲೋಕದ ಉಚ್ಛಾರಣೆಯ ಪ್ರಭಾವದಿಂದ ದೈವೀಗುಣಗಳು ನಿಮ್ಮಲ್ಲಿ ನೆಲೆಯೂರುತ್ತವೆ. ಇನ್ನು ನೀವು ದುಃಖರಾಹಿತ್ಯರಾಗಿ ವಿಜಯ ಸೀಮೆಯಲ್ಲಿ ಪಯಣಿಸುತ್ತೀರಿ.

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಸ್ವಾಮಿಯ ಆರ್ಜಿತ ಸೇವೆಗಳು - ತಿರುಮಲೆ

## ಆರ್ಜಿತ ಸೇವೆಗಳು/ ಉತ್ಸವಗಳು

| ಸಂ. | ಸೇವೆ / ಉತ್ಸವದ ಹೆಸರು | ದಿನ | ಸೇವಾ / ಪ್ರವೇಶ ಸಮಯ | ಪ್ರವೇಶ | ಟಿಕೆಟ್ಟು ಬೆಲೆ |
|---|---|---|---|---|---|
| | **ಸೇವೆಗಳು** | | | | |
| 1. | ಸುಪ್ರಭಾತ | ಪ್ರತಿದಿನ | ಬೆ. 2.00-3.00 ಗಂ|| | 1 | ರೂ. 120.00 |
| 2. | ತೋಮಾಲ ಸೇವೆ (ಮಂಗಳ, ಬುಧ, ಗುರು) | ಪ್ರತಿದಿನ | ಬೆ. 3.00-3,30 ಗಂ|| | 1 | ರೂ. 220.00 |
| 3. | ಅರ್ಚನೆ (ಮಂಗಳ, ಬುಧ, ಗುರು) | ಪ್ರತಿದಿನ | ಬೆ. 4.00-4.30 ಗಂ|| | 1 | ರೂ. 220.00 |
| | **ನಿತ್ಯ ಉತ್ಸವಗಳು** | | | | |
| 4. | ಕಲ್ಯಾಣೋತ್ಸವ | ಪ್ರತಿದಿನ | ಮ. 10.00-12.00 ಗಂ|| | 2 | ರೂ. 1,000.00 |
| 5. | ಡೋಲೋತ್ಸವ (ಊಂಜಲ್ ಸೇವೆ) | ಪ್ರತಿದಿನ | ಮ. 11.00-1.00 ಗಂ|| | 1 | ರೂ. 200.00 |
| 6. | ಆರ್ಜಿತ ಬ್ರಹ್ಮೋತ್ಸವ | ಪ್ರತಿದಿನ | ಮ. 12.30-2.00 ಗಂ|| | 1 | ರೂ. 200.00 |
| 7. | ವಸಂತೋತ್ಸವ | ಪ್ರತಿದಿನ | ಮ. 2.30-3.00 ಗಂ|| | 1 | ರೂ. 300.00 |
| 8. | ಸಹಸ್ರದೀಪಾಲಂಕರಣ ಸೇವೆ | ಪ್ರತಿದಿನ | ಸಾ. 5.00-5.30 ಗಂ|| | 1 | ರೂ. 200.00 |
| | **ವಾರದ ಸೇವೆಗಳು** | | | | |
| 9. | ವಿಶೇಷಪೂಜೆ | ಸೋಮವಾರ | ಬೆ. 6.00-6,30 ಗಂ|| | 1 | ರೂ. 600.00 |
| 10. | ಅಷ್ಟದಳ ಪಾದಪದ್ಮಾರಾಧನೆ | ಮಂಗಳವಾರ | ಬೆ. 5.00-5.30 ಗಂ|| | 1 | ರೂ. 1,250.00 |
| 11. | ಸಹಸ್ರ ಕಲಶಾಭಿಷೇಕ | ಬುಧವಾರ | ಬೆ. 5.00-5.30 ಗಂ|| | 1 | ರೂ. 850.00 |
| 12. | ತಿರುಪ್ಪಾವಡ ಸೇವೆ | ಗುರುವಾರ | ಬೆ. 5.00-5.30 ಗಂ|| | 1 | ರೂ. 850.00 |
| 13. | ವಸ್ತ್ರಾಲಂಕಾರ ಸೇವೆ | ಶುಕ್ರವಾರ | ಬೆ. 3.00-4.00 ಗಂ|| | 2 (ಗಂಡ ಹೆಂಡತಿ) | ರೂ. 12,250.00 |
| ಅ. | ಪೂರಾಭಿಷೇಕ (12 ವರ್ಷದ ಮಕ್ಕಳನ್ನು ಅನುಮತಿಸುವುದಿಲ್ಲ) | ಶುಕ್ರವಾರ | ಬೆ. 3.00-4.00 ಗಂ|| | 1 | ರೂ. 750.00 |
| 14. | ನಿಜಪಾದ ದರ್ಶನ | ಶುಕ್ರವಾರ | ಬೆ. 4.30-5.30 ಗಂ|| | 1 | ರೂ. 200.00 |
| | **ವಾರ್ಷಿಕ ಸೇವೆಗಳು / ಪ್ರತ್ಯೇಕ ಸಂದರ್ಭ ಸೇವೆಗಳು** | | | | |
| 15. | ತೆಪ್ಪೋತ್ಸವ | ಫೆಬ್ರವರಿ/ ಮಾರ್ಚ್ | ಸಾ.6.00-7-00 ಗಂ|| | 1 | ರೂ. 500.00 |
| 16. | ವಸಂತೋತ್ಸವ | ಮಾರ್ಚ್/ ಏಪ್ರಿಲ್ | ಮ. 1.00-2.00 ಗಂ|| | 1 | ರೂ. 300.00 |
| 17. | ಪದ್ಮಾವತಿ ಪರಿಣಯ | ಮೇ | ಸಾ. 4-00-4.30 ಗಂ|| | 1 | ರೂ. 1,000.00 |
| 18. | ಅಭಿಧೇಯಕ ಅಭಿಷೇಕ | ಜೂನ್ | ಬೆ. 8-00 ಗಂ|| | 1 | ರೂ. 400.00 |
| 19. | ಪುಷ್ಪಪಲ್ಲಕಿ | ಜುಲೈ | ಸಾ. 6-30-7-30 ಗಂ|| | 1 | ರೂ. 200.00 |
| 20. | ಪವಿತ್ರೋತ್ಸವ | ಆಗಸ್ಟ್ | ಬೆ. 8-00-9-00 ಗಂ|| | 1 | ರೂ. 2,500.00 |
| 21. | ಪುಷ್ಪಯಾಗ | ನವೆಂಬರ್ | ಬೆ. 8-00-9-00 ಗಂ|| | 1 | ರೂ. 700.00 |
| 22. | ಕೋಯಿಲ್ ಆಳ್ವಾರ್ ತಿರುಮಂಜನ | ವರ್ಷಕ್ಕೆ 4 ಬಾರಿ | ಬೆ. 10-00-11-00 ಗಂ|| | 1 | ರೂ. 300.00 |

Call Centre : 0877–2233333,
0877–2277777
Toll free : 18004254141,
1800425333333
What's app : 9399399399
e-mail : helpdesk@tirumala.org

ಮೇಲಿನ ಸೇವೆಗಳಿಗೆ ಸಂಬಂಧಿಸಿದ ಆನ್‌ಲೈನ್ ನಲ್ಲಿ ಮಾತ್ರವೇ ಟಿಕೆಟ್ ಬುಕ್ ಮಾಡಿಕೊಳ್ಳಬೇಕು. ಇತರ ವಿವರಗಳಿಗೆ : ತಿ.ತಿ.ದೇ. ವೆಬ್‌ಸೈಟ್ : www.ttdsevaonline.com / www.tirumala.org ನು ಸಂಪ್ರದಿಸಬೇಕು.











# ಭಕ್ತರ ಸೇವೆಯಲ್ಲಿ.......

**ತಿರುಮಲೆ, 19 ಡಿಸೆಂಬರ್ 2019 ಗುರುವಾರ :**

ಸ್ವಾಮಿಯವರ ದರ್ಶನಕ್ಕಾಗಿ ಬಂದ ವಿಶಾಖ ಶಾರದ ಪೀಠಾಧಿಪತಿ ಶ್ರೀಶ್ರೀಶ್ರೀ ಸ್ವರೂಪಾನಂದೇಂದ್ರ ಸ್ವಾಮಿಯವರಿಗೆ ತಿ.ತಿ.ದೇ. ಪಾಲಕ ಮಂಡಳಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ, ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಶ್ರೀಎ.ವಿ. ಧರ್ಮಾರೆಡ್ಡಿ ಗುರುವಾರ ಮಾರ್ಯಾದೆ ಪೂರ್ವಕವಾಗಿ ಭೇಟಿಯಾದರು. ಅಧ್ಯಕ್ಷರು ಮೀಡಿಯಾದೊಂದಿಗೆ ಮಾತನಾಡುತ್ತಾ ಸನಾತನ ಧರ್ಮ ಪ್ರಚಾರದ ಭಾಗವಾಗಿ ಪ್ರತಿ ತಿಂಗಳು ತಿರುಮಲೆ ಅಥವಾ ತಿರುಪತಿಯಲ್ಲಿ ಪೀಠಾಧಿಪತಿಯರೊಂದಿಗೆ ಧಾರ್ಮಿಕ ಕಾರ್ಯಕ್ರಮಗಳನ್ನು ಏರ್ಪಾಟು ಮಾಡುತ್ತೇವೆಂದರು.

**ಡಿಸೆಂಬರ್ 2019, ತಿರುಮಲೆ 28 ಶನಿವಾರ :**

ತಿರುಮಲೆ ಸ್ವಾಮಿಯವರ ದರ್ಶನಕ್ಕೆ ಬರುವ ಭಕ್ತರಿಗೆ ತಿರುಪತಿಯಲ್ಲಿ ವಸತಿ ಸೌಕರ್ಯವನ್ನು ಕಲ್ಪಿಸುವುದಕ್ಕಾಗಿ ಅಲಿಪಿರಿ ಬಳಿ ತಿ.ತಿ.ದೇ. ಪಾಲಕ ಮಂಡಳಿ ಅಧ್ಯಕ್ಷರು ಶ್ರೀ ವೈ. ವಿ. ಸುಬ್ಬಾರೆಡ್ಡಿ ಇಂಜಿನಿಯರ್ ಅಧಿಕಾರಿಗಳೊಂದಿಗೆ ಸೇರಿ ಸ್ಥಳವನ್ನು ಪರಿಶೀಲಿಸಿದರು.

ಈ ಸಂದರ್ಭವಾಗಿ ಅವರು ಮಾತನಾಡುತ್ತಾ ಅಲಿಪಿರಿಯಲ್ಲಿ ಭಕ್ತರಿಗೆ ವಸತಿ ಏರ್ಪಾಟು ಮಾಡಿದರೆ ತಿರುಮಲೆಯಲ್ಲಿ ರದ್ದಿ ಅಧಿಕವಾಗಿರುವ ಸಮಯದಲ್ಲಿ ಟೈಂಸ್ಲಾಟ್ ನೀಡಿದರೆ ತಿರುಪತಿಯಲ್ಲಿಯೇ ವಸತಿ ಕಲ್ಪಿಸುವ ಅವಕಾಶವಿದೆ ಎಂದರು. ಇದರಲ್ಲಿ ಭಾಗವಾಗಿ ಅಲಿಪಿರಿಯಲ್ಲಿ ನಿರ್ಮಿಸುವ ವಸತಿ ಸಮುದಾಯದಲ್ಲಿ ಅನ್ನಪ್ರಸಾದ, ಧಾರ್ಮಿಕ, ಕಾರ್ಯಕ್ರಮಗಳು, ಭಜನೆಗಳು, ಧ್ಯಾನ, ಭಕ್ತಿ ಸಂಗೀತ ಕಾರ್ಯಕ್ರಮಗಳನ್ನು ಏರ್ಪಾಟು ಮಾಡಲಾಗುತ್ತದೆ ಎಂದು ವಿವರಿಸಿದರು.





### ಡಿಸೆಂಬರ್ 2019, ತಿರುಮಲೆ 27 ಶುಕ್ರವಾರ:

ತಿರುಮಲೆಯಲ್ಲಿರುವ ಜಲಾಶಯಗಳಲ್ಲಿ ಮುಂಬರುವ ಎರಡು ವರ್ಷಗಳಿಗೆ ಸರಿಹೋಗುವಷ್ಟು ನೀರು ಇದೆಯೆಂದು ತಿ.ತಿ.ದೇ., ಪಾಲಕಮಂಡಳಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ ತಿಳಿಸಿದರು. ತಿರುಮಲೆಯಲ್ಲಿರುವ ಕುಮಾರಧಾರ, ಪಸುಪುಧಾರ ಜಲಾಶಯಗಳಲ್ಲಿ ಶುಕ್ರವಾರ ಅಧಿಕಾರಿಗಳೊಂದಿಗೆ ಸೇರಿ ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಅವರು ಮೀಡಿಯಾ ಜೊತೆ ಮಾತನಾಡುತ್ತಾ 10 ವರ್ಷಗಳಲ್ಲಿ ಮೊದಲ ಬಾರಿ ತಿರುಮಲೆಯಲ್ಲಿರುವ ಡ್ಯಾಮ್‌ಗಳು ಪೂರ್ತಿಯಾಗಿ ತುಂಬಿವೆ. ಸ್ವಾಮಿಯವರ ಆಶೀರ್ವಾದದಿಂದ ಈ ವರ್ಷ ಚೆನ್ನಾಗಿ ಮಳೆ ಬರುತ್ತಿರುವುದರಿಂದ ತಿರುಮಲೆಯಲ್ಲಿರುವ ಕುಮಾರಧಾರ, ಪಸುಪುಧಾರ, ಆಕಾಶಗಂಗ, ಪಾಪವಿನಾಶನಂ, ತಿರುಪತಿಯಲ್ಲಿರುವ ಕಲ್ಯಾಣಿಡ್ಯಾಮ್ ಜಲಾಶಯಗಳು ನೀರಿನಿಂದ ತುಂಬಿವೆ. ಇನ್ನೂ ಮಳೆ ಬರುವ ಸಾಧ್ಯತೆ ಇದರಿಂದ ನೀರಿನ ಮಟ್ಟ ಇನ್ನೂ ಏರಲಿದೆ. ಇದರೊಂದಿಗೆ ತಿರುಮಲೆಗೆ ಶಾಶ್ವತವಾಗಿ ನೀರಿನ ಅವಶ್ಯಕತೆಯನ್ನು ನಿವಾರಿಸಲು ರೂ. 400 ಕೋಟಿಯಿಂದ ಬಾಲಾಜಿ ರಿಜರ್ವಾಯರ್ ಅನ್ನು ಉಪಯೋಗಿಸಿಕೊಳ್ಳವಂತೆ ತಿ.ತಿ.ದೇ. ಪಾಲಕಮಂಡಳಿ ತೀರ್ಮಾನಿಸಿದೆ ಎಂದು ತಿಳಿಸಿದರು.



### ಡಿಸೆಂಬರ್ 2019, ತಿರುಮಲೆ 28 ಶನಿವಾರ:

ವೆಂಕಟಾಚಲ ಮಹಾತ್ಮ್ಯೆಯಲ್ಲಿ ಶ್ರೀನಿವಾಸನ ವೃತ್ತಾಂತವನ್ನು ತಿಳಿಸುವಂತೆ ರೂಪಿಸಿದ ಚಿತ್ರಕಲೆಯನ್ನು ತಿ.ತಿ.ದೇ. ಪಾಲಕ ಮಂಡಳಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ ಶನಿವಾರ ತಿರುಮಲೆಯಲ್ಲಿರುವ ಅನ್ನಮಯ್ಯ ಭವನದಲ್ಲಿ ಆವಿಷ್ಕರಿಸಿದರು.



*Edited and Published on behalf of T.T.Devasthanams by* ***Dr. K. Radha Ramana,*** *M.A., M.Phil., Phd., Chief Editor, T.T.D. and Printed at T.T.D. Press by* ***Sri R.V. Vijaya Kumar,*** *B.A., B.Ed., Dy. E.O. (Publications & Press), T.T.D. Press, Tirupati - 517 507.*

# ತಿರುಪತಿ
# ಶ್ರೀ ಕಪಿಲೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

**14-02-2020 ರಿಂದ**
**23-02-2020 ರ ವರೆಗೆ**





**14-02-2020 ಶುಕ್ರವಾರ**
ಹಗಲು: ಧ್ವಜಾರೋಹಣ
ರಾತ್ರಿ: ಹಂಸವಾಹನ

**15-02-2020 ಶನಿವಾರ**
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ

**16-02-2020 ಭಾನುವಾರ**
ಹಗಲು: ಭೂತವಾಹನ
ರಾತ್ರಿ: ಸಿಂಹವಾಹನ

**17-02-2020 ಸೋಮವಾರ**
ಹಗಲು: ಮಕರವಾಹನ
ರಾತ್ರಿ: ಶೇಷವಾಹನ

**18-02-2020 ಮಂಗಳವಾರ**
ಹಗಲು: ತಿರುಚ್ಚಿ ಉತ್ಸವ
ರಾತ್ರಿ: ಅಧಿಕಾರನಂದಿ ವಾಹನ

**19-02-2020 ಬುಧವಾರ**
ಹಗಲು: ವ್ಯಾಘ್ರವಾಹನ
ರಾತ್ರಿ: ಗಜವಾಹನ

**20-02-2020 ಗುರುವಾರ**
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಅಶ್ವವಾಹನ

**21-02-2020 ಶುಕ್ರವಾರ**
ಹಗಲು: ರಥೋತ್ಸವ
ರಾತ್ರಿ: ನಂದಿವಾಹನ (ಮಹಾಶಿವರಾತ್ರಿ)

**22-02-2020 ಶನಿವಾರ**
ಹಗಲು: ಪುರುಷಾಮೃಗ ವಾಹನ
ರಾತ್ರಿ: (ಕಲ್ಯಾಣೋತ್ಸವ) ತಿರುಚ್ಚಿ ಉತ್ಸವ

**23-02-2020 ಭಾನುವಾರ**
ಹಗಲು:
ಸೂರ್ಯಪ್ರಭವಾಹನದಲ್ಲಿ ನಟರಾಜಸ್ವಾಮಿ,
ತ್ರಿಶೂಲಸ್ನಾನ
ರಾತ್ರಿ: ಧ್ವಜಾವರೋಹಣ
ರಾವಣಾಸುರ ವಾಹನ

SAPTHAGIRI (KANNADA) ILLUSTRATED MONTHLY Published by Tirumala Tirupati Devasthanams
printing on 25-01-2020. Regd. with the Registrar of Newspapers under "RNI" No.10742, Postal Regd.No.TRP/14 - 2018-2020
Licensed to post without prepayment No.PMGK/RNP/WPP-04/2018-2020

